
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜೂನ್ 30, 2010 ರೂ. 12/-



ಮೋದಿಯ ದಲಿತ ದ್ವೇಷ








ಸಚಿವಗಿರಿ

ಜೆಪಿಯಲ್ಲೇ ವಿರೋಧ



ಯಾರಿದು ನಕ್ಸಲ್ ಗೊರಬಾಳ್



ಬಸವನಗುಡಿ


ಶಾಸಕ ನಾಪತ್ತೆ

ಸೂರು ವಿ

ಶಶಿಧರ ಪ್ರಸಾದ್ ಜೈಲಿಗೆ?




ದಿರುಕಳ್ಳತನ: ಪಾಲೇಮಾರ್‌ಗೆ ಪಾಲು?




ನವಕರ್ನಾಟಕದ ನಾಡಪ್ರಭುಗಳು ಮಿತ್ತಲ್, ಪೋಸ್ಕೋ...

ಜಾಗತಿಕ ಹೂಡಿಕೆದಾರರ ಸಮಾವೇಶ ಅತ್ಯಂತ ಯಶಸ್ವಿಯಾಗಿ ಮುಕ್ತಾಯವಾಗಿ ಕರ್ನಾಟಕಕ್ಕೆ ನಾಲ್ಕೂವರೆ ಲಕ್ಷ ಕೋಟಿ ರೂಪಾಯಿ ಬಂಡವಾಳ ಹರಿದು ಬರುತ್ತದೆಂದೂ, 8.5 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗುತ್ತದೆಂದೂ ಬಿಜೆಪಿ ಸರ್ಕಾರ ಕೊಚ್ಚಿಕೊಳ್ಳುತ್ತಿದೆ. ಸರ್ಕಾರದ ಈ "ಬಂಡ್ವಾಳವಿಲ್ಲದ ಬಡಾಯಿ"ಯನ್ನು ಕಿಂಚಿತ್ತೂ ವಿಮರ್ಶಿಸದ ಮಾಧ್ಯಮಗಳು ಸರ್ಕಾರ ಹೇಳಿದ್ದಕ್ಕೆ ತಮ್ಮದೂ ಒಂದಷ್ಟು ಉತ್ಪ್ರೇಕ್ಷೆಯನ್ನು ಸೇರಿಸುತ್ತಿವೆ. ಹೀಗೆ ಸರ್ಕಾರ ಮತ್ತು ಮಾಧ್ಯಮಗಳು ಜೊತೆಗೂಡಿ ನಡೆಸಿರುವ "ಜುಗಲ್‌ಬಂದಿ"ಯಲ್ಲಿ ಸತ್ಯ ಅನಾಥವಾಗುತ್ತಿದೆ. ಸರ್ಕಾರದ ವರಸೆಗಳನ್ನು ನೇರ ಮತ್ತು ದಿಟ್ಟವಾಗಿ ಬಯಲುಗೊಳಿಸಬೇಕಾದ ಮಾಧ್ಯಮಗಳು ಎಷ್ಟರಮಟ್ಟಿಗೆ ತಮ್ಮ ವೃತ್ತಿನಿಷ್ಠೆಯನ್ನು ಮಾರಿಕೊಂಡಿವೆ ಎಂದರೆ ಒಂದು ಸಂದರ್ಶನದಲ್ಲಿ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ ಈ ನಾಲ್ಕೂವರೆ ಲಕ್ಷ ಕೋಟಿಗಳಲ್ಲಿ ಶೇ.50ರಷ್ಟು ಮಾತ್ರ ವಾಸ್ತವವಾಗಿ ಹರಿದುಬರಬಹುದು ಎಂದು ಹೇಳುತ್ತಿದ್ದರೂ ಒಪ್ಪಿಕೊಳ್ಳಲು ಮಾಧ್ಯಮ "ರಂಗ" ಸಿದ್ಧವಿರಲಿಲ್ಲ! ಏಕೆಂದರೆ ಸರ್ಕಾರವು ಅಂದಾಜು 50 ಕೋಟಿ ರೂ.ಗಳಷ್ಟು ಹಣವನ್ನು ಕೇವಲ ಮಾಧ್ಯಮಗಳ ಜಾಹೀರಾತಿಗೆ ಎತ್ತಿಟ್ಟಿತ್ತು.

ವಾಸ್ತವವಾಗಿ ಹೂಡಿಕೆದಾರದ ಸಮ್ಮೇಳನದಿಂದ ಕರ್ನಾಟಕದ ಜನತೆಗೆ ಅಪಾರ ಲಾಭವಾಗುತ್ತದೆ ಎಂದು ಜನರನ್ನು ನಂಬಿಸಲು ಸರ್ಕಾರ ಮುಂದಿಡುತ್ತಿರುವ ವಾದ ಅದು 8.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂಬುದೇ ಆಗಿದೆ. ಈ ಸಮಾವೇಶ ಮುಗಿದ ದಿನ ಸರ್ಕಾರ ಹೇಳಿದ್ದು 4 ಲಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು. ಆದರೆ ರಾತ್ರೋರಾತ್ರಿ ಅದನ್ನು 8.5 ಲಕ್ಷಕ್ಕೆ ಏರಿಸಿದ್ದರ ಹಿಂದೆ ನಡೆದ





ಇಂದ್ರಜಾಲವೆಲ್ಲಾ ಸಂಖ್ಯಾಗಾರುಡಿಯೇ ಹೊರತು ಮತ್ತೇನಲ್ಲ! ಸರ್ಕಾರದ ಎರಡನೇ ವಾದ ಇದರಿಂದ ರಾಜ್ಯದ ಅಭಿವೃದ್ಧಿಯಾಗುತ್ತದೆ ಎಂಬುದು. ಈ ಎರಡು ವಾದದ ಬಗೆ ಇದೇ ಅಂಕಣದಲ್ಲಿ ಸಮಾವೇಶದ ಮುಂಚೆ ಕೂಲಂಕಷ ವಿಶ್ಲೇಷಣೆ ಮಾಡಿದ್ದದ್ದು ಓದುಗರಿಗೆ ನೆನಪಿರಬಹುದು! ಈಗ ಸಮಾವೇಶ ಮುಗಿದು ಸಮಾವೇಶದ ಸಾಧನೆಗಳ ಬಗ್ಗೆ ಸರ್ಕಾರ ನೀಡಿರುವ ಅಂಕಿಅಂಶ ಎದುರಿಗಿರುವುದರಿಂದ ಕರ್ನಾಟಕದ ಜನತೆಗೆ ಸಿಕ್ಕಿದ್ದೇನು ಮತ್ತು ಬಿಜೆಪಿ ಸರ್ಕಾರ ಹಾಗೂ ಹೂಡಿಕೆದಾರರೆಂಬ ರಣಹದ್ದುಗಳು ಮುಕ್ಕಿದ್ದೇನು ಎಂಬುದನ್ನೂ ನೋಡೋಣ!

ಸರ್ಕಾರ ಅಂತಿಮವಾಗಿ ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ ಒಟ್ಟು 350ಕ್ಕೂ ಹೆಚ್ಚು ಯೋಜನೆಗಳಿಂದ 4.5 ಲಕ್ಷ ಕೋಟಿ ರೂ. ಬಂಡವಾಳ ಹರಿದುಬರಲಿದೆ. ಅದರಲ್ಲಿ ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಶೇ.33ಕ್ಕಿಂತಲೂ ಹೆಚ್ಚು (102) ಯೋಜನೆಗಳು ಜಾರಿಗೆ ಬರಲಿವೆ. ಇನ್ನುಳಿದದ್ದರಲ್ಲಿ ಪ್ರಧಾನ ಪಾಲು ಬಳ್ಳಾರಿ ವಲಯಕ್ಕೆ ಹೋಗಲಿದೆ.

ಇನ್ನು ಉದ್ಯೋಗ ಸೃಷ್ಟಿಯ ವಿಷಯಕ್ಕೆ ಬರುವುದಾದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೂಡಿಕೆಯಾಗಲಿರುವ ಬಂಡವಾಳದಿಂದ 2,41, 290 ಉದ್ಯೋಗಗಳು, ಬಳ್ಳಾರಿಯಲ್ಲಿ ಹೂಡಿಕೆಯಾಗಲಿರುವ 1,67, 387 ಕೋಟಿ ಬಂಡವಾಳ ಹೂಡಿಕೆಯಿಂದ 98,856 ಉದ್ಯೋಗಗಳು, ಬೆಂಗಳೂರು ನಗರ ಜಿಲ್ಲೆಯಲ್ಲಿ ಹೂಡಿಕೆಯಾಗಲಿರುವ 7882.74 ಕೋಟಿ ಬಂಡವಾಳದಿಂದ 1,00,028 ಉದ್ಯೋಗಗಳು ಸೃಷ್ಟಿಯಾಗಲಿವೆಯೆಂದು ಹೇಳಲಾಗುತ್ತಿದೆ. ಹೀಗೆ ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಒಟ್ಟಾರೆ ಉದ್ಯೋಗಗಳ ಸಂಖ್ಯೆ 4.5 ಲಕ್ಷವನ್ನು ದಾಟುವುದಿಲ್ಲ. ಇದು 8.5 ಲಕ್ಷವಾಗುವ ಬಗೆ ಹೇಗೆಂಬುದನ್ನು ಆ "ನಿರಾಣಿ"ಯೇ ಹೇಳಬೇಕು.

ಇರಲಿ. ಈ ನಾಲ್ಕೂವರೆ ಲಕ್ಷ ಉದ್ಯೋಗವೆಂಬುದಾದರೂ ಎಷ್ಟು ನಿಜ? ಮೊದಲನೆಯದಾಗಿ ಮೇಲಿನ ಅಂಕಿಅಂಶಗಳ ಪ್ರಕಾರವೇ ಇದರಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಬೆಂಗಳೂರು ನಗರ ಮತ್ತು ಗ್ರಾಮಾಂತರ ವಲಯದಲ್ಲಿ ಸೃಷ್ಟಿಯಾಗಬೇಕು. ಈ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುವುದು ಗಾರ್ಮೆಂಟ್, ಲೆದರ್, ಇನ್ನಿತರ ಮಾನವ ಶ್ರಮವನ್ನು ಹೆಚ್ಚಿಗೆ ಬೇಡುವ ವಲಯಗಳಲ್ಲಿ. ಆದರೆ ಈ ವಲಯದಲ್ಲಿ ಸರ್ಕಾರದ ಪ್ರಕಾರವೇ ಯಾವ ಬಗೆಯ ಹೂಡಿಕೆಗಳು ಬರುತ್ತಿವೆ? ದೇವನಹಳ್ಳಿಯ ಬಳಿ ಒಂದು ಲಕ್ಷ ಕೋಟಿ ಹೂಡಿಕೆಯಲ್ಲಿ ಐಟಿ ವಲಯ ಮತ್ತು ಏರೋನ್ಯಾಟಿಕ್ ವಲಯ. ಆದರೆ ಇವು ಎಷ್ಟು ಉದ್ಯೋಗಗಳನ್ನು ಸೃಷ್ಟಿಸಬಹುದು? 1991ರಿಂದ ಈವರೆಗೆ ಬೆಂಗಳೂರಿನಲ್ಲಿ 2 ಲಕ್ಷ ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆ ಮಾಡಿರುವ 200ಕ್ಕೂ ಹೆಚ್ಚು ದೇಶೀಯ ಮತ್ತು ವಿದೇಶೀಯ ಸಾಫ್ಟ್‌ವೇರ್ ಕಂಪನಿಗಳು ಕಳೆದ ಇಪ್ಪತ್ತು ವರ್ಷದಲ್ಲಿ ಬೆಂಗಳೂರಿನಲ್ಲಿ 2 ಲಕ್ಷ ಉದ್ಯೋಗಗಳನ್ನು ಮಾತ್ರ ಸೃಷ್ಟಿಸಿವೆಯಷ್ಟೆ.

ಹೀಗಾಗಿ ಬೆಂಗಳೂರಿನ ಸುತ್ತಮುತ್ತಲೂ ಆಗುತ್ತಿರುವ ಹೂಡಿಕೆಯಿಂದ 3 ಲಕ್ಷ ಉದ್ಯೋಗಗಳು ಸೃಷ್ಟಿಯಾಗುತ್ತದೆ ಎಂಬುದು ಶುದ್ಧ ಬೊಗಳೆಯೇ ವಿನಃ ಬೇರೇನೂ ಅಲ್ಲ.

ಇನ್ನು ಬಳ್ಳಾರಿ ವಲಯದಲ್ಲಿ ಹೂಡಿಕೆಯಾಗಲಿರುವ ಬಂಡವಾಳ ಮತ್ತು ಉದ್ಯೋಗ ಸೃಷ್ಟಿಯ ಕಥೆ. ವಾಸ್ತವವಾಗಿ ಈ ಹೂಡಿಕೆದಾರರ ಸಮ್ಮೇಳನ ಕಬ್ಬಿಣ ಮತ್ತು ಉಕ್ಕಿನ ಉದ್ದಿಮೆಗಳ ಸಮ್ಮೇಳನವೇ ಆಗಿತ್ತು. ವಿಶ್ವದ ನಂ.1 ಸ್ಟೀಲ್ ಉದ್ಯಮಿಯಾದ ಲಕ್ಷ್ಮಿ ಮಿತ್ತಲ್ ಬಳ್ಳಾರಿಯ ತುಂಗಭದ್ರ ಡ್ಯಾಂ ಸಮೀಪದಲ್ಲಿರುವ ಕುಡತಿನಿಯ ಬಳಿ 40,000 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆ ಮಾಡಿ 6 ಮಿಲಿಯನ್ (60 ಲಕ್ಷ) ಟನ್ ಸ್ಟೀಲ್ ಉತ್ಪಾದನೆ ಮಾಡುವ ಘಟಕ ಸ್ಥಾಪನೆ ಮಾಡುವುದು ಹೆಚ್ಚುಕಡಿಮೆ ಸಾಕಾರವಾಗಲಿದೆ. ಅದೇರೀತಿ ದ. ಕೊರಿಯಾದ ಪೋಸ್ಕೋ ಕಂಪನಿ ಇದೇ ಬಳ್ಳಾರಿ ವಲಯದಲ್ಲಿ 35,000 ಕೋಟಿ ರೂ. ಹೂಡಿಕೆ ಮಾಡಿ 6 ಮಿಲಿಯನ್ ಟನ್ನಿನಷ್ಟು ಸಾಮರ್ಥ್ಯವಿರುವ ಘಟಕ ಸ್ಥಾಪನೆ ಮಾಡುವ ಪ್ರಸ್ತಾವನೆಗೆ ಸರ್ಕಾರ ಸಹಿ ಹಾಕಿದೆ. ಹಾಗೆಯೇ ಪೋಸ್ಕೋ ಮತ್ತು ಮಿತ್ತಲ್ ಎರಡೂ ಕಂಪನಿಗಳಿಗೆ ತುಂಗಭದ್ರ ಡ್ಯಾಂನಿಂದ ತಲಾ ಪ್ರತಿದಿನ 40 ಮಿಲಿಯನ್ ಗ್ಯಾಲನ್ ನೀರನ್ನು (ಅಂದರೆ ಹೆಚ್ಚೂ ಕಡಿಮೆ ತುಂಗಭದ್ರಾ ಡ್ಯಾಮಿನ ಶೇ.10ರಷ್ಟು) ಕೊಡುವುದಾಗಿಯೂ ಆಶ್ವಾಸನೆ ನೀಡಿದೆ. ಹೀಗಾಗಿ ಹೂಡಿಕೆದಾರರ ಸಮ್ಮೇಳನದಿಂದ ಏನಾಗಲೀ, ಆಗದಿರಲಿ ಬಳ್ಳಾರಿಯು ವಿಶ್ವದ ಸ್ಟೀಲ್ ಕಂಪನಿಯ ಲೂಟಿ ಭೂಪಟದಲ್ಲಿ ಸ್ಥಾನವನ್ನು ಪಡೆದುಕೊಳ್ಳುತ್ತಿರುವುದಂತೂ ಸತ್ಯ.

ಬಳ್ಳಾರಿಯಲ್ಲಿ 60 ಲಕ್ಷ ಟನ್ ಸ್ಟೀಲ್ ಸಾಮರ್ಥ್ಯದ ಘಟಕವನ್ನು ಸ್ಥಾಪಿಸುತ್ತಿರುವ ಮಿತ್ತಲ್ ಕಂಪನಿ ವಿಶ್ವದ ನಂ.1 ಸ್ಟೀಲ್ ಉದ್ಯಮಿಯಾಗಿದೆ. 2009ರಲ್ಲಿ ವಿಶ್ವದ ಸ್ಟೀಲ್ ಉತ್ಪಾದನೆ 130 ಕೋಟಿ ಬಿಲಿಯನ್ ಟನ್ನಿನಷ್ಟಿದ್ದರೆ ಅದರಲ್ಲಿ ಅರ್ಸೆಲಾರ್ ಮಿತ್ತಲ್‌ನ ಪಾಲು ಶೇ.10ರಷ್ಟು, ಅಂದರೆ 13 ಕೋಟಿ ಟನ್ನಿನಷ್ಟು! ಅದರ ವಾರ್ಷಿಕ ಆದಾಯ 105 ಬಿಲಿಯನ್ ಡಾಲರ್‌ಗಳು. ಅಂದರೆ 4,20,000 ಕೋಟಿ ರೂಪಾಯಿಗಳು. ಕರ್ನಾಟಕದ ವಾರ್ಷಿಕ ಬಜೆಟ್ಟು 60,0000 ಕೋಟಿ ಎಂಬುದನ್ನು ನೆನಪಿಸಿಕೊಂಡರೆ ಈ ಕಂಪನಿಗಳ ಮುಂದೆ ಯಡಿಯೂರಪ್ಪ ಏಕೆ ಹಲ್ಲುಗಿಂಜುಕೊಂಡು ಮೊಣಕಾಲೂರಿ ನಿಲ್ಲುತ್ತಾರೆ ಎಂಬುದು ಅರ್ಥವಾಗುತ್ತದೆ. ಅದೇ ರೀತಿ ಪೋಸ್ಕೋ ಸಹ ಮೂರನೇ ಅತಿ ದೊಡ್ಡ ಸ್ಟೀಲ್ ಕಂಪನಿಯಾಗಿದ್ದು ಅರು ಕೋಟಿ ಟನ್ನಿನಷ್ಟು ಸ್ಟೀಲ್ ಉತ್ಪಾದನೆ ಮಾಡುತ್ತದೆ. ಅದರ ವಾರ್ಷಿಕ ಆದಾಯವೂ 2 ಲಕ್ಷ ಕೋಟಿ ರೂಪಾಯಿಗಳು. ಅಂದರೆ ಕರ್ನಾಟಕದ ವಾರ್ಷಿಕ ಬಜೆಟ್ಟಿನ ಹತ್ತು ಪಟ್ಟು.

ಈ ಕಂಪನಿಗಳು ಎಷ್ಟು ಉದ್ಯೋಗಗಳನ್ನು ಈವರೆಗೆ ಸೃಷ್ಟಿಸಿವೆ? 60 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್ಸೆಲಾರ್ ಮಿತ್ತಲ್ ಕಂಪನಿ 13 ಕೋಟಿ ಟನ್ ಸ್ಟೀಲ್ ಉತ್ಪಾದನೆಗೆ ನೇಮಕ ಮಾಡಿಕೊಂಡಿರುವ ಉದ್ಯೋಗಿಗಳ ಸಂಖ್ಯೆ ಕೇವಲ 2,81,000! ಪೋಸ್ಕೋ ಕಂಪನಿಯ ಮೂಲದೇಶವಾದ ದಕ್ಷಿಣ ಕೊರಿಯಾದಲ್ಲಿ 28 ಮಿಲಿಯನ್ ಟನ್‌ಸ್ಟೀಲ್ ಉತ್ಪಾದನೆಗೆ ಅದು ಕೇವಲ 10,000 ಉದ್ಯೋಗಿಗಳನ್ನು ಮಾತ್ರ ನಿಯೋಜಿಸಿಕೊಂಡಿದೆ. 28 ಮಿಲಿಯನ್ ಟನ್ ಸ್ಟೀಲ್ ಉತ್ಪಾದನೆಗೆ 10,000 ಉದ್ಯೋಗಿಗಳು ಸಾಕಾಗುವುದಾದರೆ 6 ಮಿಲಿಯನ್ ಟನ್ ಸ್ಟೀಲ್ ಉತ್ಪಾದನೆಗೆ ಬೇಕಿರುವುದು ಅದರ ಕಾಲುಭಾಗ ಕಾರ್ಮಿಕರಷ್ಟೆ. ಅಂದರೆ 2,500 ಉದ್ಯೋಗಿಗಳು ಮಾತ್ರ. ಹೀಗಾಗಿ ಪೋಸ್ಕೋ ಮತ್ತು ಮಿತ್ತಲ್ ಎರಡೂ ಕಂಪನಿಗಳು ಒಟ್ಟಾಗಿ 12 ಮಿಲಿಯನ್ ಟನ್ನಿನಷ್ಟು ಸ್ಟೀಲ್ ಉತ್ಪಾದನೆಯನ್ನು ಮಾಡಿದರೂ ಸೃಷ್ಟಿಸುವುದು ಹೆಚ್ಚೆಂದರೆ 5,000 ನೇರ ಉದ್ಯೋಗಗಳನ್ನು ಮಾತ್ರ! ಬಿಜೆಪಿ ಸರ್ಕಾರ ಕೊಚ್ಚಿಕೊಳ್ಳುತ್ತಿರುವಂತೆ ಒಂದು ಲಕ್ಷ ಉದ್ಯೋಗವನ್ನು ಅದು ಸೃಷ್ಟಿಸಲು ಸಾಧ್ಯವೇ ಇಲ್ಲ.

ಅದೇನೇ ಇದ್ದರೂ ಬಳ್ಳಾರಿ ವಲಯದಲ್ಲಿ 1.5 ಲಕ್ಷ ಕೋಟಿ ಹೂಡಿಕೆ ಸೃಷ್ಟಿಸುವುದು ಒಂದು ಲಕ್ಷ ಉದ್ಯೋಗವಲ್ಲ. ಬದಲಿಗೆ ಕೇವಲ 10,000 ಉದ್ಯೋಗಗಳು, ಅಬ್ಬಬ್ಬಾ ಎಂದರೆ 20,000 ಉದ್ಯೋಗಗಳು!


ಇದರ ಬದಲಿಗೆ ಕರ್ನಾಟಕ ಜನತೆ ಕಳೆದುಕೊಳ್ಳುತ್ತಿರುವುದೇನು? ಕರ್ನಾಟಕವನ್ನೇ ಕಬಳಿಸುವಷ್ಟು ಶಕ್ತಿ ಹೊಂದಿರುವ ಈ ಕಂಪನಿಗಳು ಬಳ್ಳಾರಿಯತ್ತ ಕಣ್ಣು ಹಾಕಿರುವುದೇಕೆ? ಇದನ್ನು ಅರ್ಥಮಾಡಿಕೊಳ್ಳಲು ಇಂದು ವಿಶ್ವ ಸ್ಟೀಲ್ ಉದ್ಯಮ ಎದುರಿಸುತ್ತಿರುವ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ವಿಶ್ವದಲ್ಲಿ ಸ್ಟೀಲ್ ಉದ್ಯಮ ಹಲವಾರು ಏಳುಬೀಳುಗಳನ್ನು ಕಾಣುತ್ತಾ ಇಂದು ಪ್ರಪಂಚದ ಬಹುಲಾಭದಾಯಕ ಉದ್ಯಮಗಳಲ್ಲಿ ಒಂದಾಗಿ ಬೆಳೆದಿದೆ. 1950-1990ರ ತನಕ ವಿಶ್ವಾದ್ಯಂತ ಸ್ಟೀಲ್ ಉದ್ಯಮವು ಪ್ರಧಾನವಾಗಿ ಸಾರ್ವಜನಿಕ ಕ್ಷೇತ್ರದಲ್ಲೇ ಇರುತ್ತಿತ್ತು. ಆದರೆ 1991ರ ನಂತರದಲ್ಲಿ ಅದು ಪ್ರಧಾನವಾಗಿ ಖಾಸಗಿ ಕ್ಷೇತ್ರದ ಒಡೆತನಕ್ಕೆ ಬಂದಿದೆ. ಇದಕ್ಕೆ ಪ್ರಧಾನ ಕಾರಣ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು. ಈ ಅವಧಿಯಲ್ಲೇ ಅಡ್ರೆಸ್‌ಗಿಲ್ಲದ ಹಲವಾರು ಖಾಸಗಿ ಕಂಪನಿಗಳು ವಿಶ್ವದ ಅತಿ ಶ್ರೀಮಂತ ಕಂಪನಿಗಳಾಗಿ ಬೆಳೆದು ಜನತೆಯನ್ನು ಮತ್ತು ಪರಿಸರವನ್ನು ಹಾಳು ಮಾಡಿದವು. ಇಂದು ಚೀನಾವನ್ನು ಹೊರತುಪಡಿಸಿದರೆ ಶೇ.90ರಷ್ಟು ಸ್ಟೀಲ್ ಉತ್ಪಾದನೆ ನಡೆಯುತ್ತಿರುವುದು ಖಾಸಗಿ ಕ್ಷೇತ್ರದಲ್ಲೇ.

ಯಾವುದೇ ದೇಶವನ್ನು ಕಟ್ಟಬೇಕೆಂದರೆ ಸ್ಟೀಲ್ ಉತ್ಪಾದನೆ ಅತ್ಯವಶ್ಯ. ಇಂದು ಪ್ರಪಂಚದಲ್ಲಿ ಪ್ರತಿ ಮನುಷ್ಯನ ತಲಾವಾರು ಸ್ಟೀಲ್ ಬಳಕೆ ಸರಾಸರಿ 150 ಕೆಜಿಯಷ್ಟು! ಆದರೆ ಭಾರತದಲ್ಲಿ ಸ್ಟೀಲ್‌ನ ತಲಾವಾರು ಬಳಕೆ ಕೇವಲ 35 ಕೆಜಿಯಷ್ಟು! ಚೀನಾದಲ್ಲಿ 250 ಕೆಜಿಯಷ್ಟು. ಹೀಗಾಗಿ ಭಾರತದಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಸ್ಟೀಲ್

12

ನೋ ಕಾಮೆಂಟ್ಸ್



"ಜೂನ್ 2 ರಂದು ಮುಂಬೈನಲ್ಲಿ ನಾನು ಮಾಡಿದ ಭಾಷಣವನ್ನು ಮಾಧ್ಯಮಗಳು ಸರಿಯಾಗಿ ವರದಿ ಮಾಡಿಲ್ಲ. ನನ್ನನ್ನು ಜೈಲಿಗೆ ತಳ್ಳಿದರೂ ಪರವಾಗಿಲ್ಲ. ನಾನು ಮಾವೋವಾದಿಗಳ ಹಿಂಸಾಚಾರವನ್ನು ಸಮರ್ಥಿಸುತ್ತೇನೆಂದು ನಾನು ಹೇಳಿಲ್ಲ. ಅಲ್ಲಿ ನಾನು ಹೇಳಿದ್ದಿಷ್ಟು: ಮಾಧ್ಯಮಗಳು ಸೃಷ್ಟಿಸುತ್ತಿರುವ ಖಂಡನಾ ಉದ್ಯಮದ (ಕಂಡಮ್ನೇಷನ್ ಇಂಡಸ್ಟ್ರಿ)ದ ಪೊಳ್ಳುತನದ ಬಗ್ಗೆ ನನಗೆ ಅಸಮಾಧಾನವಿದೆ. ಯುದ್ಧ ಮುಂದುವರೆದಂತೆ ಹಿಂಸಾಚಾರವೂ ತಾಂಡವವಾಡುತ್ತದೆ. ಇತ್ತಂಡಗಳು ನಡೆಸುವ ಹಿಂಸಾಚಾರದಲ್ಲಿ ಯಾವ ನೈತಿಕತೆಯನ್ನು ಹುಡುಕುವುದೂ ಸಾಧ್ಯವಿಲ್ಲ. ದಾಂತೇವಾಡದ ಯೋಧರ ಸಾವು ಒಂದು ದುರಂತ. ಬಡವರ ವಿರುದ್ಧ ಶ್ರೀಮಂತರು ನಡೆಸುತ್ತಿರುವ ಸಮರದಲ್ಲಿ ಅವರನ್ನು ದಾಳಗಳನ್ನಾಗಿ ಬಳಸಿಕೊಳ್ಳಲಾಗುತ್ತಿದೆ."

- ಅರುಂಧತಿ ರಾಯ್

"ಹಿಂದೆ ಕಾಂಗ್ರೆಸ್ ಪಕ್ಷದಲ್ಲಿ ಹಸಿವಿದ್ದವರು ಕಮ್ಯುನಿಸ್ಟರಾದರು. ಈಗ ಕಮ್ಯುನಿಸ್ಟ್ ಪಕ್ಷದಲ್ಲಿ ಹಸಿವಿದ್ದವರು ನಕ್ಸಲೈಟ್ ಆಗುತ್ತಿದ್ದಾರೆ."

- ಯು.ಆರ್. ಅನಂತಮೂರ್ತಿ

"ಕೆಲ ತಾಂತ್ರಿಕ ತೊಂದರೆಗಳಿಂದಾಗಿ ನೆರೆಪೀಡಿತ ಗ್ರಾಮಗಳ ಸ್ಥಳಾಂತರ ಮಾಡುವ ಆಸರೆ ಯೋಜನೆ ವಿಳಂಬವಾಗಿದೆ. ಇನ್ನು ಆರು ತಿಂಗಳಲ್ಲಿ 301 ಗ್ರಾಮಗಳ ಸ್ಥಳಾಂತರ ಕಾರ್ಯ ಪೂರ್ಣಗೊಳ್ಳಲಿದೆ."

- ಯಡಿಯೂರಪ್ಪ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಿಜೆಪಿ ಪಕ್ಷದ ವಾದಕ್ಕೆ ನನ್ನ ಸಂಪೂರ್ಣ ಸಮರ್ಥನೆ ಇದೆ. ಅಫ್ಜಲ್ ಗುರು ಒಬ್ಬ ಭಯೋತ್ಪಾದಕನಾಗಿದ್ದು ಅಂಥ ಆತ್ಮಹತ್ಯಾ ಬಾಂಬರ್‌ಗಳಿಗೆ ಮರಣದಂಡನೆ ವಿಧಿಸಬೇಕು."

- ರಾಮ್ ಜೇಠ್ಮಲಾನಿ (ಈ ಮಹಾಶಯರೇ ಕೇವಲ ಮೂರು ವರ್ಷಗಳ ಕೆಳಗೆ ಅಫ್ಜಲ್ ಗುರುವಿನ ವಿಚಾರಣೆಯಲ್ಲಿ ಅಫ್ಜಲ್‌ಗೆ ನ್ಯಾಯ ಸಿಕ್ಕಿಲ್ಲ ಎಂದು ವಾದಿಸಿದ್ದರು)



"ಬಿಡದಿಯಲ್ಲಿರುವ ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರದ ಸಾಮರ್ಥ್ಯವನ್ನು 1400 ರಿಂದ 2000 ಮೆಗಾವ್ಯಾಟುಗಳಿಗೆ ಏರಿಸಲಾಗುವುದು. ಅದು ಮುಗಿಯಲು 15 ವರ್ಷಗಳು ಬೇಕು. ಹಾಗೂ ಅದು 35-40 ಲಕ್ಷ ಜನರಿಗೆ ಉದ್ಯೋಗ ಒದಗಿಸುತ್ತದೆ."

- ಕಟ್ಟಾ ಸುಬ್ರಹ್ಮಣ್ಯ ನಾಯ್ಡು

"ಮೂರು ವರ್ಷಗಳಲ್ಲಿ ರಾಜ್ಯವನ್ನು ಗುಡಿಸಲುಮುಕ್ತ ರಾಜ್ಯವನ್ನಾಗಿ ಮಾಡಲಿದ್ದೇವೆ."

- ಕಟ್ಟಾ ನಾಯ್ಡು

ಕಾನೂನಿನ ಸಮಸ್ಯೆಯಾಗುವುದು ಜನರ ಆಕ್ರೋಶ ಮಾತ್ರ, ನೋವಲ್ಲ!

"ಅಂದು ಜನರ ಆಕ್ರೋಶದಿಂದ ಬಚಾವು ಮಾಡಲು ಆಂಡರ್‌ಸನ್ನನ್ನು ಭೋಪಾಲ್‌ನಿಂದ ಹೊರಗೆ ಕರೆದೊಯ್ಯುವುದು ಅತ್ಯಗತ್ಯವಾಗಿತ್ತು. ಇಲ್ಲದಿದ್ದರೆ ಕಾನೂನು-ಭದ್ರತೆಯ ಸಮಸ್ಯೆ ಉಂಟಾಗುತ್ತಿತ್ತು. ರಾಜ್ಯ ಸರ್ಕಾರದ ಮುಂದಿದ್ದ ಪ್ರಧಾನ ಸವಾಲು ಸಂತ್ರಸ್ತರಿಗೆ ಪರಿಹಾರ ಒದಗಿಸುವುದಾಗಿತ್ತು."

- ಪ್ರಣಬ್ ಮುಖರ್ಜಿ

ಮರಿ ಯಡಿಯೂರಪ್ಪ!

"ಮಠ-ಮಾನ್ಯಗಳು ಸಂಸ್ಕೃತಿಯನ್ನು ರಕ್ಷಿಸುತ್ತವೆ. ವಿದ್ಯಾಸಂಸ್ಥೆಗಳನ್ನು ಬೆಳೆಸುತ್ತವೆ. ಅಂಥಾ ಧಾರ್ಮಿಕ ಸಂಸ್ಥೆಗಳನ್ನು ಬೆಳೆಸುವುದು ನನ್ನ ಕರ್ತವ್ಯ. ಮಠಗಳ ಬೇಡಿಕೆಯನ್ನು ಈಡೇರಿಸುತ್ತೇನೆ."

- ಬೆಂಗಳೂರು ಮೇಯರ್ ಎಸ್.ಕೆ. ನಟರಾಜ್

...ಲೆನ್ ಎಂಬ ಹೆಮ್ಮೆಯ ಪತ್ರಕರ್ತೆ...

...ತೆಕೆಯ ಹೆಸರು ಹೆಲೆನ್ ಥಾಮಸ್. ಈಗ ಬರೋಬ್ಬರಿ ...ವರ್ಷ ವಯಸ್ಸಾಗಿರುವ ಹೆಲೆನ್ ಮೊನ್ನೆಮೊನ್ನೆಯ ... ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು ಐದು ಗಂಟೆಗೆ ಕಚೇರಿಯಲ್ಲಿ ಹಾಜರಾಗುತ್ತಿದ್ದರು. ಅಲ್ಲಿ ಜಗತ್ತಿನ ...ಮೂಲೆಗಳಿಂದ ಬಂದಿದ್ದ ಸುದ್ದಿಗಳನ್ನೆಲ್ಲ ಓದಿದ ... ತಮ್ಮ 'ಬೀಟ್' ಮೇಲೆ ಹೊರಡುತ್ತಿದ್ದರು. ಕಳೆದ ...ದು ದಶಕಗಳಿಂದ ಅವರ 'ಬೀಟ್' ಜಾಗ ಅಮೆರಿಕದ ಅಥವಾ ಅವರ ಸರ್ಕಾರ ವೈಟ್‌ಹೌಸ್‌ನಲ್ಲಿ ಪ್ರತಿದಿನ ...ುವ ಪತ್ರಿಕಾ ಸಭೆಗಳು. ಆ ಪತ್ರಿಕಾ ಸಭೆಗಳಲ್ಲಿ ...ಾಗುತ್ತಿದ್ದ ಪತ್ರಕರ್ತರಲ್ಲಿ ಹೆಲೆನ್ ಅತಿ ಹಿರಿಯರಾಗಿದ್ದ ... ಅವರಿಗೆ ಮೊದಲನೆ ಸಾಲಿನಲ್ಲೇ ಒಂದು ...ಯನ್ನು ನಿಗದಿಪಡಿಸಲಾಗಿತ್ತು. ಮಾತ್ರವಲ್ಲ, ಇತರೆ ...ಗಳ ಮೇಲೆ ಆಯಾ ಪತ್ರಕರ್ತರು ಪ್ರತಿನಿಧಿಸುವ ... ಏಜೆನ್ಸಿಗಳ ಅಥವಾ ಮಾಧ್ಯಮಗಳ ಹೆಸರುಗಳನ್ನು ...ದ್ದರೆ ಹೆಲೆನ್ ಅವರ ಕುರ್ಚಿಗೆ ಆಕೆಯ ಹೆಸರನ್ನೇ ...ಲಾಗಿತ್ತು. ಅದರರ್ಥ ಆಕೆ ಅಂಕಣಕಾರರಾಗಿದ್ದ ಹರ್ಸ್ಟ್ ...ದ್ಯಮ ಸಮೂಹಕ್ಕಿಂತ ಹೆಲೆನ್ ಥಾಮಸ್ ...ಖ್ಯವಾಗಿದ್ದರು ಎಂದು.

...ೇವಲ ವಯಸ್ಸು ಅಥವಾ ಹಿರಿತನದಿಂದಾಗಿ ಹೆಲೆನ್ ...ಸ್ ಅವರಿಗೆ ಇಂತಹ ವಿಶೇಷ ಗೌರವಗಳು ...ಯೂಗಿರಲಿಲ್ಲ. ಬದಲಾಗಿ ಅವುಗಳನ್ನು ಹೆಲೆನ್ ತಮ್ಮ ...ಮದಿಂದಲೇ ಗಳಿಸಿಕೊಂಡಿದ್ದರು. ಆ ಮೂಲಕ ...ಿಕದ ರಾಜಧಾನಿಯಾದ ವಾಷಿಂಗ್ಟನ್‌ನ ಪತ್ರಿಕಾ ...ದ ವರಿಷ್ಠರೆಂದೇ ಪರಿಗಣಿಸಲ್ಪಟ್ಟಿದ್ದರು. ಕೆಲ ...ಾರಿನ ಯುವ ಪತ್ರಕರ್ತರಿಗೆ ಮಾದರಿಯಾಗಿದ್ದರು. ...ಲ್ಲೂ ಮಹಿಳೆಯರಿಗೆ ರೋಲ್ ಮಾಡೆಲ್ ಆಗಿದ್ದರು. ...ಂತಹ ಹೆಲೆನ್ ಅವರನ್ನು ಇತ್ತೀಚೆಗೆ ಬಲವಂತವಾಗಿ ...ಗೊಳಿಸಲಾಯಿತು. ಅವರು ಕೂರುತ್ತಿದ್ದ ವೈಟ್‌ಹೌಸ್ ...ಯ ಮೇಲಿದ್ದ ಅದರ ಹೆಸರನ್ನು ಅಳಿಸಿ ...ಾಯಿತು. ಸ್ವತಃ ಅಮೆರಿಕದ ಅಧ್ಯಕ್ಷ ಬರಾಕ್ ...ಮಾ "ಹೆಲೆನ್ ಹೊರಟುಹೋಗಿದ್ದು ಸ್ವಾಗತಾರ್ಹ" ... ಘೋಷಿಸಿದರು. ಹೆಲೆನ್‌ರನ್ನು ಆಹ್ವಾನಿಸಿದ್ದ ...ಕ್ರಮಗಳಿಂದ ಅವರ ಹೆಸರನ್ನು ಕೈಬಿಡಲಾಯಿತು. ...ಕಾಲೇಜುಗಳು ಹೆಲೆನ್ ಥಾಮಸ್ ಹೆಸರಲ್ಲಿ ತಮ್ಮ ...ೋದ್ಯಮ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರಶಸ್ತಿಗಳನ್ನು ...ಟೊಳಿಸಿದವು.

...ತ್ರಿ ಬೆಳಗಾಗುವುದರೊಳಗೆ ಹೆಲೆನ್‌ರನ್ನು ಹೀಗೆ ...ಮಾನಿಸಿದ್ದಕ್ಕೆ, ಪತ್ರಕರ್ತರೇ ಅವರನ್ನು ದೂರ ಮಾಡಿದ್ದಕ್ಕೆ, ...ರಿಕದ ಸರ್ಕಾರ ಮತ್ತು ಮಾಧ್ಯಮಗಳು ಆಕೆಯನ್ನು ... ಎಂಬಂತೆ ಚಿತ್ರಿಸಿದ್ದಕ್ಕೆ ಕಾರಣ ಹೆಲೆನ್ ಅವರು ...ಸ್ಟೇನ್‌ನಿಂದ ಯಹೂದಿಯರು ತೊಲಗಬೇಕು" ಎಂಬ ... ನೀಡಿದ್ದು.

...ಂದೆರಡು ವಾರಗಳ ಹಿಂದೆ ವೈಟ್‌ಹೌಸ್‌ನಲ್ಲಿನ ಪತ್ರಿಕಾ ...ಮುಗಿಸಿ ಹೆಲೆನ್ ಅವರು ಕಷ್ಟಪಟ್ಟು ರಸ್ತೆಯುತ್ತ ...ುತ್ತಾ ಬರುತ್ತಿದ್ದರು. ಆಗ ಅವರ ಮುಂದೆ ವೀಡಿಯೋ ...ಾ ಹೊತ್ತು ಪ್ರತ್ಯಕ್ಷನಾದ ಯಹೂದಿ ರಾಬೈ ಒಬ್ಬ ...ರನ್ನು "ಇಸ್ರೇಲ್ ಜನರಿಗೆ ನಿಮ್ಮ ಸಂದೇಶವೇನು?" ಕೇಳಿದ. ಅದಕ್ಕೆ ಹೆಲೆನ್ "ಪ್ಯಾಲೆಸ್ಟೇನಿನಿಂದ ...ೂದಿಗಳು ತೊಲಗಬೇಕು" ಅಂದರು.

...ಹೌದಾ? ಯಾಕೆ?" ಎಂದ ರಾಬೈ.


...ಅವರು ಅಲ್ಲಿನ ಜಾಗವನ್ನು ಆಕ್ರಮಣ ...ಕೊಳ್ಳುತ್ತಿದ್ದಾರೆ ಎಂಬುದನ್ನು ಮರೆಯಬೇಡಿ....."

...ಅವರು ಎಲ್ಲಿಗೆ ಹೋಗಬೇಕು?"

...ತಮ್ಮ ತಮ್ಮ ದೇಶಗಳಿಗೆ..... ಜರ್ಮನಿ, ಪೋಲೆಂಡ್, ...ಕಗಳಿಗೆ ಹಿಂದಿರುಗಬೇಕು...."

... ಚಿಕ್ಕ ಸಂಭಾಷಣೆಯನ್ನು ತನ್ನ ಕ್ಯಾಮೆರಾದಲ್ಲಿ ಸೆರೆ ... ರಾಬೈ ಅದನ್ನು ಇಂಟರ್‌ನೆಟ್‌ನಲ್ಲಿ ಹಾಕಿದ. ಅದು ಹಬ್ಬಿದಂತೆ ಹೆಲೆನ್ ವಿರುದ್ಧದ ದಾಳಿಗಳೂ ...ಾದವು.

...ಮೆರಿಕದ ಆಪ್ತ ದೇಶವಾದ ಇಸ್ರೇಲ್ ವಿರುದ್ಧ ... ಮಾತು ಆಡುವುದೆಂದರೇನು? ಯಹೂದಿಯರನ್ನು



ಹೆಲೆನ್ ಹೀಗೆ ಅವಮಾನಿಸಿದ್ದನ್ನು ಹೇಗೆ ಸಹಿಸಲು ಸಾಧ್ಯ? ಎಂದೆಲ್ಲಾ ಅಮೆರಿಕದ ಸರ್ಕಾರ ಮತ್ತು ಮಾಧ್ಯಮಗಳು ಹೆಲೆನ್ ವಿರುದ್ಧ ಕಿಡಿಕಾರಿದವು.

ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಯಿತೆಂದರೆ ಇದಾದ ಮಾರನೆ ದಿನವೇ ಹೆಲೆನ್ ತನ್ನ ಕೆಲಸಕ್ಕೆ ರಾಜೀನಾಮೆ ನೀಡಬೇಕಾಯಿತು.... ವಾಷಿಂಗ್ಟನ್‌ನಲ್ಲಿ ಅತಿ ಶ್ರೇಷ್ಠ ಪತ್ರಕರ್ತ ರಾಗಿದ್ದ ಹೆಲೆನ್ ಒಂದು ಪುಟ್ಟ ಸಂಭಾಷಣೆಯಿಂದಾಗಿ ಅತಿ ಕನಿಷ್ಠ ಪತ್ರಕರ್ತೆಯಾದರು.

ಪ್ರಸ್ತುತ ಟೀಕಾ ಪ್ರಹಾರದಿಂದಾಗಿ ಹೆಲೆನ್ ಬಲವಂತ ವಾಗಿ ನಿವೃತ್ತಿಹೊಂದಿದ್ದರೂ ಅವರು ಹಿಂದಿನಿಂದಲೂ ದಿಟ್ಟೆದೆಯ ಪತ್ರಕರ್ತೆಯಾಗಿದ್ದರು; ಅಮೆರಿಕಾದ ಅಧ್ಯಕ್ಷರನ್ನು ಜಾಲಾಡುತ್ತಿದ್ದರು; ಎಂದಿಗೂ ಜನಪರವಾದ ನಿಲುವನ್ನು ಹೊಂದಿದವರಾಗಿದ್ದರು. ಪತ್ರಿಕಾಗೋಷ್ಠಿಗಳಲ್ಲಿ ಹೆಲೆನ್ ಪ್ರಶ್ನೆ ಕೇಳಿದರೆ ಅಮೆರಿಕ ಅಧ್ಯಕ್ಷರೇ ನಡುಗುತ್ತಿದ್ದರು.

ಅಮೆರಿಕದ ಹಾಲಿ ಅಧ್ಯಕ್ಷ ಒಬಾಮಾ ಕೂಡ ಹೆಲೆನ್ ಅವರ ಪ್ರಶ್ನೆಯೊಂದರಿಂದ ತಬ್ಬಿಬ್ಬಾದವರು. ಅದು ನಡೆದದ್ದು ಹೀಗೆ: ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಒಬಾಮಾ ನಡೆಸಿದ ಪ್ರಥಮ ಪತ್ರಿಕಾಗೋಷ್ಠಿ ಅದಾಗಿತ್ತು. ಸಾಂಪ್ರದಾಯಿಕವಾಗಿ ಮೊದಲನೆ ಪ್ರಶ್ನೆ ಕೇಳುತ್ತಿದ್ದ ಹೆಲೆನ್‌ರನ್ನು ಉದ್ದೇಶಿಸಿ ಒಬಾಮಾ ಅವರು "ಹೆಲೆನ್, ನಾನು ಪುಳಕಿತನಾಗಿದ್ದೇನೆ. ನಿಮ್ಮ ಪ್ರಶ್ನೆಯೇ ನನ್ನ ಅಧ್ಯಕ್ಷಾವಧಿಯ ಉದ್ಘಾಟನೆ" ಎಂದು ಹೇಳಿ ಪ್ರಶ್ನೆಯನ್ನು ಕೇಳುವಂತೆ ಹೆಲೆನ್ ಅವರಿಗೆ ಸೂಚಿಸಿದರು. ಪ್ರಾಯಶಃ ಒಬಾಮಾ ಅವರು ಅಂದಿನ ಜಾಗತಿಕ ಆರ್ಥಿಕ ಬಿಕ್ಕಟ್ಟು ಕುರಿತು ಹೆಲೆನ್ ಪ್ರಶ್ನೆ ಕೇಳಬಹುದೆಂದು ಊಹಿಸಿದ್ದರು. ಆದರೆ ಒಬಾಮಾರ ಲೆಕ್ಕಾಚಾರವನ್ನು ತಲೆ ಕೆಳಗಾಗಿಸಿದ ಹೆಲೆನ್ "ಮಧ್ಯಪ್ರಾಚ್ಯ ದೇಶಗಳಲ್ಲಿ ಯಾವ ಯಾವ ದೇಶಗಳು ಅಣ್ವಸ್ತ್ರಗಳನ್ನು ಹೊಂದಿವೆ?" ಎಂದು ನೂತನ ಅಧ್ಯಕ್ಷ ಒಬಾಮಾರನ್ನು ಕೇಳಿದರು. ಭಾರೀ ಪ್ರಾಮಾಣಿಕನಂತೆ, ಹೊಸ ಆಂದೋಲನವನ್ನೇ ಸೃಷ್ಟಿಸುವವನಂತೆ, ಜಗತ್ತಿನ ಎಲ್ಲ ಅನ್ಯಾಯಗಳನ್ನು ಸರಿಪಡಿಸುವವನಂತೆ ಪೋಸು ಕೊಡುತ್ತಿದ್ದ ಒಬಾಮಾ ಇಸ್ರೇಲ್ ದೇಶವು ಅಣುಅಸ್ತ್ರಗಳನ್ನು ಹೊಂದಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೋ, ಇಲ್ಲವೋ ಎಂದು ಪರೀಕ್ಷಿಸುವ ಪ್ರಶ್ನೆ ಹೆಲೆನ್‌ರದ್ದಾಗಿತ್ತು. ಹೆಲೆನ್‌ರ ನಿರೀಕ್ಷೆಯನ್ನು ಸುಳ್ಳಾಗಿಸಿದ ಒಬಾಮಾ "ಈ ಪ್ರಶ್ನೆಗೆ 'ಊಹೆ'ಯ ಉತ್ತರವನ್ನು ನೀಡಲು ನಾನು ಬಯಸುವುದಿಲ್ಲ" ಎಂದು ಹೇಳಿ ಜಾರಿಕೊಂಡಿದ್ದರು. ಹೆಲೆನ್‌ರ ಮೊದಲ ಪ್ರಶ್ನೆಗೆ ದಂತಭಗ್ನ ಅನುಭವಿಸಿದ ಒಬಾಮಾ ಆನಂತರದ ತಮ್ಮ ಯಾವ ಪತ್ರಿಕಾಗೋಷ್ಠಿಗಳಲ್ಲೂ ಹೆಲೆನ್‌ರಿಂದ ಪ್ರಶ್ನೆಗಳನ್ನು ಸ್ವೀಕರಿಸಲಿಲ್ಲ.

ಇದರಿಂದ ಹೆಲೆನ್ ಅವರಿಗೆ ಬೇಸರವಾಗಿದ್ದರೂ ಅದನ್ನು ತೋರ್ಪಡಿಸಲಿಲ್ಲ. ಬದಲಾಗಿ ಮುಕ್ತತೆ ಮತ್ತು ಪಾರದರ್ಶಕತೆ ಬಗ್ಗೆ ಹೆಚ್ಚು ಮಾತನಾಡುತ್ತಿದ್ದ ಒಬಾಮಾರ ಆಡಳಿತವು ಮಾಹಿತಿ ನೀಡುವ ಬಗ್ಗೆ ಕಂಜೂಸಿತನ ಮಾಡುತ್ತಿದ್ದುದ್ದರ ಬಗ್ಗೆ ಹೆಲೆನ್ ಆಕ್ಷೇಪ ವ್ಯಕ್ತಪಡಿಸಿದ್ದರು. "ವೈಟ್ ಹೌಸ್‌ನಿಂದಲೇ ಎಲ್ಲಾ ಮಾಹಿತಿಗಳ ಮೇಲೆ ಹಿಡಿತ ಸಾಧಿಸಲಾಗಿದೆ. ಹಿಂದಿನ ಸರ್ಕಾರಗಳೂ ಹೀಗೇ ಮಾಡಿದ್ದವು ನಿಜ, ಆದರೆ ಯಾವ ಸರ್ಕಾರವೂ ಈ ಮಟ್ಟದಲ್ಲಿ ಮಾಡಿರಲಿಲ್ಲ, ಮುಕ್ತತೆ ಮತ್ತು ಪಾರದರ್ಶಕತೆ ಬಗ್ಗೆ ಮಾತನಾಡುವ ಜನರೇ ಹೀಗೆ ಮಾಡುತ್ತಾರೆಂಬುದನ್ನು ನಂಬಲಿಕ್ಕಾಗುತ್ತಿಲ್ಲ" ಎಂದು ಬೇಸರ ವ್ಯಕ್ತಪಡಿಸಿದ್ದ ಹೆಲೆನ್ "ರಿಚರ್ಡ್ ನಿಕ್ಸನ್ (ಅಮೆರಿಕದ ಮಾಜಿ ಅಧ್ಯಕ್ಷ) ಕೂಡ ಮಾಧ್ಯಮಗಳ ಮೇಲೆ ಹಿಡಿತ ಹೊಂದಲು ಯತ್ನಿಸಿದ್ದರು. ಆದರೆ ಅವರು ಕೂಡ ಒಬಾಮಾನಂತೆ ಹಿಡಿತ ಸಾಧಿಸಿರ ಲಿಲ್ಲ" ಎಂದು ಅಸಮಾಧಾನಪಟ್ಟಿದ್ದರು.

ಹೆಲೆನ್‌ರೊಂದಿಗೆ ಹೀಗೆ ಮುಖಾಮುಖಿಯಾಗಿ ಅವ ಮಾನ ಅನುಭವಿಸಿದ, ತಮ್ಮ ಟೊಳ್ಳುತನವನ್ನು ಬಹಿರಂಗ ಪಡಿಸಿಕೊಂಡ ಅಮೆರಿಕದ ಅಧ್ಯಕ್ಷರಲ್ಲಿ ಒಬಾಮಾ ಮೊದಲಿಗ ರಲ್ಲ. ಅವರಿಗಿಂತ ಮೊದಲು ಹಲವಾರು ಅಧ್ಯಕ್ಷರು ಆಕೆಯ ನೇರ ಮತ್ತು ನಿಷ್ಠುರ ಪ್ರಶ್ನೆಗಳಿಗೆ ಬೆವೆತುಹೋಗಿದ್ದಾರೆ; ಹೇಗೆ ಉತ್ತರಿಸುವುದೆಂದು ಗೊತ್ತಾಗದೆ ತತ್ತರಿಸಿಹೋಗಿದ್ದಾರೆ.

ಇಂತಹ ಕರ್ತವ್ಯಪ್ರಜ್ಞೆಯಿಂದಾಗಿ ಹೆಲೆನ್ ಎಷ್ಟು ಖ್ಯಾತರಾಗಿದ್ದರೆಂದರೆ ಒಮ್ಮೆ ಪತ್ರಕರ್ತರೊಬ್ಬರು ಕ್ಯೂಬಾದ ಅಂದಿನ ಅಧ್ಯಕ್ಷ ಫೀಡೆಲ್ ಕ್ಯಾಸ್ಟ್ರೋ ಅವರನ್ನು "ಅಮೆರಿಕದ ಪ್ರಜಾಪ್ರಭುತ್ವಕ್ಕಿಂತ ಕ್ಯೂಬಾದ ಪ್ರಜಾಪ್ರಭುತ್ವ ಹೇಗೆ ಭಿನ್ನ?" ಎಂದು ಕೇಳಿದ್ದಕ್ಕೆ ಕ್ಯಾಸ್ಟ್ರೋ ಅವರು "ನಾನು ಹೆಲೆನ್ ಥಾಮಸ್ ಅವರ ಪ್ರಶ್ನೆಗಳಿಗೆ ಉತ್ತರ ನೀಡಬೇಕಿಲ್ಲ" ಎಂದಿದ್ದರು! ಇದರರ್ಥ ಹೆಲೆನ್ ಅವರು ಕೇಳುತ್ತಿದ್ದ ನೈತಿಕ ಪ್ರಶ್ನೆಗಳಿಗೆ ಅಮೆರಿಕದ ಅಧ್ಯಕ್ಷರು ಗುರಿಯಾಗುತ್ತಾರೆ ಎಂಬುದೇ ಆಗಿತ್ತು!!

ಇತ್ತೀಚೆಗೆ ಅಮೆರಿಕ ಕಂಡ ಅತಿ ದುಷ್ಟ ಅಧ್ಯಕ್ಷ ಜಾರ್ಜ್ ಬುಷ್ ಕೂಡ ಹೆಲೆನ್‌ರ ನೈತಿಕ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲಾಗಿರಲಿಲ್ಲ. ಬುಷ್‌ನ ಅಧಿಕಾರಾವಧಿಯಲ್ಲಿ ಹೆಲೆನ್ ಅವರಿಗೆ ಪ್ರತಿನಿತ್ಯದ ಪತ್ರಿಕಾ ಸಭೆಗಳಲ್ಲಿ ತಮ್ಮ ಸಾಂಪ್ರದಾಯಿಕ ಮೊದಲ ಸಾಲಿನ ಸ್ಥಾನ ಸಿಗುತ್ತಿದ್ದರೂ ಅಪರೂಪವಾಗಿ ನಡೆಯುತ್ತಿದ್ದ ಪತ್ರಿಕಾಗೋಷ್ಠಿಗಳಲ್ಲಿ ಅವರನ್ನು ಕೊನೆ ಸಾಲಿನಲ್ಲಿ ಕೂರಿಸಲಾಗುತ್ತಿತ್ತು. ಹೀಗೆ ಯಾಕಾಗುತ್ತಿದೆ ಎಂದು ಯಾರೋ ಹೆಲೆನ್ ಅವರನ್ನು ಕೇಳಿದಾಗ "ಅವರಿಗೆ ನಾನು ಅಂದರೆ ಇಷ್ಟವಿಲ್ಲ. ಏಕೆಂದರೆ ನಾನು ಕಠಿಣವಾದ ಪ್ರಶ್ನೆಗಳನ್ನು ಕೇಳುತ್ತೇನೆ" ಎಂದು ವಿವರಿಸಿದ್ದರು.

ಇದು ಅತಿಶಯೋಕ್ತಿಯಾಗಿರಲಿಲ್ಲ. ಅಮೆರಿಕದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ಜಾರ್ಜ್ ಬುಷ್ ಮೂರು ವರ್ಷಗಳ ಕಾಲ ಹೆಲೆನ್ ಅವರಿಂದ ಯಾವ ಪ್ರಶ್ನೆಯನ್ನೂ ಸ್ವೀಕರಿಸಿರಲಿಲ್ಲ. ಆದರೆ ಅದ್ಯಾಕೋ 2006ರಲ್ಲಿ ಹೆಲೆನ್ ಅವರಿಗೆ ಪ್ರಶ್ನೆ ಕೇಳುವ ಅವಕಾಶವನ್ನು ಬುಷ್ ನೀಡಿದರು. ಹೆಲೆನ್ ಆ ಅವಕಾಶವನ್ನು ವ್ಯರ್ಥಗೊಳಿಸಲಿಲ್ಲ. "ಅಧ್ಯಕ್ಷರೆ, ಇರಾಕ್ ಮೇಲಿನ ಯುದ್ಧ ಸಾರುವ ನಿಮ್ಮ ನಿರ್ಧಾರದಿಂದಾಗಿ ಸಾವಿರಾರು ಅಮೆರಿಕನ್ನರು ಮತ್ತು ಇರಾಕಿಗಳು ಸಾವನ್ನಪ್ಪಿದ್ದಾರೆ; ತಮ್ಮ ಜೀವನಪರ್ಯಂತ ಸಾವಿರಾರು ಅಮೆರಿಕನ್ನರು ಮತ್ತು ಇರಾಕಿಗಳು ಅಂಗವಿಕಲರಾಗಿದ್ದಾರೆ. ಈ ಯುದ್ಧಕ್ಕೆ ನೀವು ಸಾರ್ವಜನಿಕವಾಗಿ ನೀಡಿರುವ ಪ್ರತಿಯೊಂದು ಸಬೂಬು ಸತ್ಯವಲ್ಲವೆಂದು ಸಾಬೀತಾಗಿದೆ. ನನ್ನ ಪ್ರಶ್ನೆ ಇಷ್ಟೇ: ಯಾವ ಕಾರಣಕ್ಕೆ ನೀವು ಈ ಯುದ್ಧವನ್ನು ಸಾರಿದ್ದೀರಿ? ನೀವು ವೈಟ್ ಹೌಸಿಗೆ ಹೆಜ್ಜೆ ಇಟ್ಟಾಗಿನಿಂದ ನೀವು, ನಿಮ್ಮ ಸಚಿವ ಸಂಪುಟ, ನಿಮ್ಮ ಗೂಢಚರ್ಯೆ ಅಧಿಕಾರಿಗಳು... ಎಲ್ಲರೂ ಈ ಯುದ್ಧವನ್ನು ಸಮರ್ಥಿಸಿಕೊಂಡಿದ್ದೀರಿ. ಆದರೆ ಅದಕ್ಕೆ ನಿಜವಾದ ಕಾರಣಗಳೇನು? ಇದು ತೈಲಕ್ಕಾಗಿ ಅಲ್ಲ, ಇಸ್ರೇಲಿಗಾಗಿ ಅಲ್ಲ, ಬೇರೆ ಇನ್ಯಾವುದೇ ಕಾರಣಕ್ಕಾಗಿ ಅಲ್ಲ ಎಂದಿದ್ದೀರಿ. ಹಾಗಾದರೆ ಈ ಯುದ್ಧಕ್ಕೆ ಕಾರಣವೇನು?"

ಸಹಜವಾಗಿಯೇ ಹೆಲೆನ್‌ರ ಈ ಪ್ರಶ್ನೆಗೆ ಬುಷ್ ನೇರವಾಗಿ, ಸತ್ಯವಾಗಿ ಉತ್ತರಿಸಲಿಲ್ಲ. ಬದಲಾಗಿ 'ಭಯೋತ್ಪಾದನೆ ವಿರುದ್ಧದ ಸಮರ' ಎಂದು ಹೇಳಿ ಸದ್ದಾಂ ಹುಸೇನ್ ವಿರುದ್ಧ ಬಡಬಡಿಸಿದ್ದ. ಆನಂತರ ಬುಷ್ ಎಂದೂ ಹೆಲೆನ್‌ರಿಂದ ಪ್ರಶ್ನೆಗಳನ್ನು ಆಹ್ವಾನಿಸಲಿಲ್ಲ! ತನಗನ್ನಿಸಿದ್ದನ್ನು ನೇರವಾಗಿ ಹೇಳುವ ಹೆಲೆನ್ ಒಮ್ಮೆ "ಅಮೆರಿಕದ ಇತಿಹಾಸದಲ್ಲೇ ಅತಿ ಕೆಟ್ಟ ಅಧ್ಯಕ್ಷನನ್ನು ಕಾಣುತ್ತಿದ್ದೇವೆ" ಎಂದು ಬುಷ್ ಬಗ್ಗೆ ಹೇಳಿದ್ದರು. ಇನ್ನೊಂದು ಬಾರಿ ಒಬಾಮಾ ವಿರುದ್ಧ ಅಧ್ಯಕ್ಷ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದಿಂದ ಸ್ಪರ್ಧಿಸಿದ್ದ ಡಿಕ್ ಚೆನಿ ಬಗ್ಗೆ "ಆತ ಸ್ಪರ್ಧಿಸುವ ಸುದ್ದಿ ಕೇಳಿಬಂದ ದಿನ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ... ನಮಗೆ ಮತ್ತೊಬ್ಬ ಸುಳ್ಳುಗಾರ ಅಧ್ಯಕ್ಷನಾಗುವುದು ಬೇಕಿಲ್ಲ" ಎಂದಿದ್ದರು.



ಕಂಡಹಾಗೆ

■ ಗೌರಿ ಲಂಕೇಶ್
editorlankesh@gmail.com

ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಬಗ್ಗೆ ಎಲ್ಲ ಮಾಹಿತಿಯನ್ನು ಜನರಿಗೆ ನೀಡುವ ಮೂಲಕ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಕರ್ತವ್ಯ ಪತ್ರಕರ್ತರದ್ದು ಎಂಬ ನಂಬಿಕೆ ಹೆಲೆನ್‌ರದ್ದು. ಹಾಗೆಯೇ ಓರ್ವ ಚುನಾಯಿತ ಪ್ರತಿನಿಧಿಯನ್ನು ತರಾಟೆಗೆ ತೆಗೆದುಕೊಳ್ಳುವ ಮೂಲಕ ಆತ ಸರ್ವಾಧಿಕಾರಿಯಾಗದಂತೆ ತಡೆಯುವುದೂ ಪತ್ರಿಕೋದ್ಯಮದ ಜವಾಬ್ದಾರಿ ಎಂಬುದು ಅವರ ನಿಲುವು. ಅವರ ಇಂತಹ ಅಭಿಪ್ರಾಯಗಳಿಂದಾಗಿಯೇ ಅವರು 89 ವರ್ಷ ವಯಸ್ಸಿನಲ್ಲೂ ಇನ್ನೂ ಚುರುಕಾಗಿ ಯೋಚಿಸುತ್ತಾರೆ, ಪತ್ರಿಕಾ ಧರ್ಮವನ್ನು ಪಾಲಿಸುತ್ತಾರೆ, ಜನ ಪರವಾಗಿ ನಿಂತು ಅಧಿಕಾರಿ ವರ್ಗವನ್ನು ಪ್ರಶ್ನಿಸುತ್ತಾರೆ.

ಪ್ರಸ್ತುತ ಪ್ಯಾಲೆಸ್ಟೇನ್ ಮೇಲೆ ಇಸ್ರೇಲ್ ನಡೆಸಿರುವ ದೌರ್ಜನ್ಯವನ್ನು ಖಂಡಿಸದೇ ಅಮೆರಿಕ ಸರ್ಕಾರ ತೆಪ್ಪಗಿರುವುದರಿಂದಲೇ ಹೆಲೆನ್ "ಯಹೂದಿಯರು ಪ್ಯಾಲೆಸ್ಟೇನ್‌ನಿಂದ ತೊಲಗಬೇಕು" ಎಂದದ್ದು. ಈಗ ಆಕೆಯ ಇಂತಹ ಕಾಳಜಿಯೇ ಮುಳುವಾಗಿದೆ.

ಹೆಲೆನ್ ಥಮಾಸ್ ಅವರ ಬಗ್ಗೆ ವಾಷಿಂಗ್ಟನ್ ಪತ್ರಿಕಾ ವಲಯದಲ್ಲಿ ಒಂದು ದಂತಕತೆ ಇದೆ. ಆ ಕತೆ ಹೀಗಿದೆ. "ಭೂಮಂಡಲವನ್ನು ಸೃಷ್ಟಿಸಿದ ನಂತರ ದೇವಾನುದೇವ ತಾನು ಈ ಕಾರ್ಯವನ್ನು ಚೆನ್ನಾಗಿ ಮಾಡಿ ಮುಗಿಸಿದ್ದೇನೆ ಎಂದು ಘೋಷಿಸಿದನಂತೆ. ಆಗ ಆತನ ಹೇಳಿಕೆಯನ್ನು ಪರೀಕ್ಷಿಸಲು ಹೆಲೆನ್ ಥಾಮಸ್ ಅವರನ್ನು ಕಳುಹಿಸಲಾಯಿತಂತೆ. ಅಲ್ಲಿಗೆ ಹೋದ ಹೆಲೆನ್ ಪತ್ರಿಕಾ ಧರ್ಮವನ್ನು ಎಷ್ಟು ಚೆನ್ನಾಗಿ ಪಾಲಿಸಿದರೆಂದರೆ ಆವರೇ ಸೇಬಿನಲ್ಲಿದ್ದ ಹುಳುವನ್ನು ಮತ್ತು ಹುಲ್ಲಿನಲ್ಲಿದ್ದ ಹಾವನ್ನೂ ಪತ್ತೆಹಚ್ಚಿ ದೇವಾನುದೇವನ ಸೃಷ್ಟಿ ಸಮರ್ಪಕವಾಗಿಲ್ಲ ಎಂಬುದನ್ನು ಜಗತ್ತಿಗೆ ತೋರಿಸಿದರಂತೆ!"

ಅಜ್ಜಿ ಹೆಲೆನ್ ಥಾಮಸ್ ಎಲ್ಲಾ ಪತ್ರಕರ್ತರಿಗೆ ಮುಂದೆಯೂ ಸ್ಫೂರ್ತಿ ನೀಡಲಿ......

ಬಫೂನ್ ರೇಣುಕನ ಘಟಿಂಗತನ!

ಕನಿಷ್ಠ ಘನತೆ, ನಾಗರಿಕತೆಯಿಲ್ಲದವರಿಗೆ ಸಚಿವಗಿರಿ ದೊರೆತರೆ ಏನೇನಾಗಬಹುದೋ ಅದೆಲ್ಲದಕ್ಕೂ ಹೆಂಡದ ಮಂತ್ರಿ ರೇಣುಕಾಚಾರ್ಯ ಪಕ್ಕಾ ಉದಾಹರಣೆಯಾಗಿ ನಿಂತಿದ್ದಾನೆ. ಕಚ್ಚೆ-ನಾಲಿಗೆ ಇತ್ಯಾದಿಗಳ ಮೇಲೆ ಸಂಪೂರ್ಣವಾಗಿ ಹಿಡಿತ ಕಳಕೊಂಡಿರುವ ರೇಣುಕನಿಗೆ ತಾನೊಬ್ಬ ಸಚಿವ, ಜನ ಗಮನಿಸುತ್ತಿರುತ್ತಾರೆಂಬ ವಿಚಾರಗಳು ಫೀಲ್ ಆದಂತಿಲ್ಲ, ಆಗುವ ಲಕ್ಷಣಗಳೂ ಇಲ್ಲ!


ಈ ಅಸಹ್ಯ ಆಸಾಮಿಯ ಬಗ್ಗೆ ಇಷ್ಟೆಲ್ಲ ಹೇಳಲು ಕಾರಣವಿದೆ. ಮೊನ್ನೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಭೆಯೊಂದರಲ್ಲಿ ಪೊಲೀಸ್ ಆಯುಕ್ತ ಶಂಕರ್ ಬಿದರಿ ಮೇಲೆ ಏಕವಚನದ ಪ್ರಹಾರ ನಡೆಸಿದ್ದಾನೆ. ತೀರಾ ಮಾಧ್ಯಮಗಳ ಮುಂದೆಯೇ ಮತಿಗೆಟ್ಟವನಂತೆ ಕಿರುಚಾಡಿರುವ ರೇಣುಕ, 'ನನ್ನ ಅಧಿಕಾರ ಪ್ರಶ್ನಿಸುವ ಹಕ್ಕು ಬಿದರಿಗಿಲ್ಲ, ಈ ವಿಚಾರವಾಗಿ ಪ್ರಶ್ನಿಸುವ ಹಕ್ಕು ಬಿದರಿಗಿಲ್ಲ, ನಾನು ಅವನ ಬಳಿ ಹೋಗಿ ಚರ್ಚಿಸುವುದಿಲ್ಲ, ಬೇಕಾದರೇ ಅವನೇ ನನ್ನತ್ರ ಬರ್ಲಿ' ಅಂತೆಲ್ಲ ಒದರಾಡಿದ್ದಾನೆ. ತನ್ಮೂಲಕ ಸಚಿವ ಸ್ಥಾನದ ಘನತೆಯನ್ನು ಮಣ್ಣು ಪಾಲಾಗಿಸಿದ್ದಾನೆ.



ಪಂಚತಾರಾ ಹೋಟೆಲ್ ಹಾಗೂ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರೊಂದಿಗೆ ವ್ಯವಹಾರ ಕುದುರಿಸಿಕೊಳ್ಳುವ ಉತ್ಸಾಹದಲ್ಲಿರುವ ರೇಣುಕಾ, ಅದಕ್ಕೆ ಅಡ್ಡಗಾಲಾಗುವಂಥ ಸಂದರ್ಭವೆದುರಾದಾಗ ಪಕ್ಕಾ ಫಿಪ್ರೋಟ್‌ನಂತೆ ಎಗರಾಡುತ್ತಾನೆ. ಈತನ ಕಡೆಯಿಂದ ಮಧ್ಯರಾತ್ರಿ ಎರಡರವರೆಗೆ ಮದ್ಯ ಹಂಚುವ ಯೋಜನೆ ಹೊರಬೀಳುತ್ತಿದ್ದಂತೆಯೇ ಆಯುಕ್ತ ಬಿದರಿ ಅಪರಾಧ ಹೆಚ್ಚುತ್ತದೆಂಬ ಕಾರಣದಿಂದ ಅಪಸ್ವರವೆತ್ತಿದ್ದರು. ಘನತೆಯಿರುವವನಾದರೆ ರೇಣುಕಾ ಅವರೊಂದಿಗೆ ಚರ್ಚಿಸುತ್ತಿದ್ದ. ಆದರೆ.....

ರೇಣುಕಾಚಾರಿಯಿಂದ ಅಂತಹ ಜವಾಬ್ದಾರಿಯುತ ನಡಿಗೆಯನ್ನು ನಿರೀಕ್ಷಿಸುವುದೇ ಮೂರ್ಖತನ. ತನ್ನ ಖಾತೆಗೆ ಸರಿಯಾದ ವ್ಯಕ್ತಿತ್ವ ಹೊಂದಿರುವ ಈತ ತಲೆ ಬಲಿಯದ ಪುಢಾರಿಯಂತೆ ಒದರಾಡಲೂ ಬಲ್ಲ, ಅದರ ಮರುಕ್ಷಣವೇ 'ನಾ ಹಂಗೇಳಿಲ್ಲ' ಅಂತ ಮಳ್ಳನಂತೆ ಕೈ ಚೆಲ್ಲಲೂ ಬಲ್ಲ! ಯಡಿಯೂರಪ್ಪನವರ ಹೊರತಾಗಿ ಮತ್ಯಾರಿಗೂ ಈತ ಮನುಷ್ಯನೆಂದು ಫೀಲ್ ಆಗಲು ಸಾಧ್ಯವಿಲ್ಲ.

ಈತ ಎಂಥಾ ಬಫೂನ್ ಗಿರಾಕಿಯೆಂಬುದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಅವುಗಳಲ್ಲೆಲ್ಲಾ ಜನಾರ್ದನ ರೆಡ್ಡಿ ಯಡ್ಡಿ ವಿರುದ್ಧ ಬಂಡಾಯವೆದ್ದಾಗಿನ ಘಟನೆಯೊಂದು ಬಲುಮಜವಾಗಿದೆ. ರೆಡ್ಡಿ ತನ್ನ ಪಟಾಲಂನೊಂದಿಗೆ ಹೈದ್ರಾಬಾದ್ ರೆಸಾರ್ಟ್‌ಗೆ ಹಾರಿದ್ದನಲ್ಲಾ? ಆ ಟೀಮಿನಲ್ಲಿ ರೇಣುಕನೂ ಇದ್ದ. ಖಾಸಗಿ ಚಾನೆಲ್‌ನ ಮಂದಿ ರೆಸಾರ್ಟ್‌ಗೆ ಅಟಕಾಯಿಸಿಕೊಂಡು ರೇಣುಕನ ಮುಸುಡಿಗೆ ಕ್ಯಾಮೆರಾ ಹಿಡಿದರು. ಆಚಾರಿ- 'ನಾವು ಹೈದ್ರಾಬಾದಲ್ಲೇನು ಸುಮ್ನೆ ಕುಂತ್ಕಂಡಿಲ್ಲ, ಹಳ್ಳಿ ಹಳ್ಳಿಗೋಗಿ ಅಧ್ಯಯನ ನಡುಸ್ತಿದೀವಿ' ಅಂತ ವದರಿಬಿಟ್ಟ!



ಸ್ತ್ರೀಪೀಡಕ ಗುಣ ಹಾಗೂ ಅಬ್ಬೇಪಾರಿತನಗಳ ಜೊತೆಗೇ ಈ ರೇಣುಕನಿಗೆ ಸ್ಯಾಡಿಸ್ಟ್ ಮನೋಭಾವವೂ ಇದ್ದಂತಿದೆ. ಈತನ ಹೆಗಲಿಗೆ ಹೆಂಡದ 'ಭಾರ' ಬೀಳುತ್ತಲೇ 'ಕಳ್ಳಭಟ್ಟಿ ನಿಲ್ಲುಸ್ತೀನಿ' ಅಂತ ಎಗರಾಡಿದ ರೇಣುಕ ಹಳ್ಳಿಗಳತ್ತ ದೌಡಾಯಿಸಿದ್ದ. ಆ 'ಕಾರ್ಯಾಚರಣೆ'ಯಲ್ಲಿ ತಾಂಡಾವೊಂದಕ್ಕೆ ಭೇಟಿ ನೀಡಿದ ಈತ ಕೈಗೆ ಸಿಕ್ಕ ಕಳ್ಳಭಟ್ಟಿಯನ್ನು ಎಳೆಯ ಬಾಲಕನೊಬ್ಬನಿಗೆ ಕುಡಿಸಿದ್ದ! ಇದರ ಬಗ್ಗೆ ತಕರಾರೆತ್ತಿದರೆ 'ಹೆಂಗೆಂಗೆ ಪರಿಣಾಮ ಬೀರುತ್ತೆಂತ ಟೆಸ್ಟ್ ಮಾಡ್ತಿದೀನಿ' ಅಂದ! ಇದು ರೇಣುಕನ ಲಯತಪ್ಪಿದ ಮನಸ್ಥಿತಿಗೆ ಸಾಕ್ಷಿ.


ಅಷ್ಟಕ್ಕೂ ಈತನ ನಡವಳಿಕೆಗಳನ್ನು ಗಮನಿಸುತ್ತಿದ್ದರೆ 'ಬುದ್ಧಿ ಸ್ತಿಮಿತದಲ್ಲಿಲ್ಲವೇನೋ' ಅಂತೊಂದು ಅನುಮಾನ ಹುಟ್ಟುತ್ತದೆ. ಆದರ‍್ಯಾಕೋ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಎಡಬಿಡಂಗಿ ರೇಣುಕನ ಬಗ್ಗೆ ವಿಪರೀತ ಕಾಳಜಿಯಿದ್ದಂತಿದೆ. ಅದಿಲ್ಲದೆ ಹೋಗಿದ್ದರೆ ಪದೇಪದೆ ಯಡವಟ್ಟು ಸೃಷ್ಟಿಸುತ್ತಿರುವ ರೇಣುಕಾಚಾರಿಯನ್ನು ಸಂಪುಟದಲ್ಲಿಟ್ಟುಕೊಳ್ಳುತ್ತಿರಲಿಲ್ಲ.

ಇದೆಲ್ಲ ಏನೇ ಇರಲಿ, ಯಡ್ಡಿ ಕ್ಯಾಬಿನೆಟ್‌ನಲ್ಲಿ ಖಾತೆಗೆ ತಕ್ಕುದಾದ ವ್ಯಕ್ತಿತ್ವ ಹೊಂದಿರುವಾತ ರೇಣುಕನೊಬ್ಬನೆ! ಅಬ್ಕಾರಿ ಖಾತೆಗೆ ತಕ್ಕುದಾಗಿ ಅಮಲಲ್ಲೇ ಸಭೆ ನಡೆಸಿ, ಅಮಲಲ್ಲೇ ಹೇಳಿಕೆ ಎಸೆದು ಸಾರ್ವತ್ರಿಕವಾಗಿ ಅಮಲೇರಿಸುತ್ತಿದ್ದಾನೆ.

ಯಡಿಯೂರಪ್ಪನವರಿಗೆ ನಾಚಿಕೆಯೆಂಬುದಿದ್ದರೆ ರೇಣುಕಾಚಾರ್ಯನೆಂಬ ಅಸಹ್ಯವನ್ನು ಸಂಪುಟದಿಂದ ಹೊರಗಟ್ಟಲಿ, ಇಲ್ಲದಿದ್ದರೆ ಸಾರ್ವಜನಿಕ ಸಭೆ ನಡೆಸುವ ಮುನ್ನ ರೇಣುಕಾಚಾರ್ಯ 'ತೀರ್ಥ' ಸೇವಿಸಿದ್ದಾನೋ ಇಲ್ಲವೋ ಅಂತ ಖಚಿತಪಡಿಸಿಕೊಂಡು ಒಳಬಿಟ್ಟಾದರೂ ಪುಣ್ಯ ಕಟ್ಟಿಕೊಳ್ಳಲಿ!

• ಸಂತೋಷ್ ಬಾಗಿಲಗದ್ದೆ


ಬೆಂಗಳೂರು ಜಿಲ್ಲಾ ಪಂಚಾಯತಿ ಬಕಾಸುರ ಚಿತ್ತರಂಜನ್


ಚಿತ್ತರಂಜನ್

ಕರ್ನಾಟಕದ ಹಾಲಿ 29 ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಕರೆಪ್ಷನ್ ಕಾಂಪಿಟೇಶನ್ ನಡೆಸಿದರೆ ರೇಸ್‌ನಲ್ಲಿ ಮೊದಲ ಸ್ಥಾನ ಯಾರಿಗೆ ಸಿಗಬಹುದು ಗೊತ್ತೆ?

ಚಿತ್ತರಂಜನ್‌ಗೆ!

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯ ಸಿಇಓ ಆಗಿ ದರ್ಬಾರು ನಡೆಸುತ್ತಿರುವ ಇವನು ಹಣ ನುಂಗುತ್ತಿರುವ ವೇಗ ನೋಡಿ ಅನೇಕ ಭ್ರಷ್ಟ ಅಧಿಕಾರಿಗಳೇ ದಂಗುಬಡಿದುಹೋಗಿದ್ದಾರೆ. ತನ್ನ ಅಧೀನ ಅಧಿಕಾರಿಗಳಿಂದ ಹಾಗೂ ಬಡ ಜನರಿಗಾಗಿ ಇರುವ ಯೋಜನೆಗಳಿಂದ ದುಡ್ಡು ಕೀಳಲು ಈ ಚಿತ್ತರಂಜನ್ ಹಗಲುರಾತ್ರಿಯೆನ್ನದೆ ದುಡಿಯುತ್ತಿದ್ದಾನೆ. ಸಾಮ, ದಾನ, ಭೇದ ದಂಡ.... ಹೀಗೆ ಚತುರೋಪಾಯಗಳನ್ನೂ ಬಳಸುತ್ತಿದ್ದಾನೆ.



ಕೋಲಾರ ಜಿಲ್ಲೆಯ ಬಾಗೇಪಲ್ಲಿಯವನಾದ ಚಿತ್ತರಂಜನ್‌ಗೆ ಮುಂದಿನ ಅಕ್ಟೋಬರ್‌ನಲ್ಲಿ ನಿವೃತ್ತಿಯಾಗುತ್ತಿದೆ. ಅಷ್ಟರೊಳಗೆ ಶಕ್ತಿಮೀರಿ ಹಣ ಮಾಡಬೇಕೆಂದು ತೀರ್ಮಾನಿಸಿ ಸರ್ಕಾರಿ ಖಜಾನೆಗೇ ತೂತು ಕೊರೆದು ಕುಳಿತಿದ್ದಾನೆ.

ಭ್ರಷ್ಟರಿಗೇ ಬೆಂಬಲ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯಲ್ಲಿ ಈ ಹಿಂದೆ ವಂದನಾ ಗುರ್ನಾನಿ, ಮಂಜುಳಾ ತರದ ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ಐಎಎಸ್ ಆಫೀಸರ್‌ಗಳು ಸಿಇಓ ಆಗಿ ಕೆಲಸ ಮಾಡಿಹೋಗಿದ್ದಾರೆ. ಇವರ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆದಿದ್ದವು. ಭ್ರಷ್ಟ ಅಧಿಕಾರಿಗಳಿಗೆ ಭಯವೂ ಇತ್ತು, ಆದರೆ ಯಾವಾಗ ಚಿತ್ತರಂಜನ್ ಸಿಇಓ ಆಗಿ ಬಂದನೋ ಭ್ರಷ್ಟಾಚಾರವೇ ಫುಲ್‌ಟೈಂ ಬ್ಯುಸಿನೆಸ್ ಆಗಿಬಿಟ್ಟಿದೆ.

ಈಗ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ನರೇಗಾ) ನೂರಾರು ಕೋಟಿ ರೂಪಾಯಿಗಳ ಅನುದಾನ ಕೇಂದ್ರ ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ಹರಿದುಬರುತ್ತಿದೆ. ಅಷ್ಟೇ ಪ್ರಮಾಣದಲ್ಲಿ ಅನುದಾನದ ದುರುಪಯೋಗವೂ ಆಗುತ್ತಿದೆ. ಈ ಹಣ ಬಳಕೆ ಬಗ್ಗೆ ನಿಗಾ ಇಡಲು ಸೋಷಿಯಲ್ ಆಡಿಟಿಂಗ್ ಎಂಬ ವ್ಯವಸ್ಥೆಯಿದೆ. ಚಿತ್ತರಂಜನ್ ಹಣ ವಸೂಲಿಗೆ ಇದನ್ನೇ ಅಸ್ತ್ರ ಮಾಡಿಕೊಂಡಿದ್ದಾನೆ. ನರೇಗಾ ಹಣವನ್ನು ಯಾವ್ಯಾವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ದುರುಪಯೋಗಮಾಡಿಕೊಂಡಿದ್ದಾರೆಂದು ಅಥವಾ ಲೆಕ್ಕಪತ್ರ ನಿರ್ವಹಣೆ ಸರಿಯಾಗಿ ಮಾಡಿಲ್ಲವೆಂದು ಮೊದಲು ಪತ್ತೆ ಹಚ್ಚುತ್ತಾನೆ ಚಿತ್ತರಂಜನ್. ಆಮೇಲೆ ಇವನ ಡೀಲ್‌ಗಳು ಶುರುವಾಗುತ್ತದೆ. ಸಸ್ಪೆಂಡ್ ಬೆದರಿಕೆ ಹಾಕಿ ಕದ್ದ ಹಣದ ಅರ್ಧ ಭಾಗ ತಾನೇ ವಸೂಲಿ ಮಾಡಿಕೊಳ್ಳುವ ಕಿಲಾಡಿ ಇವನು. ಹಫ್ತಾ ಕೊಡದವರಿಗೆ ಸಸ್ಪೆಂಡ್ ಶಿಕ್ಷೆ ಗ್ಯಾರಂಟಿ.

ನೆಲಮಂಗಲ ತಾಲ್ಲೂಕಿನ ಇಂಜಿನಿಯರ್‌ಗಳಾದ ಆನಂದ್ ಕುಮಾರ್, ನಾರಾಯಣ್ ಹಾಗೂ ದೊಡ್ಡಬಳ್ಳಾಪುರ ರಾಮಕೃಷ್ಣಯ್ಯ ಈಗಾಗಲೇ ಸಸ್ಪೆಂಡಾಗಿದ್ದಾರೆ. ಅದೇ ರೀತಿ ನರೇಗಾ ಹಣ ದುರುಪಯೋಗಮಾಡಿಕೊಂಡು ಚಿತ್ತರಂಜನ್‌ಗೆ ಮಾಮೂಲಿ ಕೊಡದ ಕಾರಣಕ್ಕೆ ಐವರು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳೂ ಈಗ ಸಸ್ಪೆಂಡಾಗಿದ್ದಾರೆ.



ಮಣ್ಣೆ ಗ್ರಾಮ ಪಂಚಾಯತಿಯ ಭೈರಣ್ಣ, ಗಂಟಿಗಾನಹಳ್ಳಿಯ ವರದರಾಜ್, ಆರೂಡಿ ಗ್ರಾಮ ಪಂಚಾಯ್ತಿನ ಕಾರ್ಯದರ್ಶಿ ಶಿವಾನಂದ್, ದೊಡ್ಡ ತುಮಕೂರಿನ ಭಾಗ್ಯಮ್ಮ ಈಗ ಅಮಾನತ್ತಾಗಿದ್ದಾರೆ.

ಇವರಿಗೆ ಸಸ್ಪೆಂಡ್ ಶಿಕ್ಷೆ ನೀಡಿರುವುದು ಸರಿಯಾಗೇ ಇದೆ. ಆದರೆ ಪ್ರಶ್ನೆ ಏನೆಂದರೆ ಇದೇ ತರದ ಆರೋಪಗಳಿದ್ದ ಬೇರೆ ಅಧಿಕಾರಿಗಳನ್ನು ಸಿಇಓ ಚಿತ್ತರಂಜನ್ ರಕ್ಷಿಸುತ್ತಿದ್ದಾನೆ.

ದೇವನಹಳ್ಳಿ ತಾಲ್ಲೂಕಿನ ಇಂಜಿನಿಯರ್ ಶಂಕರಾಚಾರಿ, ಯಲಿಯೂರು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಮುರುಡಯ್ಯ, ಹಾರೋಹಳ್ಳಿ ಕಾರ್ಯದರ್ಶಿ ಶಂಕರಯ್ಯ ಮುಂತಾದವರು ಚಿತ್ತರಂಜನ್ ಸಾಹೇಬರಿಗೆ ಲಂಚ ತಿನ್ನಿಸಿ ಸಸ್ಪೆಂಡ್ ಶಿಕ್ಷೆಯಿಂದ ಪಾರಾಗಿಬಿಟ್ಟಿದ್ದಾರೆ.

ಇದೆಲ್ಲಾ ಲಕ್ಷಾಂತರ ರೂಪಾಯಿಗಳ ಹಣ ದುರುಪಯೋಗದ ಪ್ರಕರಣಗಳಾಗಿವೆ.

ಚೋರ ವಿದ್ಯಾ ಪ್ರವೀಣ

ಚಿತ್ತರಂಜನ್ ಹಣ ಕಬಳಿಕೆಯ ಅನೇಕ ಚೋರ ವಿದ್ಯೆಗಳನ್ನು ಕಲಿತುಕೊಂಡಿದ್ದಾನೆ. ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಯಾವುದೇ ಇಲಾಖೆಯಿರಲಿ, ಅವರಿಗೆ ಅನುದಾನ ಬಿಡುಗಡೆ ಮಾಡುವಾಗ ಇಂತಿಷ್ಟು ಪರ್ಸೆಂಟೇಜ್ ಹಣ ಅವನಿಗೆ ಕೊಡಲೇಬೇಕೆಂಬ ನಿಯಮ ಮಾಡಿದ್ದಾನೆ. ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಂದ, ತಾಲ್ಲೂಕು ಪಂಚಾಯತಿ ಎಕ್ಸಿಗ್ಯೂಟಿವ್ ಆಫೀಸರ್‌ಗಳಿಂದಲೂ ಹಣ ಕೀಳುವ ದುರಭ್ಯಾಸ ಇವನಿಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಚ್ಚೇಗೌಡನಿಗೆ ಭ್ರಷ್ಟ ಆಫೀಸರ್‌ಗಳೆಂದರೆ ವಿಶೇಷ ಗೌರವ. ಚಿತ್ತರಂಜನ್‌ಗೆ ಬಾಗೇಪಲ್ಲಿಯಲ್ಲಿ ಒಂದಷ್ಟು ಜಮೀನು ಹಾಗೂ ಮನೆ ಇದೆ. ಅದನ್ನು ಇಂಪ್ರೂವ್ ಮಾಡಿಸಲು ಇವನೆಂಥ ಉಪಾಯ ಮಾಡಿದ್ದಾನೆ ಗೊತ್ತೆ? ಬೆಂಗಳೂರು ಜಿಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನ (PRED) ಮುಖ್ಯ ಇಂಜಿನಿಯರ್ ವೇಣುಗೋಪಾಲ್‌ನ ಮೂಲಕ ಬಾಗೇಪಲ್ಲಿಯಲ್ಲಿರುವ ತನ್ನ ಜಮೀನಿನಲ್ಲಿ ಬೋರ್‌ವೆಲ್ ಹಾಕಿಸುವಂತೆ ಒತ್ತಡ ಹೇರಿದ್ದಾನೆ. ಇದು ಸರ್ಕಾರಿ ರಿಗ್ ಬಳಸಿ ತನಗೊಂದು ಸ್ವಂತ ಬೋರ್‌ವೆಲ್ ಕೊರೆಸಿಕೊಳ್ಳುವ ಪ್ಲಾನ್. ಅದೇರೀತಿ ದೇವನಹಳ್ಳಿಯ ಭ್ರಷ್ಟ ಇಂಜಿನಿಯರ್ ಶಂಕರಾಚಾರಿಗೆ "ಸಸ್ಪೆಂಡ್ ಮಾಡಿಬಿಡ್ತೀನಿ ಹುಷಾರ್" ಎಂದು ಗದರಿಸಿ ಬಾಗೇಪಲ್ಲಿಯಲ್ಲಿರುವ ತನ್ನ ಮನೆಯನ್ನು ರಿಪೇರಿ ಮಾಡಿಸುವಂತೆ ಬೆದರಿಸಿದ್ದಾನೆ. ಚಿತ್ತರಂಜನ್‌ಗೆ ಇಂಥವರನ್ನು ಕಂಡರೆ ಬಹಳ ಖುಷಿ, ಹಣ ಕೇಳಬಹುದಲ್ಲ ಎಂದು. ದಕ್ಷರು, ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ಅವನಿಗೆ ಚೂರು ಗಮನವಿರುವುದಿಲ್ಲ.

ಚಿತ್ತರಂಜನ್‌ಗೆ ಹಣ ಮಾಡಲು ಈಗ ಸಿಬ್ಬಂದಿಗಳ ಪ್ರಮೋಶನ್ ವಿಷಯವೂ ಸಿಕ್ಕಿದೆ. 23 ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ ಇತ್ತೀಚೆಗೆ ಪಿಡಿಓಗಳಾಗಿ ಪ್ರಮೋಶನ್ ಕೊಡುವಾಗ ತಲಾ ಐವತ್ತು ಸಾವಿರದಿಂದ ಒಂದೂಕಾಲು ಲಕ್ಷದ ತನಕ ಹಣ ವಸೂಲಿ ಮಾಡಿಕೊಂಡಿದ್ದಾನೆ. ಬಿಲ್ ಕಲೆಕ್ಟರ್‌ಗಳಿಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗೆ ಭಡ್ತಿ ಕೊಡುವಾಗಲೂ ಆಯಾ ಗ್ರಾಮ ಪಂಚಾಯತಿಯ ಗಾತ್ರ, ಆದಾಯ ಲೆಕ್ಕ ಹಾಕಿ ಹಣ ಕಿತ್ತಿದ್ದಾನೆ.

ಬೆಂಗಳೂರು ಗ್ರಾಮ ಪಂಚಾಯತಿ ಜಿಲ್ಲಾ ಪಂಚಾಯತಿಯ ಮೆಂಬರ್‌ಗಳು ಇವೆಲ್ಲಾ ಗೋಳುಗಳನ್ನು ಹೇಳಿಕೊಂಡು ತಿರುಗುತ್ತಿದ್ದಾರೆ. "ಚಿತ್ತರಂಜನ್ ಬೆಂಗಳೂರು ಜಿಲ್ಲಾ ಪಂಚಾಯತಿಯ ಬಕಾಸುರ" ಎಂದು ಉಗಿಯುತ್ತಿದ್ದಾರೆ. ಆದರೆ ಅಧ್ಯಕ್ಷೆ ಜಯಕುಮಾರಿ ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. "ಹೋದ ಪುಟ್ಟ-ಬಂದ ಪುಟ್ಟ" ಶೈಲಿಯ ಆಡಳಿತ ಈಕೆಯದ್ದು. ಇನ್ನು ದೂರು ಹೇಳೋಣವೆಂದರೆ ಇಲಾಖಾ ಸಚಿವ ಜಗದೀಶ್ ಶೆಟ್ಟರ್ ನಿಷ್ಪ್ರಯೋಜಕ. ಈತ ಮಂತ್ರಿಯೆಂಬುದು ಸಾರ್ವಜನಿಕರಿಗಿರಲಿ ಗ್ರಾಮೀಣಾಭಿವೃದ್ಧಿ ಇಲಾಖಾ ಸಿಬ್ಬಂದಿಯ ಅರಿವಿಗೂ ಬರುತ್ತಿಲ್ಲ.


ಇಂಥವರಿಂದ ಗ್ರಾಮೀಣಾಭಿವೃದ್ಧಿ ಸಾಧ್ಯವೆ?

ಬಕಾಸುರ ಚಿತ್ತರಂಜನ್ ಬಾಯಿಗೆ ಬೀಗ ಹಾಕುವವರ‍್ಯಾರು?

• ವರದಿಗಾರ

ಇಸ್ಪೀಟು, ರಿಯಲ್ ಎಸ್ಟೇಟು, ಟೆಂಡರ್ ಕಮೀಷನ್ನು

ಬಸವನಗುಡಿ ಎಮ್ಮೆಲ್ಲೇ ನಾಪತ್ತೆ?



ಬಹುಶಃ ಬಸವನಗುಡಿಯ ಜನ ಮುಖ್ಯಮಂತ್ರಿಯವರನ್ನಾದರೂ ಭೇಟಿ ಮಾಡಬಹುದೇ ಹೊರತು ಶಾಸಕರನ್ನು ಕಾಣುವುದು ಬಲು ಕಷ್ಟ. ರವಿಸುಬ್ರಹ್ಮಣ್ಯ ಬಸವನಗುಡಿಯಿಂದ ಗೆದ್ದು ಎಮ್ಮೆಲ್ಲೇಯಾಗಿ ಅದೆಷ್ಟು ದಿನಗಳಾದವೋ? ಗೆದ್ದ ನಂತರ ಅವರನ್ನು ಕಣ್ಣಾರೆ ಕಂಡವರೇ ಅಪರೂಪ. ಪಿಎ ಗಣೇಶ ಮತ್ತು ಅಣ್ಣ ಚಂದ್ರಶೇಖರನ ಕೈಗೆ ತನ್ನ ಎಮ್ಮೆಲ್ಲೇಗಿರಿಯನ್ನು ಒಪ್ಪಿಸಿ ತನ್ನ ಇಸ್ಪೀಟಾಯಿತು, ರಿಯಲ್ ಎಸ್ಟೇಟ್ ಕಸುಬಾಯಿತು ಎಂಬಂತೆ ಹಾಯಾಗಿರುವ ರವಿಸುಬ್ರಹ್ಮಣ್ಯರನ್ನು ಸದ್ಯಕ್ಕಂತೂ ಬಸವನಗುಡಿ ಮಂದಿ ಕಾಣಲು ಸಾಧ್ಯವಿಲ್ಲ. ಈ ಪುರುಷಾರ್ಥಕ್ಕೆ ಜನ ಬಿಜೆಪಿಗೆ ಓಟು ಕೊಡಬೇಕಿತ್ತಾ?

ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯರನ್ನು ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನ ಕೊಡುವ ಕಾಲ ಸಮೀಪಿಸುತ್ತಿದೆ!

ಬೆಂಗಳೂರಿನ ಮಿಕ್ಕೆಲ್ಲಾ ಶಾಸಕರು ಒಂದಲ್ಲಾ ಒಂದು ...ಥೆಯಲ್ಲೋ ಅಥವಾ ಗಿಮಿಕ್ ಮಾಡಿಕೊಂಡೋ ಕಾಲ ಕಳೆಯುತ್ತಿದ್ದರೆ ರವಿಸುಬ್ರಹ್ಮಣ್ಯ ಎಲ್ಲಿದ್ದಾರೆ? ಏನಾಗಿದ್ದಾರೆ? ಯಾರಿಗೂ ಗೊತ್ತಿಲ್ಲ. ಜನ ಎಮ್ಮೆಲ್ಲೆಯನ್ನು ಕಾಣಬೇಕೆಂದರೆ ಗಿರಿನಗರದ ಕೃಷ್ಣ ಭಟ್ಟನ ಮನೆ ಹಿಂದಿರುವ ರವಿಸುಬ್ರಹ್ಮಣ್ಯರ ಖಾಸಗಿ ಬಂಗಲೆಗೆ ಬರಬೇಕು. ಅಲ್ಲಿ ದಿನದ ಇಪ್ಪತ್ನಾಲ್ಕು ಗಂಟೆಯೂ ವಿಶ್ವಭಾರತಿ ಲೇಔಟಿನ ಸೈಟು ಗೋಲ್‌ಮಾಲ್ ಪ್ರವೀಣ ಮಂಜನ ರೌಡಿ ಗ್ಯಾಂಗು ಅಡ್ಡೆ ಹಾಕಿರುತ್ತದೆ. ಇಂಥ ರಿಯಲ್ ಎಸ್ಟೇಟ್ ಕಿರಾತಕರ ಕಣ್ಣುತಪ್ಪಿಸಿ ಹೇಗಾದರೂ ಶಾಸಕರನ್ನು ನೋಡಬೇಕೆಂದರೆ ಅದಕ್ಕೂ ಎಮ್ಮೆಲ್ಲೇ ಅಣ್ಣ ಚಂದ್ರಶೇಖರ್ ಕಲ್ಲು ಹಾಕುತ್ತಾರೆ.

'ನಾನೇ ಎಮ್ಮೆಲ್ಲೇ ಅಣ್ಣ ಅಲ್ವೇನ್ರೀ? ಅದೇನು ಹೇಳ್ಬೇಕೋ ನನಗೆ ಹೇಳ್ರೀ....?' ಎನ್ನುತ್ತಾನೆ ರವಿಸುಬ್ರಹ್ಮಣ್ಯರ ಖಾಸಾ ಅಣ್ಣ ಚಂದ್ರಶೇಖರ್!

ಹಾಗೊಮ್ಮೆ ಅಣ್ಣ ಚಂದ್ರಶೇಖರನ ಕಣ್ಣನ್ನೂ ತಪ್ಪಿಸಿ ಶಾಸಕರನ್ನು ಕಂಡು ಕಷ್ಟ ಹೇಳಿಕೊಳ್ಳಬೇಕೆಂದರೆ ಅದಕ್ಕೂ ಹರಸಾಹಸ ಮಾಡಬೇಕು. ಏಕೆಂದರೆ ಗಣೇಶ್ ಎಂಬ ಎಮ್ಮೆಲ್ಲೇ ಭಟ್ಟಂಗಿಯೊಬ್ಬ ಅಪ್ಪಿತಪ್ಪಿಯೂ ಶಾಸಕರ ಭೇಟಿಗೆ ಅವಕಾಶ ಕಲ್ಪಿಸಲಾರ. 'ಅದೇನು ಪ್ರಾಬ್ಲಮ್ ಐತೋ ನನ್ನತ್ರಾನೇ ಹೇಳ್ರೀ! ಅಲ್ರೀ ಇಂಥಾ ...ಪ್ರಿ ಕೆಲಸಕ್ಕೆಲ್ಲ ಎಮ್ಮೆಲ್ಲೇನೇ ಬರಬೇಕಾ?.....' ಇದು ರವಿಸುಬ್ರಹ್ಮಣ್ಯರ ಪಿಎ ಅರ್ಥಾತ್ ಭಟ್ಟಂಗಿ ಗಣೇಶನ ವರಸೆ....



ಬಹುಶಃ ಬಸವನಗುಡಿಯ ಜನ ಮುಖ್ಯಮಂತ್ರಿಯವರನ್ನಾದರೂ ಭೇಟಿ ಮಾಡಬಹುದೇ ಹೊರತು ಶಾಸಕರನ್ನು ಕಾಣುವುದು ಬಲು ಕಷ್ಟ. ರವಿಸುಬ್ರಹ್ಮಣ್ಯ ಬಸವನಗುಡಿಯಿಂದ ಗೆದ್ದು ಎಮ್ಮೆಲ್ಲೇಯಾಗಿ ಅದೆಷ್ಟು ದಿನಗಳಾದವೋ? ಗೆದ್ದ ನಂತರ ಅವರನ್ನು ಕಣ್ಣಾರೆ ಕಂಡವರೇ ಅಪರೂಪ. ಅಂಥಾ ಕೆಲಸವೇನಿದೆ? ಮಂತ್ರಿಯಲ್ಲ, ಪಕ್ಷದ ಸಂಘಟನೆಗೆಂದು ಲೋಕಸಂಚಾರ ಹೊರಟಿದ್ದಾರೆಂದರೆ ಅದೂ ಇಲ್ಲ, ಪಕ್ಷದ ಲೆಕ್ಕಕ್ಕೆ ಈತ ಏನೇನೂ ಅಲ್ಲ, ಯಾವುದೇ ನಿಗಮ ಮಂಡಳಿಗೂ ಅಧ್ಯಕ್ಷನಲ್ಲ. ಅಂಥಾ ಪಾಲಿಕೆ ಚುನಾವಣೆಯ ಹರಾಬರಿಯಲ್ಲೂ ಶಾಸಕ ಮಹಾಶಯರೇ ನಾಪತ್ತೆಯಾಗಿದ್ದರಂತೆ.

ಹಾಗಾದರೆ ರವಿಸುಬ್ರಹ್ಮಣ್ಯ ಅಂಥಾ ಬಿಡುವಿಲ್ಲದ ಯಾವ ಘನಂದಾರಿ ಕೆಲಸಕ್ಕೆ ಕೈಹಾಕಿದ್ದಾರೆ? ಜನಕ್ಕೆ ಮುಖವನ್ನೇ ತೋರಿಸಲಾಗದಂಥ ಯಾವ ಪೇಚಾಟಕ್ಕೆ ಎಮ್ಮೆಲ್ಲೇ ಸಾಹೇಬರು ಸಿಲುಕಿರಬಹುದು?

ನಂಬಿದರೆ ನಂಬಿ ಬಿಟ್ಟರೆ ಬಿಡಿ, ಬಸವನಗುಡಿ ಶಾಸಕರಿಗೆ ವಿಪರೀತ ಇಸ್ಪೀಟು ಹುಚ್ಚಂತೆ. ದಿನ ಬೆಳಗ್ಗೆಯಾದರೆ ಕ್ಷೇತ್ರ ಪ್ರದಕ್ಷಿಣೆಗೆ ಅಂತಲೋ, ಮುಖ್ಯಮಂತ್ರಿಯ ಜೊತೆ ಮಾತುಕತೆ ಅಂತಲೋ ಅಥವಾ ಪಾರ್ಟಿ ಮೀಟಿಂಗ್ ಇದೆ ಅಂತಲೋ ...ರುಕುತ್ತಿ ಹೊರಟರೆಂದರೆ, ಹೊಸೂರಿನ ತಮ್ಮ ಫಾರ್ಮ್ ಹೌಸಿನಲ್ಲೋ, ಕೃಷ್ಣ ಭಟ್ಟನ ಸಾಕು ರೌಡಿ ಮಂಜನ ಗಿರಿನಗರದ ಅಡ್ಡೆಯಲ್ಲೋ ಇಸ್ಪೀಟ್ ಕಾಯಕದಲ್ಲಿ ತಲ್ಲೀನರಾಗಿ ಬಿಡುತ್ತಾರಂತೆ!

ಬಸವನಗುಡಿಯ ಜನ ಓಟುಕೊಟ್ಟು ಗೆಲ್ಲಿಸಿದ್ದೂ ಸಾರ್ಥಕವಾಯಿತು!

ಇರಲಿ, ಕನಿಷ್ಠ ಎಲೆಕ್ಷನ್ನಿನಲ್ಲಿ ಹಾಕಿದ ಬಂಡವಾಳವನ್ನಾದರೂ ದುಡಿದುಕೊಳ್ಳಬೇಡವೆ? ಅದಕ್ಕಾದರೂ ದೀಲುಪಾಲು ಬೇಡವೆ? ದಿನವಿಡೀ ಇಸ್ಪೀಟು ತಟ್ಟುತ್ತಾ ಕೂತೇ ಎಮ್ಮೆಲ್ಲೇಗಿರಿ ಕಳೆದುಹೋದರೆ ಏನು ಗತಿ ಎಂಬ ಪರಿವೆಯಾದರೂ ಎಮ್ಮೆಲ್ಲೇ ಸಾಹೇಬರಿಗೆ ಇರಬೇಕಲ್ಲವೆ?

ಈ ವಿಷಯದಲ್ಲಿ ಮಾತ್ರ ರವಿಸುಬ್ರಹ್ಮಣ್ಯ ಪಕ್ಕಾ ಕಸುಬುದಾರರೇ ಸರಿ. ಒಂದು ಮೂಲದ ಪ್ರಕಾರ ಬಸವನಗುಡಿಯೊಂದಕ್ಕೆ ಇನ್ನೂರೈವತ್ತು ಕೋಟಿಗೂ ದೊಡ್ಡ ಮೊತ್ತದ ಅನುದಾನ ಬಿಡುಗಡೆಯಾಗಿದೆ. ಈ ಪೈಕಿ ಕನಿಷ್ಠ ಹತ್ತು ಪರ್ಸೆಂಟೆಂದರೂ ಕಮ್ಮಿಗೆ ಕಮ್ಮಿ ಇಪ್ಪತ್ತೈದು ಕೋಟಿ ಕಾಲುಬುಡಕ್ಕೇ ಬಂದು ಬೀಳುತ್ತದೆ. ಸದ್ಯ ಕೌನ್ಸಿಲರ್‌ಗಳು ಗೆದ್ದು ಪಾಲಿಕೆ ಅಸ್ತಿತ್ವದಲ್ಲಿದೆಯಾದರೂ ಈಗ ಶುರುವಾಗಿರುವ ಕಾಮಗಾರಿಗಳೆಲ್ಲದರ ಟೆಂಡರ್ ಪ್ರಕ್ರಿಯೆ ಯಾವತ್ತೋ ಪರಿಸಮಾಪ್ತಿಗೊಂಡಿದೆ. ಇದರಲ್ಲಿ ಬಸವನಗುಡಿ ಪೊಲೀಸ್ ಠಾಣೆ ಪಕ್ಕದ ಅಂಡರ್‌ಪಾಸ್‌ನ ಟೆಂಡರ್ ಮೊತ್ತವೇ ಹತ್ತೊಂಭತ್ತು ಕೋಟಿ. ಇಂಥ ಭಾರೀ ಮೊತ್ತದ ಕಾಮಗಾರಿ ಕಾಂಟ್ರಾಕ್ಟ್ ಗಿಟ್ಟಿಸಿದ ಪಿ.ಎಂ. ಕನ್ಸ್‌ಟ್ರಕ್ಷನ್‌ನ ಧಣಿ ಜಗನ್ನಾಥ್ ಶಾಸಕ ರವಿಸುಬ್ರಹ್ಮಣ್ಯರ ಪರಮಾಪ್ತ.



ಬಸವನಗುಡಿ ಅಂಡರ್‌ಪಾಸ್ ಅವಧಿಯೊಳಗೆ ಪೂರ್ಣಗೊಳ್ಳುತ್ತಾ? ಅಥವಾ ಕಟ್ಟಿದ ವರ್ಷಕ್ಕೇ ಕುಸಿದು ಬೀಳುತ್ತಾ? ಗೊತ್ತಿಲ್ಲ. ಆದರೆ ರವಿಸುಬ್ರಹ್ಮಣ್ಯರಿಗೆ ಬರಬೇಕಾದ ಹತ್ತು ಪರ್ಸೆಂಟ್ ಕಮೀಷನ್ ಮಾತ್ರ ನಯಾಪೈಸೆಗೂ ಕಮ್ಮಿಯಿಲ್ಲದಂತೆ ಶಾಸಕರ ಜೇಬು ಸೇರಿದೆಯಂತೆ ಅದೂ ವರ್ಕ್ ಆರ್ಡರ್ ಕೊಡುವುದಕ್ಕೂ ಮುನ್ನ ತಮ್ಮ ಪಾಲಿನ ಕಮಿಷನ್ ಗೆಬರಿಕೊಂಡೇ ಕೊಟ್ಟಿದ್ದಾರಂತೆ.

ಈ ಥರದ ಬೃಹತ್ ಕಾಮಗಾರಿಗಳು ಒಂದಾ ಎರಡಾ? ಇತಿಹಾಸ ಪ್ರಸಿದ್ಧ ಕೆಂಪಾಂಬುಧಿ ಕೆರೆಯ ಕಾಯಕಲ್ಪಕ್ಕೆಂದೇ ನಾಲ್ಕು ಕೋಟಿ ತೊಂಭತ್ತು ಲಕ್ಷದ ಕಣ್‌ಕಟ್ಟು ಪ್ರಾಜೆಕ್ಟ್ ಒಂದನ್ನು ರವಿಸುಬ್ರಹ್ಮಣ್ಯ ರೂಪಿಸಿದ್ದಾರೆ. ಕೆಂಪಾಂಬುಧಿ ಕೆರೆಗೆ ಹೂಳೆತ್ತಿ ಅಲ್ಲಿದ್ದ ಮೋರಿ ನೀರನ್ನು ಇನ್ನೆಲ್ಲಿಗೋ ಹರಿಯಬಿಟ್ಟು ಅಲ್ಲಿಗೆ ಇನ್ನೆಲ್ಲಿಂದಲೋ ಗಂಗೆಯನ್ನು ಹರಿಸಿ ಹಾಗೇ ರೂಪುಗೊಂಡ ಕೆರೆಯಲ್ಲಿ ದೋಣಿ ವಿಹಾರ ಏರ್ಪಡಿಸುವುದಂತೆ!

ಈ ಹಿಂದೆ ಚಂದ್ರಶೇಖರ್ ಎಮ್ಮೆಲ್ಲೇಯಾಗಿದ್ದಾಗಲೇ ಕೆಂಪಾಂಬುಧಿ ಕೆರೆ ಉದ್ಧಾರಕ್ಕೆಂದು ಕೋಟಿಗಟ್ಟಲೇ ರೊಕ್ಕ ಪೋಲಾಗಿದೆ. ಕೆರೆ ಮಾತ್ರ ಅದೇ ದುರ್ಗತಿಯಲ್ಲೇ ಗಬ್ಬುನಾತ ಬೀರುತ್ತಿದೆ. ಕೆರೆ ಅಂಗಳದ ಜಮೀನು ಕೂಡ ಓಟ್‌ಬ್ಯಾಂಕ್ ರಾಜಕೀಯಕ್ಕಾಗಿ ತಮಿಳು ವಲಸಿಗರಿಂದ ಒತ್ತುವರಿಯಾಗಿದೆ. ಮಳೆ ನೀರು ಹರಿದುಬರುವುದಕ್ಕೂ ಭೂಮಿ ಅಂತ ಉಳಿದಿಲ್ಲ. ಈಗ ಹೆಚ್ಚೂಕಮ್ಮಿ ಐದು ಕೋಟಿ ಸುರಿದು ಹೂಳೆತ್ತಲು ಹೋದರೆ ಅದೆಷ್ಟು ಅಂತ ಹೂಳೆತ್ತಲು ಸಾಧ್ಯ? ಹಾಗೊಮ್ಮೆ ಹೂಳೆತ್ತಿ ಅಲ್ಲಿದ್ದ ಮೋರಿ ನೀರನ್ನು ಖಾಲಿ ಮಾಡಿದರೂ ಹೊಸನೀರು ಅದೆಲ್ಲಿಂದ ಬರಲು ಸಾಧ್ಯ? ಇನ್ನೆಲ್ಲಿಂದಲೋ ಲಾರಿಗಳಲ್ಲಿ ನೀರು ತಂದು ಅದನ್ನು ಕೆರೆಗೆ ಸುರಿದು ಅಲ್ಲಿ ಬೋಟಿಂಗ್ ಮಾಡುವುದು ಎಲ್ಲಾದರೂ ಉಂಟಾ? ಇಷ್ಟೇ ಪ್ರಮಾಣದ ಹೂಳೆತ್ತಿದ್ದಾರೆಂದು ಯಾರು ಲೆಕ್ಕ ಇಡಬೇಕು?

ಒಂದೇ ಮಾತಲ್ಲಿ ಹೇಳಬೇಕೆಂದರೆ ಇದು ಕೆಂಪಾಂಬುಧಿ ಕಾಯಕಲ್ಪ ಎಂಬುದಕ್ಕಿಂತಲೂ ಬೋಗಸ್ ಬಿಲ್ ಕೈಚಳಕವಷ್ಟೇ. ಬೆಂಗಳೂರಿನ ಪ್ರತಿ ವಾರ್ಡುಗಳಲ್ಲಿ ಮೋರಿ ಸಿಲ್ಟ್ ಎತ್ತುವ ಬೋಗಸ್ ಬಿಲ್ ದಂಧೆಯ ವಿರಾಟ್ ರೂಪದ ಯೋಜನೆಯೇ ಕೆಂಪಾಂಬುಧಿ ಕಾಯಕಲ್ಪದ ನೆಪದಲ್ಲಿ ಹೊಸರೂಪ ಧರಿಸಿದೆ. ಈ ಪಾಟಿ ಮೊತ್ತದ ಹೂಳೆತ್ತಲಾಗಿದೆ ಎಂದು ಯಾರೋ ಇಂಜಿನಿಯರ್ ಸಾಕ್ಷಿ ಹೇಳುತ್ತಾನೆ. ಮೋರಿ ನೀರು ಹರಿಸಿದ ಲೆಕ್ಕಕ್ಕೇ ಒಂದೆರಡು ಕೋಟಿಯ ಬಿಲ್ ಜಡಿಯುತ್ತಾರೆ. ಒಂದೆರಡು ವಾರದ ಮಟ್ಟಿಗೆ ಲಾರಿಗಳಲ್ಲಿ ನೀರು ಹರಿಸಿ ಉದ್ಘಾಟನೆಯ ದಿನ ಒಂದೆರಡು ದೋಣಿ ತೇಲಿಸಿ ಅದರ ಮರುದಿನ 'ನೀರೆ ಇಲ್ಲ, ಮಳೆ ಬಂದು ನೀರು ಹರಿದ ನಂತರವೇ ದೋಣಿ ವಿಹಾರ ಸಾಧ್ಯ.....!' ಎಂದು ಕೈತೊಳೆದುಕೊಳ್ಳುವುದು ಕೆಂಪಾಂಬುಧಿ ಉದ್ಧಾರಕರ ಹುನ್ನಾರ.

ಐದು ಕೋಟಿಯಷ್ಟು ದುಡ್ಡು ಪೋಲಾಗುವುದು ಬಿಟ್ಟರೆ ಕಾಂಕ್ರೀಟ್ ಕಾಡಿನ ನಡುವಿರುವ ಕೆಂಪಾಂಬುಧಿಯಲ್ಲಿ ದೋಣಿ ವಿಹಾರ ನಡೆಸುತ್ತೇವೆನ್ನುವುದೇ ಮಹಾಮೋಸ. ಇಂಥ ಗೋಲ್‌ಮಾಲ್ ಯೋಜನೆ ರೂಪಿಸಿ ಅದಕ್ಕೆ ನಾಲ್ಕು ಕೋಟಿ ತೊಂಭತ್ತು ಲಕ್ಷದಷ್ಟು ದುಡ್ಡು ಬಿಡುಗಡೆ ಮಾಡಿಸಿಕೊಂಡ ಶಾಸಕ ರವಿಸುಬ್ರಹ್ಮಣ್ಯರ ಕೈಚಳಕಕ್ಕೆ ಬರಬೇಕಾದ ಕಮೀಷನ್ನು ಬರದೇ ಇರುತ್ತಾ?

ಕೆಂಪಾಂಬುಧಿ ಕಾಯಕಲ್ಪದ ಕಾಮಗಾರಿಯನ್ನು ನಾಲ್ಕು ಭಾಗ ಮಾಡಿ ನಾಲ್ವರು ಗುತ್ತಿಗೆದಾರರನ್ನು ಮುಂದಿಟ್ಟುಕೊಂಡು ಸದ್ಯ ಎಮ್ಮೆಲ್ಲೇ ಸಾಹೇಬರು ಕಾರ್ಯಾಚರಣೆಗಿಳಿದಿದ್ದಾರೆ. ಜೊತೆಗೆ ಬಸವನಗುಡಿಯ ವಿವಿಧ ಐವತ್ತು ಅಡಿಯ ರಸ್ತೆಗಳು, ಹನುಮಂತನಗರದ ನಾಲ್ಕನೇ ಕ್ರಾಸು, ರಾಮಾಂಜನೇಯ ಗುಡ್ಡದ ರೋಡು ಇತ್ಯಾದಿ ಪ್ರಮುಖ ರಸ್ತೆಗಳ ದುರಸ್ತಿಗೆಂದೇ ಮತ್ತೆ ಆರೂವರೆ ಕೋಟಿಯ ಟೆಂಡರ್‌ಗೂ ರವಿಸುಬ್ರಹ್ಮಣ್ಯ ಕೈಹಾಕಿದ್ದಾರೆ. ಈಗಾಗಲೇ ಕಾಮಗಾರಿ ಮುಗಿದ ರಸ್ತೆಗಳನ್ನು ಏನು ಅಂತ ದುರಸ್ತಿ ಮಾಡಿದರೂ ಅರ್ಧಕ್ಕರ್ಧ ದುಡ್ಡು ಮಿಕ್ಕುತ್ತಿದೆ. ಜೊತೆಗೆ ಬೋಗಸ್ ಬಿಲ್ ದಂಧೆಯ ಕಮಿಷನ್ ಕೂಡ ತಪ್ಪದೇ ಬರುತ್ತದೆ. ಇದಲ್ಲದೇ ಎನ್ನಾರ್ ಕಾಲೋನಿಯಲ್ಲಿ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೊಂದನ್ನೂ ಮಂಜೂರು ಮಾಡಿಸಿಕೊಂಡಿದ್ದಾರೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೊಂದಕ್ಕೆ ಬೇಕಾದ ಜಮೀನಾಗಲಿ ಪರಿಸರವಾಗಲಿ ಇಲ್ಲದೇ ಹೋದರೂ ಕಾಟಾಚಾರಕ್ಕೊಂದು ಒಟ್ರಾಸೆ ಆಸ್ಪತ್ರೆ ಕಟ್ಟಿಸಿ ಕೈತೊಳೆದುಕೊಳ್ಳುವುದು ಎಮ್ಮೆಲ್ಲೇ ಸಾಹೇಬರ ಉದ್ದೇಶ.

ಆಸ್ಪತ್ರೆಯ ಗತಿ ಏನೇ ಆದರೂ ಕಮಿಷನ್ ಮಾತ್ರ ಗ್ಯಾರಂಟಿ ತಾನೆ? ಹಾಗಂತ ಸದಾಕಾಲ ಇಸ್ಪೀಟ್ ಕಾಯಕದಲ್ಲಿ ತಲ್ಲೀನರಾದ ಶಾಸಕರಿಗೆ ಕನಿಷ್ಠ ಕಮೀಷನ್ ಗಿಟ್ಟಿಸಲಾದರೂ ಟೈಮಿಲ್ಲದೆ ಅಂತೀರಾ?


ಅದಕ್ಕೆಂದೇ ಪಿಎ ಗಣೇಶ ಅವತರಿಸಿದ್ದಾನೆ. ಈ ಗಣೇಶ ಪಳಗಿದ ಪ್ರಳಯಾಂತಕ. ಎಲ್ಲಿ ಕೆರೆದರೆ ಎಷ್ಟು ರೊಕ್ಕ ಉದುರುತ್ತದೆ? ಎಲ್ಲಿ ಗದರಿದರೆ ಏನು ಗಿಟ್ಟುತ್ತದೆ; ಇತ್ಯಾದಿ ಪ್ರತಿಯೊಂದೂ ಈತನಿಗೆ ಗೊತ್ತು. ಈತನ ಜೊತೆ ಎಮ್ಮೆಲ್ಲೇ ಅಣ್ಣ ಚಂದ್ರಶೇಖರ್ ಕೂಡ ಕೈಜೋಡಿಸುತ್ತಾನೆ. ಸದ್ಯ ಅಣ್ಣ ಚಂದ್ರಶೇಖರನೇ ಬಸವನಗುಡಿಗೆ ಅನಭಿಷಕ್ತ ಎಮ್ಮೆಲ್ಲೇ. ಪಿಎ ಗಣೇಶ ಮತ್ತು ಅಣ್ಣ ಚಂದ್ರಶೇಖರನ ಕೈಗೆ ತನ್ನ ಎಮ್ಮೆಲ್ಲೇಗಿರಿಯನ್ನು ಒಪ್ಪಿಸಿ ತನ್ನ ಇಸ್ಪೀಟಾಯಿತು, ರಿಯಲ್ ಎಸ್ಟೇಟ್ ಕಸುಬಾಯಿತು ಎಂಬಂತೆ ಹಾಯಾಗಿರುವ ರವಿಸುಬ್ರಹ್ಮಣ್ಯರನ್ನು ಸದ್ಯಕ್ಕಂತೂ ಬಸವನಗುಡಿ ಮಂದಿ ಕಾಣಲು ಸಾಧ್ಯವಿಲ್ಲ. ಈ ಪುರುಷಾರ್ಥಕ್ಕೆ ಜನ ಬಿಜೆಪಿಗೆ ಓಟು ಕೊಡಬೇಕಿತ್ತಾ?

• ರಾ. ಸೋಮನಾಥ್
ra.somanath2010@gmail.com

ಕೃಷ್ಣ ಭಟ್ಟನ ಪಾಪ ಮತ್ತು ಸೈಟುದಾರರ ಶಾಪ?

ಹಾಗೊಮ್ಮೆ ರವಿ ಸುಬ್ರಹ್ಮಣ್ಯ ಏನಾದರೂ ಚೂರುಪಾರು ಬಿಜಿಯಾಗಿದ್ದಾರೆಂದರೆ ಅದು ಕೃಷ್ಣ ಭಟ್ಟನ ಲೇಔಟ್ ಗೋಲ್‌ಮಾಲ್ ದಂಧೆಯಲ್ಲಿ ಮಾತ್ರ. ವಿಶ್ವಭಾರತಿ ಗೃಹನಿರ್ಮಾಣ ಸಂಘದ ಪ್ರಳಯಾಂತಕ ಕೃಷ್ಣ ಭಟ್ಟನ ಮನೆ ಹಿಂದೆಯೇ ರವಿಸುಬ್ರಹ್ಮಣ್ಯರ ಬಂಗಲೆಯಿದೆ. ರವಿ ಸುಬ್ರಹ್ಮಣ್ಯ ಗಿರಿನಗರ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಜನ್ಮಾಪಿ ಅಧ್ಯಕ್ಷರು.

ಹೀಗೆ ರೆಸಿಡೆಂಟ್ಸ್ ಅಸೋಸಿಯನ್ ಹುಟ್ಟುಹಾಕಿ ಕೃಷ್ಣ ಭಟ್ಟನಿಂದ ಬೀದಿಪಾಲಾದ ನಿವೇಶನದಾರರಿಗೆ ನ್ಯಾಯ ಕೊಡಿಸಬೇಕಿದ್ದದ್ದು ರವಿಸುಬ್ರಹ್ಮಣ್ಯರ ಕರ್ತವ್ಯವಾಗಿತ್ತು. ಆದರೆ ಕೃಷ್ಣ ಭಟ್ಟನ ಸೇವೆಗೆ ನಿಂತು ಯಾರ್ಯಾರಿಗೆ ಸೈಟು ಮಂಜೂರಾಗಿತ್ತೋ ಅಂಥವರನ್ನೇ ಮುಂದಾಯಿಸುವ ಕಾಯಕಕ್ಕೆ ರವಿ ಕೈಯಿಟ್ಟರು. ಇದಕ್ಕೆ ಜೊತೆಯಾದವನು ಕೃಷ್ಣ ಭಟ್ಟನ ಛೇಲಾ ರೌಡಿ ಮಂಜ. ವಿಶ್ವಭಾರತಿ ನಾಲ್ಕನೇ ಹಂತದ ಸೈಟುದಾರರನ್ನೆಲ್ಲ ಮಂಜನ ರೌಡಿ ಗ್ಯಾಂಗ್ ಹೆದರಿಸಿ ಅಟ್ಟಾಡಿಸುತ್ತಿದ್ದರೆ ಶಾಸಕ ರವಿಸುಬ್ರಹ್ಮಣ್ಯ ಮಾತ್ರ ಯಾರೂ ಕೈಗೂ ಸಿಗದೇ ಭೂಗತರಾದರು.



ಇವತ್ತು ನಿವೇಶನ ವಂಚಿತ ನೂರಾರು ಮಂದಿ ಕೃಷ್ಣ ಭಟ್ಟನ ಮೋಸದ ವಿರುದ್ಧ ಹೈಕೋರ್ಟ್ ಮೊರೆ ಹೊಕ್ಕಿದ್ದಾರೆ. ಮಂಜೂರಾಗಿದ್ದ ಸೈಟುಗಳನ್ನೆಲ್ಲ ಮಂಜನ ಗ್ಯಾಂಗ್ ಯಾಮಾರಿಸಿ ನುಂಗಿ ಕೂತಿದೆ. ರೌಡಿಗಳಿಗೆ, ರಾಜಕಾರಣಿಗಳಿಗೆ, ಪೊಲೀಸರಿಗೆ ಎಲ್ಲರಿಗೂ ಬಿಟ್ಟಿ ಸೈಟು ಕೊಟ್ಟು ನ್ಯಾಯಬದ್ಧ ಹಕ್ಕುದಾರರಾದ ನಿವೇಶನದಾರರನ್ನು ಬೀದಿಪಾಲು ಮಾಡುವಲ್ಲಿ ಶಾಸಕ ರವಿಸುಬ್ರಹ್ಮಣ್ಯರ ಪಾತ್ರ ಕೂಡ ದೊಡ್ಡದಿದೆ. ಎಲ್ಲಿ ನಿವೇಶನ ವಂಚಿತರು ಅಟಕಾಯಿಸಿಕೊಂಡು ಮುಖಕ್ಕೆ ಉಗಿಯುತ್ತಾರೆಂಬ ಭೀತಿಯೆ ಅಥವಾ ಕೃಷ್ಣ ಭಟ್ಟನ ಮೋಸದ ವಿರುದ್ಧ ಏಕೆ ತೆಪ್ಪಗಿದ್ದೀಯಾ? ಎಂದು ಜನ ಭೂತ ಬಿಡಿಸುತ್ತಾರೆಂಬ ಅಳುಕೇ?

ಶಾಸಕನೊಬ್ಬ ಮುಖ ಮುಚ್ಚಿಕೊಂಡು ತಲೆ ಮರೆಸಿಕೊಳ್ಳುತ್ತಾನೆಂದರೆ ಒಂದಲ್ಲಾ ಒಂದು ಕಾರಣ ಇರಲೇಬೇಕಲ್ಲವೆ?

ಮಲ್ಯ ಪಾದದಡಿ ಕಮಲ



ನಿರೀಕ್ಷಿಸಿದ್ದಂತೆ ವಿಜಯಲಕ್ಷ್ಮಿ ಮದ್ಯದ ದೊರೆ ವಿಜಯ ಮಲ್ಯ ಅವರಿಗೆ ಒಲಿದಿದೆ.

ಆದರೆ ಈ ಬಾರಿಯ ರಾಜ್ಯಸಭಾ ಚುನಾವಣೆಯ ವಿಶೇಷವೆಂದರೆ 'ಅಡಿಗೆ ಬಿದ್ದರೂ ಮೀಸೆಗೆ ಮಣ್ಣಾಗಲಿಲ್ಲ' ಎಂಬ ಗಾದೆಯಂತೆ ಎಲ್ಲಾ ಪಕ್ಷದವರು ತಾವು 'ಸೋತರೂ ಒಂದು ರೀತಿಯಲ್ಲಿ ಗೆದ್ದಂತೆ' ಎಂದು ಪೋಜು ಕೊಡುತ್ತಿದ್ದಾರೆ.

ಉದಾಹರಣೆಗೆ ಒಂದೆಡೆ ದೇವೇಗೌಡರ ಬ್ಲ್ಯಾಕ್‌ಮೇಲ್ ತಂತ್ರಕ್ಕೆ ತಾವು ಬಲಿಯಾಗಲಿಲ್ಲ ಎಂದು ಕಾಂಗ್ರೆಸ್ ನಾಯಕರು ತಮ್ಮ ಮೀಸೆ ಮೇಲೆ ಕೈಯಿಟ್ಟಿದ್ದಾರೆ. ಇನ್ನೊಂದೆಡೆ ತಮ್ಮ ಸಾಂಪ್ರದಾಯಿಕ ವೈರಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ ರಾಜ್ಯಸಭೆಯಲ್ಲಿ ಅವರ ಬಲವನ್ನು ಕುಗ್ಗಿಸಿದ ಖುಷಿಯಲ್ಲಿ ಬಿಜೆಪಿ ನಾಯಕರು ಸಂಭ್ರಮಿಸುತ್ತಿದ್ದಾರೆ. ಮತ್ತೊಂದೆಡೆ ದೇವೇಗೌಡರು ಮತ್ತವರ ಮಕ್ಕಳು ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗೆದ್ದ ಬಗ್ಗೆ ಮತ್ತು ಕಾಂಗ್ರೆಸ್‌ಗೆ ಪಾಠ ಕಲಿಸಿದ ಬಗ್ಗೆ ಸಂಭ್ರಮಿಸುತ್ತಿದ್ದಾರೆ. ಇವೆಲ್ಲದರ ನಡುವೆ ಅನಾಯಾಸವಾಗಿ ಎರಡನೇ ಬಾರಿಗೆ ರಾಜ್ಯಸಭೆಗೆ ಎಂಟ್ರಿ ಪಡೆದ ಮಲ್ಯ ಕಳೆದ ಬಾರಿಯಷ್ಟು ಹಣವನ್ನು ಈ ಬಾರಿ ಖರ್ಚು ಮಾಡಲಿಲ್ಲ ಎಂಬ ಆನಂದದಲ್ಲಿ ಮುಳುಗಿಹೋಗಿದ್ದಾರೆ. ಹೀಗೆ ಮಲ್ಯ ವಿಜಯವನ್ನು ಎಲ್ಲಾ ಪಕ್ಷದವರು ತಮ್ಮ ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಲು ಶುರುಮಾಡಿದ್ದಾರೆ. ಅಂದರೆ ರಾಷ್ಟ್ರೀಯ ಕಾಂಗ್ರೆಸ್ಸಾಗಲಿ, ಬಿಜೆಪಿಯಾಗಲಿ ಅಥವಾ ಪ್ರಾದೇಶಿಕ ಪಕ್ಷವಾದ ದಳವಾಗಲಿ 'ಅಸಿಂಧು' ರಾಜಕೀಯ ಮಾಡಿ ತಮ್ಮ ತಮ್ಮ ಸಮಯಸಾಧಕತನವನ್ನು ಮೆರೆದಿದ್ದಾರೆ.

ಆದರೆ ವಾಸ್ತವವಾಗಿ ಇದ್ದುದ್ದರಲ್ಲಿ ಕಾಂಗ್ರೆಸ್ ಪಕ್ಷ ತನ್ನ ವರ್ಚಸ್ಸು ಮತ್ತು ಇಮೇಜನ್ನು ಉಳಿಸಿಕೊಂಡಿದೆಯೆಂದು ಹೇಳಬಹುದು. ಗೌಡರ ಬ್ಲ್ಯಾಕ್‌ಮೇಲ್ ತಂತ್ರಕ್ಕೆ ಮಣಿದು ಅವರು ಸೂಚಿಸಿದವರನ್ನೇ ಕಾಂಗ್ರೆಸ್ ತನ್ನ ಎರಡನೇ ಅಭ್ಯರ್ಥಿಯಾಗಿ ನಿಲ್ಲಿಸಿದ್ದರೆ ಅದು ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ವನಾಶಕ್ಕೆ ಬುನಾದಿಯಾಗುತ್ತಿತ್ತು. ಹೀಗಾಗಿ ಪಕ್ಷದ ಹಿತದೃಷ್ಟಿಯಿಂದ, ಒಂದು ಸ್ಥಾನ ಕಳೆದುಕೊಂಡರೂ ಪರವಾಗಿಲ್ಲ ಆದರೆ ಗೌಡರಿಗೆ ಮಣಿಯುವುದಿಲ್ಲ ಎಂಬ ಕಾಂಗ್ರೆಸ್ ಧೋರಣೆ ಮೆಚ್ಚಬೇಕಾದುದು. ಅಷ್ಟೇ ಅಲ್ಲ, ಈ ಹಿಂದಿನಿಂದಲೂ ಕಾಂಗ್ರೆಸ್ ರಾಜ್ಯಸಭಾ ಚುನಾವಣಾ ಸಂದರ್ಭದಲ್ಲಿ ಉದ್ಯಮಿಗಳ ಅಥವಾ ಮದ್ಯದ ದೊರೆಗಳ ಕೈಹಿಡಿದ ಉದಾಹರಣೆಯೇ ಇಲ್ಲ. ಏನೇ ಇದ್ದರೂ ಕಾಂಗ್ರೆಸ್‌ನ ಕಾರ್ಯಕರ್ತರನ್ನೇ ರಾಜ್ಯಸಭೆಗೆ ಆಯ್ಕೆ ಮಾಡುವುದು ಆ ಪಕ್ಷದ ಒಂದು ಅಲಿಖಿತ ಸಿದ್ಧಾಂತ. ಅದರಂತೆ ಈ ಬಾರಿ ದೇವೇಗೌಡರನ್ನು ನಿರ್ಲಕ್ಷಿಸಿ ಮಾರುತಿಯನ್ನು ಸ್ಪರ್ಧೆಗೆ ನಿಲ್ಲಿಸಿದ್ದು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಉತ್ಸಾಹ ಮತ್ತು ಹುಮ್ಮಸ್ಸನ್ನು ತುಂಬಿಸಿದೆ. ಕಾಂಗ್ರೆಸ್ ಹೈಕಮಾಂಡ್ ತನ್ನ ಸಾಮಾನ್ಯ ಕಾರ್ಯಕರ್ತರ ನಡುವಿನ ಸಂಬಂಧವನ್ನು ಈ ಮೂಲಕ ಗಟ್ಟಿಮಾಡಿದೆ.


ಆದರೆ ಯಾವಾಗಲೂ ಮಣ್ಣಿನ ಮಗ ಎಂದು ತನ್ನನ್ನು ತಾನೇ ಪ್ರತಿಬಿಂಬಿಸಿಕೊಳ್ಳುವ ದೇವೇಗೌಡರು ರಾಜ್ಯಸಭಾ ಚುನಾವಣೆ ಬಂದಾಗಲೆಲ್ಲಾ ಕರ್ನಾಟಕದ ಹಿತದೃಷ್ಟಿಯ ಬದಲು ತಮ್ಮ ವೈಯಕ್ತಿಕ ವರ್ಚಸ್ಸನ್ನೇ ಮುಖ್ಯವಾಗಿಸಿಕೊಂಡು ರಾಜಕೀಯ ಮಾಡುತ್ತಾರೆ. ಉದಾಹರಣೆಗೆ ಕಳೆದ ಬಾರಿ ತಮಿಳುನಾಡಿನ ಕುದುರೆ ವ್ಯಾಪಾರಿ ಎಂ.ಎ.ಎಂ.ರಾಮಸ್ವಾಮಿಯನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ ಗೌಡರು ಈ ಬಾರಿ ಮತ್ತೊಬ್ಬ ಕುದುರೆ ವ್ಯಾಪಾರಿ ವಿಜಯಮಲ್ಯರನ್ನು ತಬ್ಬಿಕೊಂಡರು. ತಮ್ಮ ಪಕ್ಷಕ್ಕೆ ಯಾವ ಉದ್ಯಮಿ ಡೊನೇಷನ್ ನೀಡುತ್ತಾರೋ ಅವರನ್ನು ದೆಹಲಿಗೆ ಕಳುಹಿಸುವುದು ಗೌಡರ ವಾಡಿಕೆ. ಇಂತಹ ಸಂದರ್ಭದಲ್ಲಿ ತಾನು ರೈತನ ಮಗ, ಮಣ್ಣಿನ ಮಗ... ಇತ್ಯಾದಿ ವಿಷಯಗಳನ್ನು ಈ ಗೌಡರು ಜಾಣತನದಿಂದ ಮರೆತುಬಿಡುತ್ತಾರೆ. ಇದು ಗೌಡರ ರಾಜಕೀಯದ ಒಂದು ಪುಟ್ಟ ಸ್ಯಾಂಪಲ್. ಈಗ ವಿಜಯ ಮಲ್ಯರನ್ನು ರಾಜ್ಯಸಭೆಗೆ ಕಳುಹಿಸುವ ಮುಖಾಂತರ ದೇವೇಗೌಡರು ತಮ್ಮ ಪಕ್ಷಕ್ಕೆ ಸಾಕಷ್ಟು ದೇಣಿಗೆಯನ್ನು ಪಡೆದಿದ್ದಾರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಬಗ್ಗೆ ಮಾತುಕತೆ ನಡೆಯುತ್ತಿದ್ದಾಗ ಅದನ್ನು ಅತ್ಯಂತ ಕುತೂಹಲದಿಂದ ನೋಡುತ್ತಿದ್ದ ಬಿಜೆಪಿ ನಾಯಕರು ಕೂಡಾ ತಮ್ಮ ಸಮಯಸಾಧಕತೆಯನ್ನು ತೆರೆಮರೆಯಲ್ಲಿ ಮೆರೆದಿದ್ದಾರೆ. ಜೆಡಿಎಸ್‌ಗಿಂತಲೂ ಅಧಿಕ ಮತವನ್ನು ಹೊಂದಿದ್ದರೂ ಸಹ ಮೂರನೆಯ ಅಭ್ಯರ್ಥಿಯನ್ನು ನಿಲ್ಲಿಸಲು ಹೋಗದಿದ್ದುದೇ ಒಂದು ವಿಶೇಷ. ಆದರೆ ಬಿಜೆಪಿ ನಾಯಕರು ಮತ್ತು ಜೆಡಿಎಸ್ ನಾಯಕರ ನಡುವೆ ಮಲ್ಯರನ್ನು ಅಭ್ಯರ್ಥಿ ಮಾಡುವ ಬಗ್ಗೆ ಒಳಒಪ್ಪಂದ ನಡೆದಿತ್ತಂತೆ. ಆ ಒಪ್ಪಂದದ ಪ್ರಕಾರ ಮುಂದಿನ ಆರು ತಿಂಗಳೊಳಗೆ ಮಲ್ಯ ರಾಜ್ಯಸಭೆಯಲ್ಲಿ ಬಿಜೆಪಿಯ ಸಹಸದಸ್ಯನಾಗಿ ಗುರುತಿಸಿಕೊಳ್ಳಲಿದ್ದಾರೆ. ಆ ಮೂಲಕ ದೆಹಲಿಯಲ್ಲಿ ಬಿಜೆಪಿ ತನ್ನ ಬಲವನ್ನು ವೃದ್ಧಿಸಿಕೊಂಡ ತೃಪ್ತಿ ಪಡೆದರೆ, ಇತ್ತ ರಾಜ್ಯದಲ್ಲಿ ವಿಜಯ ಮಲ್ಯ ಗೆಲುವು ಒಂದು ರೀತಿಯಲ್ಲಿ ಅಪ್ಪ-ಮಕ್ಕಳ ಗೆಲುವೆಂದೇ ದಾಖಲಾಗಲಿದೆ.

ತಮಾಷೆಯ ವಿಷಯವೆಂದರೆ ಮೂರನೆಯ ಅಭ್ಯರ್ಥಿಯನ್ನಾಗಿ ವಿಜಯ ಮಲ್ಯರನ್ನು ನಿಲ್ಲಿಸುವ ಬಗ್ಗೆ ಪಕ್ಷದ ಚಿಂತಕರ ಚಾವಡಿಯಲ್ಲಿ ಚರ್ಚೆಯಾಗಿತ್ತು, ಬಹುತೇಕ ಎಲ್ಲರೂ ಮಲ್ಯ ಸ್ಪರ್ಧೆಗೆ ತಮ್ಮ ಒಪ್ಪಿಗೆ ಸೂಚಿಸಿದ್ದರಂತೆ. ಮಲ್ಯ ಮೂರನೆಯ ಅಭ್ಯರ್ಥಿಯಾಗಿ ಅಖಾಡಕ್ಕೆ

ಬಾಬಾಬುಡನ್ ಗಿರಿಯಲ್ಲಿ "ಕೋಮುಗಾರಿಯನ್ನು" ಬಯಲುಗೊಳಿಸಿದ ಪ್ರಾಚ್ಯ ವಸ್ತು ಇಲಾಖೆ

ಬಾಬಾಬುಡನ್‌ಗಿರಿ ದರ್ಗಾವನ್ನು ಶತಾಯಗತಾಯ ದತ್ತ ದೇವಸ್ಥಾನವನ್ನಾಗಿ ಮಾಡಲು ಎಲ್ಲಾ ಕಳ್ಳದಾರಿಯನ್ನು ತುಳಿಯುತ್ತಿರುವ ಚೆಡ್ಡಿ ಪಡೆಯು ತನ್ನ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಾಡುತ್ತಿರುವ ಆಕ್ರಮಣಗಳು ಒಂದೆರಡಲ್ಲ. 2009ರ ಜೂನ್‌ನಲ್ಲಿ ಚಿಕ್ಕಮಗಳೂರು ಜಿಲ್ಲಾಡಳಿತದ ನಿರ್ಲಕ್ಷ್ಯದಿಂದಾಗಿ ಶ್ರೀ ಗುರು ದತ್ತಾತ್ರೇಯ



ಕುಸಿದಿರುವ ಗುಹೆ...

ಬಾಬಾಬುಡನ್ ಸ್ವಾಮಿ ದರ್ಗಾದ ಒಂದು ಪಾರ್ಶ್ವವು ಕುಸಿದು ಬಿದ್ದಿತ್ತು ಮತ್ತು ಅಲ್ಲಿಂದಾಚೆಗೆ ದರ್ಗಾವನ್ನು ಸಾರ್ವಜನಿಕ ಪ್ರವೇಶಕ್ಕೆ ಮುಚ್ಚಲಾಗಿತ್ತಷ್ಟೆ. ಇದನ್ನೇ ದರ್ಗಾವನ್ನು ಸಂಪೂರ್ಣ ಉರುಳಿಸಲು ಒಂದು ಸುಸಂದರ್ಭ ಎಂದು ಸಂಘಪರಿವಾರ ಭಾವಿಸಿತು.

ಕೂಡಲೇ ಕಾರ್ಯಪ್ರವೃತ್ತವಾದ ಬಿಜೆಪಿ ಸರ್ಕಾರ 'ದುರಸ್ತಿ'ಯ ಹೆಸರಿನಲ್ಲಿ ಇಡೀ ದರ್ಗಾದ ಸ್ವರೂಪವನ್ನೇ ಬದಲಾಯಿಸುವ ನಕ್ಷೆಯನ್ನು ಟಾರ್ ಸ್ಟೀಲ್ ರಿಸರ್ಚ್ ಫೌಂಡೇಶನ್‌ನಿಂದ ಪಡೆದುಕೊಂಡಿತು. ಅದರ ಕೆಲಸದ ಗುತ್ತಿಗೆಯನ್ನು ಇಂಥಾ ಸೂಕ್ಷ್ಮ ಪ್ರಾಚ್ಯ ಪರಂಪರೆಯ ಸ್ಮಾರಕಗಳನ್ನು ಉಳಿಸುವಲ್ಲಿ ಯಾವುದೇ ಅನುಭವ ಇರದ ಮತ್ತು ಕೇವಲ ಡಿಮಾಲಿಷನ್ ಕೆಲಸಗಳಲ್ಲಿ ಮಾತ್ರ ಅನುಭವ ಇರುವ ಬಿನ್ನಾಸ್ ಕಾಂಟೆಕ್ ಎಂಬ ಕಂಪನಿಗೆ ನೀಡಿತು. ಈ ಬಿನ್ನಾಸ್ ಕಂಪನಿ ಎಂಥಾ ಬಕನಾಸಿ ಕಂಪನಿ ಎಂದರೆ 2002ರ ಹಿಂದೆ ಇದು ಕಟ್ಟಡಗಳ ಕೆಲಸದಲ್ಲೇ ಇರದೆ ಯಾವುದೋ ಅಡ್ನಾಡಿ ಕೆಲಸ ಮಾಡಿಕೊಂಡಿತ್ತು, ಇದರ ಹುಟ್ಟೂರು ಸಹ ಬಳ್ಳಾರಿಯೇ. ಯಾವಾಗ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ರೆಡ್ಡಿ ರಾಜ್ಯಭಾರ ಶುರುವಾಯಿತೋ ಆಗಲೇ ಈ ಬಕನಾಸಿ ಬಿನ್ನಾಸ್ ಕಂಪನಿಯು ಕೋಟ್ಯಾನುಕೋಟಿ ಡಿಮಾಲಿಷನ್ ಕಾಂಟ್ರಾಕ್ಟ್ ಪಡೆಯತೊಡಗಿತು. ಹೀಗಾಗಿಯೇ ದರ್ಗಾದ 2.09 ಕೋಟಿ ರೂ. ಕಾಂಟ್ರಾಕ್ಟುಗಳೂ ಸಹ ಎಲ್ಲಾ ಕಾನೂನು ಮೀರಿ ಬಿನ್ನಾಸ್ ವಶವಾಯಿತು.

ದುರಸ್ತಿ ಕೆಲಸದ ಪ್ರಾರಂಭದ ದಿನ ಹಾಲಿ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಶಾಸಕ ಸಿ.ಟಿ. ರವಿ ಮತ್ತು ಆಗಿನ ಅಧ್ಯಕ್ಷ ಸದಾನಂದಗೌಡ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ದತ್ತಮೂರ್ತಿಯನ್ನು ದರ್ಗಾ ಆವರಣದಲ್ಲಿ ಪ್ರತಿಷ್ಠಾಪಿಸಿ ನ್ಯಾಯಾಂಗ ನಿಂದನೆಯನ್ನು ಮಾಡಿದ್ದಲ್ಲದೆ ದರ್ಗಾವನ್ನು ದತ್ತದೇವಾಲಯವಾಗಿ ಮಾಡಿಯೇ ಸಿದ್ಧವೆಂದು ಬಹಿರಂಗವಾಗಿಯೇ ಘೋಷಿಸಿದ್ದರು!

ಈ ಎಲ್ಲಾ ಹಿನ್ನೆಲೆಯಲ್ಲಿ ಕರ್ನಾಟಕ ಹೈಕೋರ್ಟು ಸುಪ್ರೀಂಕೋರ್ಟಿನ ಅನುಮತಿ ಇಲ್ಲದೆ ಯಾವುದೇ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಬಾರದೆಂದು ಆದೇಶ ನೀಡಿತ್ತು. ಈ ಆದೇಶವನ್ನು ತೆರವು ಮಾಡಿ ದುರಸ್ತಿ ಕಾರ್ಯಕ್ಕೆ ಅನುವು ಮಾಡಿಕೊಡಬೇಕೆಂದೂ, ದುರಸ್ತಿಯಿಂದ ದರ್ಗಾದ ಧಾರ್ಮಿಕ ಸ್ವರೂಪಕ್ಕೆ ಯಾವುದೇ ಧಕ್ಕೆ ಬರುವುದಿಲ್ಲವೆಂದೂ ಕರ್ನಾಟಕ ಸರ್ಕಾರವು ಧಾರ್ಮಿಕ ಮತ್ತು ದತ್ತಿ ಆಯುಕ್ತರ ಮೂಲಕ ಸುಪ್ರೀಂಕೋರ್ಟಿಗೆ ಮನವಿ ಮಾಡಿತು.

ಆದರೆ ಸಂಘಪರಿವಾರವು ದರ್ಗಾದ ಮೂಲ ಸ್ವರೂಪವನ್ನು ಬದಲಾಯಿಸಲು ನಡೆಸುತ್ತಿರುವ ಪ್ರಯತ್ನಗಳ ವಿರುದ್ಧ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಮೂಲ ದಾವೆಯೊಂದು ಸುಪ್ರೀಂಕೋರ್ಟಿನಲ್ಲಿ ನಡೆಯುತ್ತಿದೆ.

ಹೀಗಾಗಿ ಈ ದಾವೆಯಲ್ಲಿ ಮಧ್ಯಪ್ರವೇಶ ಮಾಡಿದ ವೇದಿಕೆಯು ದರ್ಗಾದ ದುರಸ್ತಿಗೆ ನಮ್ಮ ಅಡ್ಡಿಯೇನೂ ಇಲ್ಲವೆಂದೂ, ಆದರೆ ದರ್ಗಾದ ಶಿಥಿಲ ಪರಿಸ್ಥಿತಿ ಮತ್ತು ದುರಸ್ತಿ ಮಾಡಲೇಬೇಕಾದ ಅನಿವಾರ್ಯ ಸಂದರ್ಭವನ್ನು ಬಿಜೆಪಿ ಸರ್ಕಾರ ದುರ್ಬಳಕೆ ಮಾಡಿಕೊಳ್ಳದಂತೆ ತಡೆಯಬೇಕೆಂದೂ ಮನವಿ ಮಾಡಿತು. ಆ ದಾವೆಯಲ್ಲಿ ಟಾರ್ ಸ್ಟೀಲ್ ರಿಸರ್ಚ್ ಫೌಂಡೇಶನ್ ನೀಡಿರುವ ವಾಸ್ತುಶಿಲ್ಪ ಯೋಜನೆ ದರ್ಗಾದ ಮೂಲ ಸ್ವರೂಪಕ್ಕೆ ಧಕ್ಕೆ ತರುವ ಪ್ರಸ್ತಾಪಗಳನ್ನು ಹೊಂದಿರುವುದು ಮತ್ತು ಕಾಂಟ್ರಾಕ್ಟರ್ ಬಿನ್ನಾಸ್ ಕಂಪನಿಗೆ ಈ ವಿಷಯದಲ್ಲಿ ಪರಿಣಿತಿ ಇಲ್ಲದಿರುವುದನ್ನು ಕೋರ್ಟಿನ ಗಮನಕ್ಕೆ ತರಲಾಯಿತು. ಹಾಗೆಯೇ ದುರಸ್ತಿಯ ಸಮಯದಲ್ಲಿ ದರ್ಗಾದ ಸುರಕ್ಷತೆ ಮತ್ತು ಪಾವಿತ್ರ್ಯತೆಯನ್ನು ಕಾಪಾಡಲು ಒಂದು ಸಮಿತಿಯನ್ನು ನೇಮಿಸಲು ವಿನಂತಿ ಮಾಡಿಕೊಳ್ಳಲಾಯಿತು.

ವೇದಿಕೆಯ ಅಹವಾಲನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟು 2010ರ ಮಾರ್ಚ್ 12ರಂದು ನೀಡಿದ ಆದೇಶದಲ್ಲಿ ದರ್ಗಾದ ದುರಸ್ತಿಯನ್ನು **Archeological Survey Of India (ASI)** ಮಾರ್ಗದರ್ಶನ ಮತ್ತು ಉಸ್ತುವಾರಿಯಲ್ಲಿ ನಡೆಸಬೇಕೆಂದು ಆದೇಶಿಸಿತು. ಹಾಗೆಯೇ ದುರಸ್ತಿಯ ವಾಸ್ತುಶಿಲ್ಪ ಮತ್ತು ಅದನ್ನು ಅನುಷ್ಠಾನಕ್ಕೆ ತರುವ ಕಾಂಟ್ರಾಕ್ಟರ್ ಎರಡನ್ನೂ ASI ಒಪ್ಪಿಗೆ ಮೇರೆಗೆ ಮಾತ್ರ ಜಾರಿಗೆ ತರಬೇಕೆಂದು ಆದೇಶಿಸಿತು.

ಅದರಂತೆ ವೇದಿಕೆಯು ASIನ ಮುಖ್ಯಸ್ಥರನ್ನು ಏಪ್ರಿಲ್ 26ರಂದು ಭೇಟಿ ಮಾಡಿ ಟಾರ್ ಸ್ಟೀಲ್ ರಿಸರ್ಚ್ ಫೌಂಡೇಶನ್‌ನ ವಾಸ್ತುಶಿಲ್ಪ ಯೋಜನೆ ಮತ್ತು ಬಿನ್ನಾಸ್ ಕಾಂಟೆಕ್ ಗುತ್ತಿಗೆದಾರರ ಬಗ್ಗೆ ತನ್ನ ಆಕ್ಷೇಪಗಳನ್ನು ವ್ಯಕ್ತಪಡಿಸಿ ದರ್ಗಾದ ಐತಿಹಾಸಿಕ ಮತ್ತು ಧಾರ್ಮಿಕ ಸ್ವರೂಪಕ್ಕೆ ಧಕ್ಕೆ ಒದಗದಂತೆ ದುರಸ್ತಿ ಕ್ರಮಗಳನ್ನು ಕೈಗೆತ್ತಿಕೊಳ್ಳುವಂತೆ ಆಗ್ರಹಿಸಿತು.

ಅದರಂತೆ 2010ರ ಏಪ್ರಿಲ್ 27ರಂದು ಸ್ಥಳಕ್ಕೆ ಭೇಟಿ ನೀಡಿದ ASI ತಂಡ ದುರಸ್ತಿ ಕೆಲಸದ ಬಗ್ಗೆ ಸುದೀರ್ಘ ವಿಶ್ಲೇಷಣೆ ಮಾಡಿ ತನ್ನ ವರದಿಯನ್ನು ಮೇಲಧಿಕಾರಿಗೆ ಸಲ್ಲಿಸಿತು. ಇದನ್ನು ಆಧರಿಸಿ ASIನ ಕರ್ನಾಟಕ ವರ್ತುಲದ ಮುಖ್ಯಸ್ಥರಾದ ಸೂಪರಿಡೆಂಟಿಂಗ್ ಆರ್ಕಿಯಾಲಜಿಸ್ಟ್ ಅವರು ದುರಸ್ತಿ ಕೆಲಸಗಳಿಗೆ ಸಂಬಂಧಪಟ್ಟಂತೆ ಧಾರ್ಮಿಕ ದತ್ತಿ ಆಯುಕ್ತರಿಗೆ ಜೂನ್ 2ರಂದು ಈ ಕೆಳಗಿನ ಆದೇಶ ನೀಡಿದ್ದಾರೆ:

1. ದುರಸ್ತಿಯ ಕುರಿತು ಟಾರ್ ಸ್ಟೀಲ್ ರಿಸರ್ಚ್ ಫೌಂಡೇಶನ್ ನೀಡಿರುವ ವಾಸ್ತುಶಿಲ್ಪ ಯೋಜನೆಯ ಬಗ್ಗೆ:


   ಒಟ್ಟಾರೆ ದುರಸ್ತಿ ಯೋಜನೆಯ ಬಗ್ಗೆ ಟಾರ್ ಸ್ಟೀಲ್ ನೀಡಿರುವ ಪ್ರಸ್ತಾಪವು ದರ್ಗಾದ ಪ್ರಾಚೀನ ಪರಂಪರೆಯನ್ನು ಕಾಪಾಡುವ (ಹೆರಿಟೇಜ್ ಕನ್ಸರ್ವೇಷನ್) ನಿಯಮಗಳಿಗೆ ವಿರುದ್ಧವಾಗಿದೆಯೆಂದು ASI ಅಭಿಪ್ರಾಯ ಪಟ್ಟಿರುವುದಲ್ಲದೆ ದುರಸ್ತಿ ಯೋಜನೆಯನ್ನು ಆ ನಕ್ಷೆಯ ಅನುಸಾರ ಮಾಡಬಾರದೆಂದು ಸ್ಪಷ್ಟವಾಗಿ ಆದೇಶಿಸಿದೆ.

2. ಯೋಜನೆಯ ಗುತ್ತಿಗೆದಾರನಾಗಿ ಬಿನ್ನಾಸ್ ಕಾಂಟೆಕ್ ಕಂಪನಿಯನ್ನು ನಿಯೋಜಿಸುವ ಬಗ್ಗೆ:

   ಯೋಜನೆಯ ಗುತ್ತಿಗೆಯನ್ನು ಬಿನ್ನಾಸ್ ಕಾಂಟೆಕ್ ಕಂಪನಿಗೆ ವಹಿಸುವುದನ್ನೂ ASI ತಂಡ ಸ್ಪಷ್ಟ ಮಾತುಗಳಲ್ಲಿ ನಿರಾಕರಿಸಿದೆ. ಈ ಕಂಪನಿಗೆ ಡಿಮಾಲಿಷನ್ ಕೆಲಸಗಳನ್ನು ಬಿಟ್ಟರೆ ಪ್ರಾಚ್ಯಪರಂಪರೆ ಸಂರಕ್ಷಣೆ (ಹೆರಿಟೇಜ್ ಕನ್ಸರ್ವೇಷನ್) ಬಗ್ಗೆ ಯಾವುದೇ ಪರಿಣಿತಿ ಇಲ್ಲ ಎಂಬ ವೇದಿಕೆಯ ವಾದವನ್ನು ಪುರಸ್ಕರಿಸಿ ಯಾವ ಕಾರಣಕ್ಕೂ ಬಿನ್ನಾಸ್ ಕಂಪನಿಗೆ ದುರಸ್ತಿಯ ಗುತ್ತಿಗೆ ಕೊಡಬಾರದೆಂದು ಆದೇಶಿಸಿದೆ. ಹಾಗೆಯೇ ದುರಸ್ತಿ ಕೆಲಸಗಳ ಗುತ್ತಿಗೆಯನ್ನು ಪ್ರಾಚ್ಯಪರಂಪರೆ ಸಂರಕ್ಷಣೆಯ ಕೆಲಸಗಳಲ್ಲಿ ನುರಿತವರಿಗೆ ವಹಿಸಬೇಕೆಂದು ಸಲಹೆ ಮಾಡಿದೆ.

3. ಮುಂದೆ ದುರಸ್ತಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ:


   ಹಾಗೆಯೇ ಯಾವುದೇ ದುರಸ್ತಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಪ್ರಾಚ್ಯಪರಂಪರೆಯ ಸಂರಕ್ಷಣೆಯ ಬಗ್ಗೆ ಹೆಸರು ಮಾಡಿರುವ ನುರಿತವರಿಂದ ದರ್ಗಾದ ಸ್ಥಿತಿಗತಿಯ ಬಗ್ಗೆ ಒಂದು ಅಂದಾಜು ವರದಿಯನ್ನು ಪಡೆದುಕೊಳ್ಳಬೇಕೆಂದೂ ಮತ್ತು ಆ ವರದಿಯ ಆಧಾರದ ಮೇಲೆ ದುರಸ್ತಿಯನ್ನು ಕೈಗೆತ್ತಿಕೊಳ್ಳಲು ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ASI, GSI, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಒಳಗೊಂಡಂತೆ ಒಂದು ಸಮಿತಿಯನ್ನು ನೇಮಿಸಬೇಕೆಂದು ಆದೇಶಿಸಿದೆ.



ಪೂಜೆ ನಡೆಸುತ್ತಿರುವ ಬಿಜೆಪಿ ಮುಖಂಡರು...

ASI ನೀಡಿರುವ ಮೇಲಿನ ಆದೇಶಗಳು ಸಂಘಪರಿವಾರದ ಗುಪ್ತ ಅಜೆಂಡಾಗಳನ್ನು ಬಯಲು ಮಾಡಿದೆ. ಈಗಲೂ ಮಾನಗೇಡಿ ಬಿಜೆಪಿ ಸರ್ಕಾರ ಹಳೇ ಹರಕತ್ತನ್ನೇ ಮುಂದುವರೆಸಿದರೆ ಜನರಿಂದ ಮತ್ತು ನ್ಯಾಯಾಂಗದಿಂದ ಗೂಸಾ ತಿನ್ನುವುದು ಖಂಡಿತಾ! ●

...ಯುತ್ತಾರೆ ಎಂಬ ಸುದ್ದಿ ಗೊತ್ತಾದ ತಕ್ಷಣ ಬಿಜೆಪಿಯ ...ತ್ತ ಶಾಸಕರೆಲ್ಲಾ ತಾ ಮುಂದು, ನಾ ಮುಂದು ಎಂಬಂತೆ ...ನಿಗೆ ಮತಹಾಕಲು ತಮಗೆ ವಿಪ್ ಕೊಡಿ ಎಂದು ... ನಾಯಕರಿಗೆ ದುಂಬಾಲು ಬಿದ್ದರಂತೆ! ಅಂದರೆ ...ಗೆ ಮತ ಹಾಕಿದರೆ ಒಂದೊಂದು ಸೂಟ್‌ಕೇಸ್ ...ತ್ತದೆ; ಅಲ್ಲಿಗೆ ತಮ್ಮ ತೊಂದರೆಗಳು ಬಗೆಹರಿಯುತ್ತವೆ ...ಬುದೇ ಈ ಬಿಡ್ಡಿ ಶಾಸಕರ ಅತ್ಯುತ್ಸಾಹಕ್ಕೆ ಮುಖ್ಯ ...ಣ. ಮಲ್ಯಗೆ ಓಟು ಹಾಕಲು ಶಾಸಕರಲ್ಲಿ ಯಾವಾಗ ...ೋಟಿ ಆರಂಭವಾಯಿತೋ, ಒಂದು ವೇಳೆ ಮಲ್ಯ ...ಸಿದರೆ ತಮ್ಮ ಮೊದಲ ಮತ್ತು ...ನೇ ಅಭ್ಯರ್ಥಿಗೂ ತೊಂದರೆ ...ಗುತ್ತದೆ ಎಂಬ ವಾಸನೆ ಬಿಜೆಪಿ ...ಕರಿಗೆ ಸಿಕ್ಕಿತು. ಆ ಕೂಡಲೇ ... ಜೊತೆ ಮಾತನಾಡಿ 'ನಿಮಗೆ ...ನೇ ಪ್ರಾಶಸ್ತದ ಮತ ಹಾಕಿಸು... ನೀವು ಪಕ್ಷೇತರ ಅಭ್ಯರ್ಥಿ... ಕಣಕ್ಕಿಳಿಯಿರಿ' ಎಂದು ...ಮಾ ಕೊಟ್ಟವರೇ ಬಿಜೆಪಿ ...ಕರು. ಇದರಿಂದಾಗಿ ಪ್ರತಿ ...ನಿಗೆ ಸೂಟ್‌ಕೇಸ್ ಕೊಡುವ ...ದಿಂದ ಮಲ್ಯ ಬಚಾವಾದರು.




...ಮಲ್ಯರಿಗೆ ಓಟು ಹಾಕುವ ಬಿಜೆಪಿ ಶಾಸಕರ ಉತ್ಸಾಹಕ್ಕೆ ... ಹಾಕಿದವರೇ ಬಿಜೆಪಿ ನಾಯಕರೆಂಬುದು ವಿಶೇಷ. ...ಂದರೆ ಮಲ್ಯ ಚುನಾವಣೆಗೆ ಬಿಜೆಪಿ ಕಡೆಯಿಂದ ...ಸಿದ್ದೇ ಆದಲ್ಲಿ ವೆಂಕಯ್ಯ ನಾಯ್ಡು ಮತ್ತು ಆಯನೂರು ...ಜುನಾಥ್‌ಗೆ ಮತ ಹಾಕಿಸಲು ಬಿಜೆಪಿ ನಾಯಕರು ... ಪಡಬೇಕಾಗಿತ್ತು.

...ಆದರೆ ಈ ಬಿಜೆಪಿ ಶಾಸಕರಿಗೆ ಏನು ದಾರಿದ್ಯ ...ಬಿದೆ? ಅಮೋಘ ಮೂರನೆ ಬಾರಿ ವೆಂಕಯ್ಯ ನಾಯ್ಡುವನ್ನು ಕರ್ನಾಟಕದಿಂದ ರಾಜ್ಯಸಭೆಗೆ ಕಳುಹಿಸಲು ದೆಹಲಿಯ ಬಿಜೆಪಿ ನಾಯಕರು ನಿರ್ಧರಿಸಿದಾಗ ಇಲ್ಲಿ ಯಾವುದೇ ಒಬ್ಬ ಶಾಸಕನೂ ಆ ನಿರ್ಧಾರದ ಬಗ್ಗೆ ಅಸಮಾಧಾನವನ್ನು ಪ್ರದರ್ಶಿಸಲೇ ಇಲ್ಲ. ಈ ವೆಂಕಯ್ಯನಾಯ್ಡು ಎಂಬ ಮಹಾನುಭಾವ ಎರಡು ಬಾರಿ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರೂ ಒಂದೇ ಒಂದು ಬಾರಿಯೂ ಕನ್ನಡ ನೆಲ, ಜಲ, ಸಂಸ್ಕೃತಿಯ ಬಗ್ಗೆ ಧ್ವನಿಯೆತ್ತದಿದ್ದರೂ ಈ ಶಾಸಕರು ಈಗ ಮತ್ತೆ ಅವರಿಗೆ ಮತ ಹಾಕಿದ್ದಾರೆ. ಇದು ನಮ್ಮ ರಾಜ್ಯದ ದುರಂತವಲ್ಲದೇ ಮತ್ತೇನು?

ವಿಜಯ ಮಲ್ಯ ಈಗ ಗೆದ್ದು ಮತ್ತೆ ದೆಹಲಿಯಲ್ಲಿ ತನ್ನ ವ್ಯಾಪಾರ ಸಾಮ್ರಾಜ್ಯವನ್ನು ವಿಸ್ತರಿಸುವಲ್ಲಿ ಆಸಕ್ತಿ ತೋರಿಸುತ್ತಾರೆಯೇ ವಿನಃ ಅವರಿಂದ ಕರ್ನಾಟಕದ ಜನತೆಗೆ ಏನೂ ಲಾಭ ವಿಲ್ಲ. ಹಾಗೆಯೇ ಕರ್ನಾಟಕದ ಬಗ್ಗೆ ಚಕಾರವೆತ್ತದ ವೆಂಕಯ್ಯ ನಾಯ್ಡು ಕೂಡ ಈ ಬಾರಿಯೂ ತನ್ನ ಹಳೆಯ ಚಾಳಿಯನ್ನೇ ಮುಂದುವರೆಸುತ್ತಾರೆ. ಆಸ್ಕರ್ ಫರ್ನಾಂಡಿಸ್ ಎಂಬ ಪುಣ್ಯ ಕೋಟಿ ದೆಹಲಿ ಮೇಡಂನ ಕಿಚನ್ ಕ್ಯಾಬಿನೆಟ್ ಸದಸ್ಯರಾಗಿರುವುದರಿಂದ ಅವರಿಗೆ ಕಿಚನ್‌ನಲ್ಲೇ ಕೆಲಸ ಜಾಸ್ತಿಯಿರುತ್ತದೆ. ಇನ್ನುಳಿದದು ಆಯನೂರು ಮಂಜುನಾಥ ಮಾತ್ರ. ಅವರು ಯಡಿಯೂರಪ್ಪ ಹಾಕಿದ ಲಕ್ಷ್ಮಣ ರೇಖೆಯನ್ನು ದಾಟಿ ಎಷ್ಟು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಾರೋ ನೋಡಬೇಕು. ಇದು ದೆಹಲಿಗೆ ಪಯಣ ಬೆಳೆಸಲಿರುವ ನಮ್ಮ ನಾಯಕರ ವೃತ್ತಾಂತ. ಈಗ ನೀವೇ ಹೇಳಿ ರಾಜ್ಯಸಭೆಗೆ ನಡೆದ ಈ ಚುನಾವಣೆಯಿಂದಾಗಿ ರಾಜ್ಯಕ್ಕೆ ಏನು ಲಾಭ?

• ಸದಾಶಿವ ಶೆಣೈ

...ಯುವ್ಯ ಶಿಕ್ಷಕರ ಕ್ಷೇತ್ರ ...ಣದಲ್ಲಿರುವುದು ...ದಿನೈದು ...ಲ್ಲೋ ...ದುರೆ ...ಮೂವುದು?



...ವಾಯುವ್ಯ ಮತಕ್ಷೇತ್ರದ ತುಂಬೆಲ್ಲಾ ಹಣಹೆಂಡಗಳ ...ಾಟ ತಣ್ಣಗೆ ನಡೆಯುತ್ತಿದೆ. ನೆಪ-ವಿಧಾನ ಪರಿಷತ್ ...ವಣೆಯದ್ದು!

...ಬಿಜಾಪುರ, ಬಾಗಲಕೋಟೆ, ಬೆಳಗಾಂವ್ ಜಿಲ್ಲೆಗಳನ್ನೊಳ...ತ, 19,072 ಮತ ಹೊಂದಿರುವ ವಾಯುವ್ಯ ... ರಂಗೇರಿದೆ. ಕಾಂಗ್ರೆಸ್‌ನಿಂದ ಯೋಗಪ್ಪಗೌಡ, ...ಸ್‌ನಿಂದ ಸಹಜಾನಂದ ಮುಂಡರಗಿ ಹಾಗೂ ...ಯಿಂದ ಅರುಣ್ ಶಹಾಪುರನೆಂಬ ಲಾರಿವೀರ ...ಲ್ಲಿದ್ದಾನೆ. ಇನ್ನು ಪಕ್ಷೇತರ ಪಟ್ಟಿಯಲ್ಲಿ 12 ಮಂದಿ ...ಲ್ಲಿದ್ದಾರೆ.

...ಾಂಗ್ರೆಸ್‌ನಿಂದ ಕಣದಲ್ಲಿರುವ ಯೋಗಪ್ಪಗೌಡನ ...ಕ್ಕೆ ಬಂದರೆ, ಅರ್ಧಂಬರ್ಧ ವಕೀಲನಾಗಿರುವ ಈತನಿಗೆ ...ೊಂದಿಗೆ ಒಡನಾಟವಿಲ್ಲ, ಬಿಜಾಪುರ ಜಿಲ್ಲೆಯ ಸಿಂಧಗಿ ... ತವರು. ಆದರೆ ಅಲ್ಲಿನ ಶಿಕ್ಷಕರಿಗೇ ಈತ ಅಪರಿಚಿತ! ...ಸ್ ಟಿಕೆಟ್ ಸಿಗದ್ದಕ್ಕೆ ನಿಟ್ಟಾಗಿರುವ ಜಿ.ಕೆ. ಪಾಟೀಲ್ ... ಶಿಷ್ಯ ಶಿವಪುತ್ರಯ್ಯ ಹಿರೇಮಠ್ ಎಂಬಾತನನ್ನು ...ಳಿಸಿದ್ದಾರೆ.

...ಬಿಜಾಪುರ ಮುಂತಾದೆಡೆಗಳಲ್ಲಿ ಶಿಕ್ಷಣ ಇಲಾಖೆಗಳಲ್ಲಿ ... ಮಾಡಿ ಅನುಭವವಿರುವ ಹಿರೇಮಠ್ ಭ್ರಷ್ಟನಲ್ಲ, ...ಲ್ಲೂ ಆರೇಳು ವರ್ಷಗಳಿಂದ ಈ ಭಾಗದ ...ೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ. ಜೊತೆಗೆ ... ಸಮಸ್ಯೆಗಳಿಗೆ ಮಿಡಿಯುವ ಮನಸ್ಸು ಹೊಂದಿರುವ ...ಗೆಲುವಿನತ್ತ ಹೆಜ್ಜೆ ಕದಲಿಸಿದಂತಿದೆ.

...ನ್ನು ಜೆಡಿಎಸ್‌ನಿಂದ ಕಣದಲ್ಲಿರುವ ಸಹಜಾನಂದ ...ಡರಗಿ ಬಸವರಾಜ ಹೊರಟ್ಟಿಯ ಖಾಸಾ ಶಿಷ್ಯ. ಈ ...ದೇ ಚುನಾವಣೆಗೆ ಸ್ಪರ್ಧಿಸಿ ಗೋತಾ ಹೊಡೆದಿರುವ ... ಶಿಕ್ಷಕರ ಸಂಘದ ಉಪಾಧ್ಯಕ್ಷನಾಗಿರುವುದರಿಂದ ...ಷ್ಟು ಕಾಂಟ್ಯಾಕ್ಟ್‌ಗಳಿವೆ. ಕುಮಾರಸ್ವಾಮಿಯ ಹಣ-ಹೆಂಡದ ಹೊರತಾಗಿ ಸಹಜಾನಂದನ ಹಿಂದೆ ಬೇರ್‍ಯಾವ ಬಲವೂ ಇದ್ದಂತಿಲ್ಲ.

ಇನ್ನು ಬಿಜೆಪಿಯ ಅರುಣ್ ಶಹಾಪುರ ಹಣ-ಹೆಂಡಗಳ ಮದದಿಂದ ಮೆರೆದಾಡ ಹತ್ತಿರುವ ABVP ಪ್ರಾಡಕ್ಟು! ಪ್ರಾಥಮಿಕ ತಿಳಿವಳಿಕೆಯೂ ಇಲ್ಲದ ಈ ಅವಿವೇಕಿ ನಾಮಪತ್ರ ಸಲ್ಲಿಕೆಯಲ್ಲೇ ಲಫಡಾ ಮಾಡಿಕೊಂಡಿದ್ದಾನೆ. ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸುವಾತ ಶಿಕ್ಷಕನಾಗಿರಬೇಕೆಂಬುದು ಕಡ್ಡಾಯವಲ್ಲವೆಂಬುದರ ಅರಿವಿಲ್ಲದ ಈತ ತಾನು ಸಿಂಧಗಿ ತಾಲ್ಲೂಕಿನ ಶ್ರೀ ಲಕ್ಷ್ಮಿವಿದ್ಯಾವರ್ಧಕ ಶಾಲಾ ಶಿಕ್ಷಕನೆಂದು ಸುಳ್ಳು ಹೇಳಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಿಕೊಂಡಿದ್ದಾನೆ. ಹಣ-ಹೆಂಡ-ದಗಲ್ಬಾಜಿಗಳು ಗೆಲುವಿನ ದಡಕ್ಕೆ ಒಯ್ಯಲಾರವೆಂಬುದು ಬೇರೆ ವಿಚಾರ.

ಇದೆಲ್ಲ ಏನೇ ಇದ್ದರೂ ಯೋಗಪ್ಪ ಗೌಡ, ಅರುಣ್ ಶಹಾಬಾದ್ ಹಾಗೂ ಹಿರೇಮಠರ ಮಧ್ಯೆ ಸ್ಪರ್ಧೆಯಿದೆ. ಈ ರೇಸ್‌ನಲ್ಲಿ ಹಿರೇಮಠ ಮುಂದಿದ್ದಾನೆಂಬ ಮಾತೂ ಕೇಳಿಬರುತ್ತಿದೆ. ಸರ್ವೇ ಪ್ರಕಾರ 19 ಸಾವಿರ ಚಿಲ್ಲರೆ ಮತಗಳಲ್ಲಿ 15 ಸಾವಿರ ಮತದಾನ ನಡೆಯಲಿದೆ. ಪಕ್ಷೇತರರೂ ಸೇರಿ 15 ಮಂದಿ ಅಭ್ಯರ್ಥಿಗಳಿದ್ದಾರೆ. ಇದರಲ್ಲಿ 12 ಮಂದಿ ಸೇರಿ 5 ಸಾವಿರ ಮತ ಹಂಚಿಕೊಂಡರೆ, ರೇಸ್‌ನಲ್ಲಿರುವ 3 ಮಂದಿಗೆ 10 ಸಾವಿರದಲ್ಲಿ ಹಂಚಿಕೆಯಾಗಲಿದೆ. 4 ಸಾವಿರ ಮತ ಪಡೆದವರ ಕತ್ತಿಗೆ ವಿಜಯ ಮಾಲೆ ಬೀಳಲಿದೆ.

ಇದೆಲ್ಲದರ ನಡುವೆಯೇ ಎಲ್ಲರೂ ಗೆಲ್ಲಲೇಬೇಕೆಂಬ ತರಾತುರಿಯಲ್ಲಿ ಹಣ-ಹೆಂಡದ ಹೊಳೆಯಲ್ಲಿ ಈಜಾಡುತ್ತಿರುವುದು ಖಚಿತ. ಮತದಾರನ ವಿವೇಕವಷ್ಟೆ ಗೆಲುವಿನ ದಡದತ್ತ ಕೊಂಡೊಯ್ಯುತ್ತದೆಂಬುದು ವಾಸ್ತವ.

ಕೋಮುವಾದ ರೇಬಿಸ್, ನಕ್ಸಲ್‌ವಾದ ಕ್ಯಾನ್ಸರಂತೆ!


ಕೇವಲ ಲಾರಿ ಚೆಡ್ಡಿಯೊಂದಿಗೆ ಶಿಕಾರಿಪುರಕ್ಕೆ ಹೋಗಿ ಮಾವನ ಮನೆಯ ಹುತ್ತ ಸೇರಿಕೊಂಡ ಎಡೂರಪ್ಪ "ನೆರೆ ಹಣ ತಿಂದ ಕಾಂಗ್ಯೆಗಳು ನೈತಿಕತೆ ಬಗ್ಗೆ ಮಾತನಾಡಲು ನಾಚಿಕೆಯಾಗುವುದಿಲ್ಲವೆ?" ಎಂದು ಮೂದಲಿಸಿದ್ದಾರಂತಲ್ಲಾ, ಈ ಮಾತಿಗೆ ಅತ್ತ ಕಾಂಗ್ಯೆನಿಂದ ಯಾವ ಉತ್ತರವೂ ಬಂದಿಲ್ಲವಂತಲ್ಲಾ. ಮಾನ್ಯ ಎಡಿಯೂರಪ್ಪನವರು ಶಿಕಾರಿಪುರದಲ್ಲಿ ನೆಲೆಸಿ, ಬೀಸಿದ ಲಾರಿಯ ಜಾದೂಗಾರಿಕೆಯಿಂದ ರೈಸ್‌ಮಿಲ್ಲುಗಳು, ಮನೆಗಳು, ಪೆಟ್ರೋಲ್ ಬಂಕುಗಳು, ಕಾಲೇಜುಗಳು, ಅಲ್ಲಿಂದ ಶಿವಮೊಗ್ಗಕ್ಕೆ ಹೋದರೆ ಅಲ್ಲಿ ಭವನಗಳು, ಹಾಸ್ಟಲುಗಳು, ಕಾಂಪ್ಲೆಕ್ಸುಗಳು, ಕಾಲೇಜುಗಳು, ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದ ಭೂಮಿ ಇದೆಲ್ಲವೂ ಎಡೂರಪ್ಪನ ಬೆವರಿನ ಹನಿಯಿಂದಲೇ ಸಂಪಾದನೆಗೊಂಡವಂತಲ್ಲಾ, ಅದಕ್ಕೆಂದೇ ಎಡೂರಪ್ಪ ನೆರೆಗೆ ಸಿಕ್ಕವರ ನೆಪದಿಂದ ಕಾಸುಸಂಗ್ರಹಿಸಿ ಕೈ ಕೆಡಿಸಿಕೊಂಡಿರುವ ಕಾಂಗ್ಯೆಗಳನ್ನು ಮೂದಲಿಸುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

ಪ್ರವಾಹ ಸಂಭವಿಸಿದ ನಂತರ ಎಡೂರಪ್ಪ ಬೆಂಗಳೂರಲ್ಲಿ ಪಾದಯಾತ್ರೆ ಮಾಡಿ ಕಾಸು ಸಂಗ್ರಹಿಸಿದರು. ಕೇಂದ್ರದಿಂದಲೂ ಹಣ ಬಂತು. ಕರ್ನಾಟಕದ ದಾನಿಗಳೂ ಹಿಂದೆಮುಂದೆ ನೋಡದೆ ದಾನ ಮಾಡಿದರು. ಆದರೂ ಎಡೂರಪ್ಪನ ಆಸರೆ ಮನೆಗಳು ತಲೆ ಎತ್ತಲಿಲ್ಲ. ಆದರೆ ಮಾತೆ ಅಮೃತಾನಂದಮಯಿ ಎಂಬ ಅಮ್ಮ ನೂರಾರು ಮನೆಗಳನ್ನು ಕಟ್ಟಿಸಿಕೊಟ್ಟು ಬೆಂಗಳೂರು ಬಳಿ ಒಳ್ಳೆ ಜಾಗವನ್ನೇ ಲಪಟಾಯಿಸಿದಳಂತಲ್ಲಾ, ಸರ್ಕಾರದ ಸೇನೆಯಿಟ್ಟುಕೊಂಡು ಸುಸ್ತಾಗಿ ಹೋಗಿರುವ ಎಡೂರಪ್ಪನಿಗೆ ಈ ಕಾಂಗ್ಯೆಗಳು ಮಾಡಿಕೊಂಡಿರುವ ನೆರೆ ದುಡ್ಡಿನ ಡಿಪಾಸಿಟ್ಟೇ ಗುರಾಣಿಯಂತೆ ಸಿಕ್ಕಲಾಗಿ, ಹಂದಿಯೊಂದು ಹಾಳು ಗೋಡೆಯನ್ನು ಮೂದಲಿಸಿದಂತೆ ಟೀಕಿಸುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

"ಕೋಮುವಾದ ರೇಬಿಸ್ ಇದ್ದಂತೆ, ನಕ್ಸಲ್‌ವಾದ ಕ್ಯಾನ್ಸರ್ ಇದ್ದಂತೆ. ಎರಡೂ ದೇಹಕ್ಕೆ ಅಪಾಯಕಾರಿಯಾದರೂ ರೇಬಿಸ್ ತುಂಬ ಅಪಾಯಕಾರಿ" ಎಂದು ಅನಂತಮೂರ್ತಿಯವರು ಪುನರುಚ್ಚರಿಸಿದ ಹಳೆ ಮಾತಿಗೆ, ಕ್ಯಾಟ್ ಫ್ಯಾಮಿಲಿಯ ನರಿಯೊಂದು ಸಿಂಹದಂತೆ ಘರ್ಜಿಸಿದೆಯಂತಲ್ಲಾ, ಎಷ್ಟೇ ಗರ್ಜಿಸಿದರೂ ಸದರಿ ಸಿಂಹನ ಕೂಗು ನರಿ ಊಳಿಟ್ಟಂತೆ ಕೇಳಿಸಿದ್ದರಿಂದ ಬಿದ್ದು ಬಿದ್ದು ನಗುತ್ತಿರುವ ನಕ್ಸಲರು "ಈ ನರಿಗೆ ರೇಬಿಸ್ ಹಿಡಿದು ಬಹಳ ದಿನಗಳೇ ಆಗಿವೆ. ಆದರೂ ಯಾರೂ ಚುಚ್ಚುಮದ್ದು ಕೊಡಿಸಲಾಗಿಲ್ಲ, ಆದ್ದರಿಂದಲೇ ಇದು ಜ್ಞಾನಪೀಠಿ ಅನಂತಮೂರ್ತಿಯವರನ್ನ ಏನಾದರೂ ಮಾಡಿ ಕಚ್ಚಲೇಬೇಕೆಂದು ಹಟತೊಟ್ಟಿದೆ. ಭೋಜನಪ್ರಿಯರ ಹಿಂಡವಾದ ಈ ನರಿ, ಸಮಯಕ್ಕೆ ಸರಿಯಾಗಿ ಉಂಡು ತಲೆ ಕೆಟ್ಟಂತೆ ಕೆರೆಯುವುದೂ ಅಲ್ಲದೇ, ನಕ್ಸಲರೆಲ್ಲಾ ಎಸ್ಸಿ, ಎಸ್ಟಿ, ಒಬಿಸಿ ಹುಡುಗರೆಂದು ಜನಗಣತಿ ನಡೆಸುವುದರ ಬದಲು, ಅನ್ನ ತಿನ್ನುವವರು ಮಾತನಾಡುವಂತೆ ಮಾತನಾಡಿ, ಬರೆಯುವುದು ಒಳ್ಳೆಯದು" ಎಂದಿಲ್ಲವಂತಲ್ಲಾ, ಥೂತ್ತೇರಿ!



* * * *

ಕೇರಳದ ಕಮ್ಯುನಿಸ್ಟ್ ನಾಯಕ ಎ.ಕೆ. ಗೋಪಾಲನ್ ನೆನಪಿನ ಸಭೆ, ಭವನದ ಉದ್ಘಾಟನೆಯೆಲ್ಲಾ ಬೆಂಗಳೂರಲ್ಲಿ ಜರುಗಿ ಸದರೀ ಸಭೆಗೆ ಆ ತುದಿಯಿಂದ ಅನಂತಮೂರ್ತಿ, ಈ ತುದಿಯಿಂದ ದೇವೇಗೌಡರು ಹೋಗಿದ್ದು ಕೂತಿದ್ದು ಮಾತನಾಡಿ ಬಂದರಂತಲ್ಲಾ. ಎ.ಕೆ. ಗೋಪಾಲನ್ ಕಮ್ಯುನಿಸ್ಟ್ ಸಿದ್ಧಾಂತವನ್ನು ಕೇರಳಿಗರಿಗೆ ಅರ್ಥವಾಗುವಂತೆ ಮನೆಮನೆಗೂ ತಲುಪಿಸಿದ ವ್ಯಕ್ತಿ, ಸ್ವಂತಕ್ಕಾಗಿ ಏನೂ ಇರಲಿಲ್ಲ, ಹೆಂಡತಿ ಮಾತ್ರ ಇದ್ದಳು. ಆದರೆ ಕಮ್ಯುನಿಸ್ಟಮ್ಮಿನ ಅಮಲಿನಲ್ಲಿ ಸ್ವಂತ ಹೆಂಡತಿಯನ್ನು ಮರೆತು ಕಮ್ಯುನಿಸಮ್ ಬೆನ್ನ ಹತ್ತಲಾಗಿ, ಹಿಂದಿನಿಂದ ಹೆಂಡತಿ ಕೂಗಿ "ನಿಮ್ಮ ಜೊತೆ ನಾನು ಇದ್ದೇನೆ" ಎಂದಿದ್ದರಂತಲ್ಲಾ, ಅದಕ್ಕೆ ಗೋಪಾಲನ್ "ಕುಟ್ಟ ನಿನಗೆ ನನ್ನಿಂದ ಏನೂ ಪ್ರಯೋಜನವಿಲ್ಲ, ನಿನ್ನ ದಾರಿ ನೋಡಿಕೊಂಡು ಸುಖವಾಗಿರು. ನಾನು ನನ್ನ ದಾರಿಯಲ್ಲಿ ಹೋಗುತ್ತೇನೆ. ನಂಬೂದರಿ ಕಾಯುತ್ತಿದ್ದಾರೆ. ನಾನಿನ್ನು ಬರಲೇ?" ಎಂದು ಹೊರಟುಹೋದರಂತಲ್ಲಾ, ಅಂತಹ ಮಹಾನ್ ಕಮುನಿಸ್ಟನ ನೆನಪಿನ ಸಭೆಗೆ ಸಾವಿರಾರು ಕೋಟಿ ರೂಪಾಯಿನ ಸಂಪತ್ತು, ಏಳೆಂಟು ಮಕ್ಕಳು, ನೂರು ಮೊಮ್ಮಕ್ಕಳನ್ನು ಮಾಡಿಕೊಂಡು ಸುಖ ಸಂತೋಷದಿಂದ ನೆಮ್ಮದಿಯಾಗಿರುವ ಬುಡಕಟ್ಟಿನ ನಾಯಕರಾದ ದೇವೇಗೌಡರು ಏಕೆ ಹೋಗಿದ್ದರು ಎಂದು ಎ.ಕೆ. ಆಂಟನಿ ಹಿಂಬಾಲಕರು ಕೇಳಿದವಂತಲ್ಲಾ, ಥೂತ್ತೇರಿ!

* * * *

ಇದ್ದಕ್ಕಿದ್ದಂತೆ ಕಿಂಗ್‌ಫಿಷರ್ ಬೀರು ನಮ್ಮ ಎಲ್ಲಾ ಪಾರ್ಟಿಗಳಿಗೂ ತುಂಬಾ ಇಷ್ಟವಾಗಿದೆಯಂತಲ್ಲಾ, "ಈ ಬೀರು ಎಂದೂ ಕೂಡ ರಮ್ಮು, ವಿಸ್ಕಿ, ಬ್ರಾಂದಿಯ ಮಟ್ಟಕ್ಕೆ ಕಿಕ್ ಕೊಡಲಾರದು. ಹೊಟ್ಟೆ ತುಂಬಾ ಕುಡಿದು ಸೀಸಗಟ್ಟಲೆ ಮೂತ್ರ ಮಾಡುವುದನ್ನು ಬಟ್ಟರೆ ಇದರಿಂದ ಇನ್ನಾವ ಘನಕಾರ್ಯವೂ ಜರುಗುವುದಿಲ್ಲ, ಆದ್ದರಿಂದ ನಾವು ಇದನ್ನು ಕಿಕ್ಕಿನ ಪಾನೀಯದಿಂದ ಹೊರಗಿಟ್ಟಿದ್ದೇವೆ. ಹಾಗೆ ನೋಡಿದರೆ ಇದು ಪಾನೀಯವೇ ಅಲ್ಲ, ಒಂದು ರೀತಿ ಮೂತ್ರವಿದ್ದಂತೆ. ಆದಕ್ಕೆ ನಮಗೆ ಇದು ತುಂಬಾ ಇಷ್ಟ. ಬೇಕಿದ್ದರೆ ನೀವು ಮೂತ್ರವನ್ನು ಫ್ರಿಜ್‌ನಲ್ಲಿ ಇಟ್ಟು ಕುಡಿದು ನೋಡಿ, ಆಹಾ ಎಂತಹ ರುಚಿ ಅಂತೀರೀ? ಅದಕ್ಕೆ ನಮ್ಮ ಓಟುಗಳನ್ನು ಮಲ್ಯನ ಬೀರುಬಾಟಲಿಗೆ ತುಂಬುತ್ತೇವೆ" ಎಂದು ಬಿಜೆಪಿಗಳು ಬಾಯಿ ಚಪ್ಪರಿಸಿದವಂತಲ್ಲಾ, ಥೂತ್ತೇರಿ!!!




ಉತ್ತರ ಕನ್ನಡ: ಪಾಲೇಮಾರ್ ಪಾಲಿಗೆ ಬಂದಿದ್ದರಾ ಬೇಲೇಕೇರಿ ಬಂದರಿಗೆ?

ಉತ್ತರ ಕನ್ನಡದ ಬೇಲೇಕೇರಿ ಬಂದರಿಗೆ ಅಕ್ರಮ ಅದಿರು ಸಿರಿಯು ಗರಬಡಿದಿದೆ! ಕಬ್ಬಿಣದ ಅದಿರು ಮಾಫಿಯಾದ ದಗಲುಬಾಜಿ ವಹಿವಾಟಿನ ಅಟ್ಟಹಾಸಕ್ಕೆ ಸ್ಥಳೀಯ ಬಡ ಬೆಸ್ತರ ಬದುಕು ಬವಣೆಯಾಗಿ ಹೋಗಿದೆ. ಮೀನುಗಾರರ ಜೀವನಾಧಾರ ಫಿಶ್ಶಿಂಗ್ ಜೆಟ್ಟಿಗಳನ್ನೇ ಅದಿರು ರಫ್ತು ಕಂಪನಿ ರಾಕ್ಷಸರು ಆನಾಮತ್ತು ನುಂಗಿ ನೊಣೆದಿದ್ದಾರೆ. ಬೆಸ್ತರು ಬೀದಿ ಪಾಲಾಗಿ ಹೋಗಿದ್ದಾರೆ!

ಅದಿರು ಮಾಫಿಯಾದ ಅಕ್ರಮ ಆಯಕಟ್ಟಿನ ಅಡ್ಡೆಗಳಲ್ಲಿ ಈ ವಾಣಿಜ್ಯ ಬಂದರು ಪ್ರಮುಖವಾದದ್ದು. ಇಲ್ಲಿ ನಡೆಯುವ ದೋನಂಬರ್ ದಂಧೆ ಒಂದೆರಡಲ್ಲ. ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ತೆರಿಗೆ ವಂಚಿಸಿ ಲಕ್ಷಾಂತರ ಟನ್ ಅದಿರು ಇಲ್ಲಿಂದ ವಿದೇಶಕ್ಕೆ ಹೋಗುತ್ತಿದೆ. ಪರಿಸರ ನಿಯಮ, ಮಾನವ ಹಕ್ಕುಗಳನ್ನೆಲ್ಲ ರಾಜಾರೋಷವಾಗೇ ಅದಿರು ರಫ್ತು ದೊರೆಗಳು ಬುದ್ಧಿಪೂರ್ವಕವಾಗೇ ಧಿಕ್ಕರಿಸಿದ್ದಾರೆ. ಅರಣ್ಯ, ಬಂದರು, ಕಂದಾಯ, ಪರಿಸರ -ಹೀಗೆ ಎಲ್ಲಿ ಇಲಾಖೆಯ ಅಧಿಕಾರಿಗಳ ಕೃಪಾಶೀರ್ವಾದ ದುಡ್ಡು ಕೊಟ್ಟುಕೊಂಡು ಪಡೆದಿರುವ ಈ ಪಾಪಿಗಳು ನಿರಂತರ ನಿರಾತಂಕವಾಗಿ ಪಾತಕ ವ್ಯವಹಾರ ಮುಂದುರಿಸಿದ್ದಾರೆ!

ಲೋಕಾಯುಕ್ತ, ಮಾನವಹಕ್ಕು ಆಯೋಗ ಆಗಾಗ ಬೇಲೇಕೇರಿ ಬಂದರಿಗೆ ದಾಳಿ ಮಾಡುತ್ತಲೇ ಇದೆ. ಅವ್ಯವಹಾರ, ಧಗಾ-ಮೋಸದ ದಂಧೆ, ಪರಿಸರನಾಶ ಮತ್ತು ಮಾನವ ಹಕ್ಕು ಉಲ್ಲಂಘನೆ ಇಲ್ಲಾಗುತ್ತಿದೆ ಎಂದು ಸರ್ಕಾರಕ್ಕೂ ಈ ಏಜೆನ್ಸಿಗಳು ದೂರಿದೆ. ಆದರೆ ಬಂದರು ಮಂತ್ರಿ ಕೃಷ್ಣ ಪಾಲೇಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕಾಗೇರಿ ಮಾಣಿ ಮತ್ತು ಅದಿರು ದಂಧೆಕೋರ ಮಂತ್ರಿ ಆನಂದ್ ಅಸ್ನೋಟಿಕರ್‌ನ ಅಭಿಯಾಶೀರ್ವಾದ ಇರುವುದರಿಂದ





ಗೋಲ್‌ಮಾಲ್‌ಗೆ ಯಾವ ಧಕ್ಕೆಯೂ ಆಗಿಲ್ಲ! ಬೇಲೇಕೇರಿ ಬಂದರಿನಲ್ಲಿ ಲಕ್ಷಾಂತರ ಟನ್ ಅದಿರು ಕದ್ದು ಅದಿರು ರಫ್ತು ಕಂಪನಿಗಳು ವಿದೇಶಕ್ಕೆ ಕಳಿಸಿರುವುದು ಈಗ ದೊಡ್ಡ ರಾದ್ಧಾಂತ ಮಾಡಿಬಿಟ್ಟಿದೆ. ಬಂದರು ಮತ್ತು ಪರಿಸರ ಮಂತ್ರಿ ಪಾಲೇಮಾರ್ ಈ ಲೂಟ್‌ಮಾರ್ ಕರಾಮತ್ತಿನಲ್ಲಿ ಕೈಜೋಡಿಸಿದ್ದಾರೆಂಬ ಗಂಭೀರ ಗುಲ್ಲೆದ್ದಿದೆ.

ಬೇಲೇಕೇರಿ ಬಂದರಿನಲ್ಲಿ ಸುಮಾರು 8.5 ಲಕ್ಷ ಮೆಟ್ರಿಕ್ ಟನ್ ಕಳ್ಳ ಕಬ್ಬಿಣದ ಅದಿರು ದಾಸ್ತಾನು ಮಾಡಲಾಗಿತ್ತು. ಹೀಗೆ ದೋ ನಂಬರ್ ಅದಿರು ಶೇಖರಿಸಿದ್ದು ಬರೋಬ್ಬರಿ 11 ರಫ್ತು ಕಂಪನಿಯ ಖದೀಮರು. ಇದು ಲೋಕಾಯುಕ್ತದ ಕಣ್ಣಿಗೆ ಬಿತ್ತು. ಲೋಕಾಯುಕ್ತರು ಅರಣ್ಯ ಇಲಾಖೆಗೆ ಈ ಬಗ್ಗೆ ತನಿಖೆ ಮಾಡುವಂತೆ ಆದೇಶಿಸಿದರು. ಏಳೇಳು ಫಾರೆಸ್ಟ್ ಚೆಕ್‌ಪೋಸ್ಟ್‌ಗಳಿಂದ ಅಕ್ರಮ ಅದಿರು ನುಸುಳಿ ಬೇಲೇಕೇರಿಗೆ ಬರಲು ಅವಕಾಶ ಕೊಟ್ಟು ಎಂಜಲುಕಾಸು ಬಾಚಿದ್ದ ಅರಣ್ಯ ಅಧಿಕಾರಿಗಳ ಲೋಕಾಯುಕ್ತರ ಆಜ್ಞೆಯಿಂದ ಕಂಗಾಲು ಬಿದ್ದರು.

ಬೇಲೇಕೇರಿ ಬಂದರಿಗೆ ಹೋಗಿ ಅಕ್ರಮ ಅದಿರು ಸೀಜ್ ಮಾಡದೆ ಬಚಾವಾಗುವುದು ಸಾಧ್ಯವಿಲ್ಲವೆಂಬುದು ಅರಣ್ಯ ಅಧಿಕಾರಿಗೆ ಖಾತ್ರಿಯಾಗಿದ್ದೇ ತಡ ದಾಳಿ ನಡೆಯಿತು. 8.5 ಲಕ್ಷ ಮೆಟ್ರಿಕ್ ಟನ್ ಅದಿರಿಗೆ ಅರಣ್ಯ ಇಲಾಖೆ ಪರವಾನಗಿ ಇಲ್ಲವೆಂದು ಹೇಳಿ ಮುಟ್ಟುಗೋಲು ಹಾಕಿಕೊಂಡಿತು. ನ್ಯಾಯಾಲಯದ ಆದೇಶದಂತೆ ಈ ಅದಿರನ್ನು ಬಂದರು ಸಂರಕ್ಷಣಾಧಿಕಾರಿ ಬಲಿಯೆ ಎಂಬುವರ ವಶಕ್ಕೆ ಒಪ್ಪಿಸಲಾಯ್ತು.

ಕಳೆದ ಮಾರ್ಚ್ 20ರಂದು ಈ ಸೀಜ್ ನಾಟಕ ನಡೆದಿತ್ತು. ಇದಾದ ಕೆಲವೇ ದಿನಗಳಲ್ಲಿ ನೋಡುನೋಡುತ್ತಿದ್ದಂತೆಯೇ 6 ಲಕ್ಷ ಟನ್ ಅದಿರನ್ನು ಹನ್ನೊಂದು ರಫ್ತುದಾರರು ಹಾಡುಹಗಲೇ ಕದ್ದು ಹಡಗಿಗೇರಿಸಿ ವಿದೇಶಕ್ಕೆ ಕಳಿಸಿಬಿಟ್ಟರು. ಹೀಗೆ ಲೂಟಿ ಮಾಡಿದ ಸರ್ಕಾರಿ ಅದಿರಿನ ಬೆಲೆ ದೇಶೀಮಾರುಕಟ್ಟೆಯಲ್ಲಿ ಬರೋಬ್ಬರಿ 200 ಕೋಟಿ ರೂಪಾಯಿಗಳು! ವಿದೇಶಿ ಮಾರ್ಕೆಟ್ಟಿನಲ್ಲಿ ಇದಕ್ಕೆ 300 ಕೋಟಿ ಬೆಲೆಯಿದೆ!!

ಈ ಚೋರಿ ಪ್ರಕರಣ ಅದಿರು ರಫ್ತುದಾರರ ನಡುವಿನ ವೈಷಮ್ಯದ ಪೈಪೋಟಿಯಿಂದ ಬಹಿರಂಗವಾಗಿ ಹೋಯ್ತು. ವಿಧಿಯಿಲ್ಲದೆ ಮತ್ತೆ ತನಿಖೆಗೆ ಹೋದ ಅರಣ್ಯಾಧಿಕಾರಿಗಳು 6 ಲಕ್ಷ ಟನ್ ಅದಿರು ಕದ್ದ 11 ರಫ್ತುದಾರರು ಮತ್ತು ಪೋರ್ಟ್ ಕಾನ್ಸರ್‌ವೇಟರ್ ಬಲಿಯೇ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಬೇಕಾಗಿ ಬಂತು. ಕೇಸು ಮಾಡುವಾಗಲೂ ಪೋರ್ಟ್ ಡೈರೆಕ್ಟರ್ ಗಣೇಶ್, ಚೀಫ್ ಪೋರ್ಟ್ ಕನ್ಸರ್‌ವೇಟರ್ ಸ್ವಾಮಿಗಳಂಥ ಹೆಗ್ಗಣಗಳನ್ನು ಬಿಟ್ಟು ಮರಿ ಇಲಿ ಬಲಿಯೇನನ್ನು ಮಾತ್ರ ಖದೀಮ ಅರಣ್ಯಾಧಿಕಾರಿಗಳು ಬೋನಿಗೆ ಹಾಕಿ ಸಂಶಯಕ್ಕೀಡಾಗಿದ್ದರು.

ಇದಾದ ಮರುದಿನವೇ ಬಂದರು ಮತ್ತು ಪರಿಸರ ಮಂತ್ರಿ ಕೃಷ್ಣ ಪಾಲೇಮಾರ್‌ರ ಅವತಾರ ಬೇಲೇಕೇರಿ ಬಂದರಿನಲ್ಲಾಯ್ತು! ಈ ಬಂದರಿನಲ್ಲಿ ಅಕ್ರಮ-ಅನ್ಯಾಯ ನಡೆಯುತ್ತಿದೆ; ಬಡ ಬೆಸ್ತರಿಗೆ ತೊಂದರೆ ಆಗುತ್ತಿದೆ; ಬಂದರು ಅಭಿವೃದ್ಧಿ ಆಗಬೇಕಾಗಿದೆ; ಹಾಗಾಗಿ ಒಮ್ಮೆ ಇತ್ತ ಪಾದ ಬೆಳೆಸಿ ಬಂದು ನೋಡಿ ಹೋಗಿ ಎಂದು ಪದೇಪದೆ ಒತ್ತಾಯಿಸಿದರೂ ಬರದೇ ತಲೆ ಮರೆಸಿಕೊಂಡಿದ್ದ ಮಂತ್ರಿ ಪಾಲೇಮಾರ್ ಅದಿರು ಅಪಹರಣದ ಹಗರಣ ನಡೆದ ಮರುದಿನವೇ ಬೇಲೇಕೇರಿಗೆ ಬಿಜಯಂಗೈದಿದ್ದು "ಅಸಲಿ ಅವತಾರ" ಅನಾವರಣ ಮಾಡಿಬಿಟ್ಟಿದೆ!!

ಯಡ್ಡಿ ಸರ್ಕಾರದ ಮಂತ್ರಿಗಳು ಎಂಥ ಆತ್ಮಘಾತುಕರು-ಲಂಚಬಡುಕರು ಎಂಬುದನ್ನು ಈ ಕಳ್ಳ ಕೃಷ್ಣ ಪಾಲೇಮಾರ್ ಬೇಲೇಕೇರಿ ಮತ್ತು ಕಾರವಾರ ಬಂದರಿನಲ್ಲಿ ಓಡಾಡಿದ-ಮಾತಾಡಿದ ಪರಿಯೇ ನಿಸ್ಸಂಶಯ ವಾಗಿ ಸಾಬೀತು ಪಡಿಸುವಂತಿದೆ. ತಮಾಷೆಯೆಂದರೆ ಅವ್ಯವಹಾರ-ಅಕ್ರಮಗಳ ಪರಿಶೀಲನೆಗೆ ಬಂದಿದ್ದ ಮಂತ್ರಿ ಪಾಲೇಮಾರ್ ಕದ್ದು ಅದಿರು ಸಾಗಿಸಿದ ಹನ್ನೊಂದು ರಫ್ತು ಕಂಪನಿಯ ಅಪರಾಧಿಗಳನ್ನು ಸುತ್ತಲೂ ಇಟ್ಟುಕೊಂಡು ಬೇಲೇಕೇರಿ ಬಂದರಿನ ಉದ್ದಗಲಕ್ಕೆ ಅಂಡಲೆದು ಹೋಗಿದ್ದರು! ಈ ಘಟಿಂಗರ ಮೇಲೆ ಕ್ರಮ ಜರುಗಿಸುವುದು ಬಿಟ್ಟು ಸಣ್ಣ ಮಟ್ಟದ ಅಧಿಕಾರಿ ಬಲಿಯೆ ಎಂಬ ಪೋರ್ಟ್ ಕನ್ಸರ್ವೇಟರ್‌ನ ಉದಾಸೀನದಿಂದಲೇ ಈ ಕಳ್ಳತನ ನಡೆದಿದೆ ಎಂದು ಶರಾಗೀಚಿ ಆತನ ಅಮಾನತ್ತು ಮಾಡಿದರು.



ಅಲ್ಲಿಗೆ ಬರೋಬ್ಬರಿ 200 ಕೋಟಿ ರೂ. ಹಗರಣ ಈ ಹೊಣೆಗೇಡಿ ಮಂತ್ರಿ ಸಮಾಧಿ ಮಾಡಿಹೋದಂತಾಯ್ತು! ಇಲ್ಲಿರುವ ಪ್ರಶ್ನೆಗಳು-ಅನುಮಾನಗಳು ತುಂಬ ಸರಳ, ಆರಂಭದಲ್ಲೇ ಈ ಸೀಜ್ಡ್ ಅದಿರನ್ನು ವಶಕ್ಕೆ ತೆಗೆದುಕೊಳ್ಳಲು ಬಲಿಯೇ ಒಪ್ಪಿರಲಿಲ್ಲ. ಇಂತಹ ಭಾನಗಡಿ ಆಗಬಹುದೆಂಬ ಭಯ ಆತನಿಗಿತ್ತು. ಆದರೂ ಆತನ ಮೇಲಧಿಕಾರಿಗಳಾದ ಚೀಫ್ ಪೋರ್ಟ್ ಕನ್ಸರ್ವೇಟರ್ ಸ್ವಾಮಿ ಮತ್ತು ಬಂದರು ನಿರ್ದೇಶಕ ಗಣೇಶನನ್ನು ಸಂರಕ್ಷಿಸಿದ್ದಾರೆ ಮಂತ್ರಿ ಪಾಲೇಮಾರ್. ಲೋಕಾಯುಕ್ತರ ಕಣ್ಣು ಕಟ್ಟಲಷ್ಟೇ ಈ ಬಲಿಯೆ ಬಲಿ ಪುರಾಣ ನಡೆದಿದೆಯಷ್ಟೇ.

ಈ 200 ಕೋಟಿ ರೂ. ಅದಿರು ದರೋಡೆಯ ಹಿಂದೆ ಯಡ್ಡಿಯ ಚೆಡ್ಡಿ ಸರ್ಕಾರದ ಮೂಗುದಾರ ಹಿಡಿದು ಕೂತಿರುವ ಅದಿರು ಲಾಬಿಯಿದೆ! ಸೀಜ್ಡ್ ಅದಿರನ್ನು ರಫ್ತು ಮಾಡಲು ಬಂದರು ಅಧಿಕಾರಿಗಳು ಪರೋಕ್ಷ ಪರ್ಮಿಶನ್ ಕೊಟ್ಟಿದ್ದರು. ಬೆಂಗಳೂರಿನ ವಿಧಾನಸೌಧದಿಂದಲೇ ಬಂದರು ಇಲಾಖಾಧಿಕಾರಿಗಳಿಗೆ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರು ರಫ್ತುದಾರರು ಹೊರ ದೇಶಕ್ಕೆ ರವಾನಿಸುವ ತನಕ ನಿಸ್ಸೀಮ ನಿರ್ಲಕ್ಷದಿಂದಿರಲು 'ನಿರ್ದೇಶನ' ಬಂದಿತ್ತೆಂಬುದು ಈಗ ಬಂದರು ಇಲಾಖೆಯ ಕಂಬ-ಕಂಬವೂ ಪಿಸುಗುಡುತ್ತಿದೆ. ಬೇಲೇಕೇರಿ ಬಂದರಿನಲ್ಲಂತೂ ಈ ಕಪಟ ನಾಟಕದ ಸೂತ್ರಧಾರ ಕೃಷ್ಣ ಪಾಲೇಮಾರ್ ಮತ್ತವನ ಬಾಸ್ ಗಣಿಧಣಿ ಮಂತ್ರಿಗಳೆಂಬುದು ಬಹಿರಂಗ ರಹಸ್ಯದಂತಾಗಿ ತೇಲುತ್ತಿದೆ.

ಸರ್ಕಾರದ 6 ಲಕ್ಷ ಮೆಟ್ರಿಕ್ ಟನ್ ಅದಿರು ಕದಿಯಲು ಅವಕಾಶ ಕೊಟ್ಟಿದ್ದಕ್ಕಾಗಿ ಪಾಲೇಮಾರ್ ಸಾಹೇಬರಿಗೆ ಚೋರ ರಫ್ತುದಾರರು ಬೇಲೇಕೇರಿಗೆ ಕರೆಸಿ ದೊಡ್ಡ ಇನಾಮು ಕೊಟ್ಟು ಕಳಿಸಿದ್ದಾರೆ. ಈ ಪ್ರಕರಣ ಒಂದರಲ್ಲೇ ಮಂತ್ರಿಗೆ ಐದು ಕೋಟಿ ವಂತಿಗೆ ಕೊಡಲಾಗಿದೆಯೆಂಬುದು ಈಗ ಬೇಲೇಕೇರಿ-ಕಾರವಾರದಲ್ಲಿ ಕೇಳಿಬರುತ್ತಿರುವ ಅದಿರು ಮಹಿಮೆ!


ಒಟ್ಟಿನಲ್ಲಿ ಬಂದರು-ಪರಿಸರ ಮಂತ್ರಿ ಕೃಷ್ಣ ಪಾಲೇಮಾರ್ "ದೂರದ" ಮಂಗಳೂರಿಂದ "ಪುರುಸೊತ್ತು" ಮಾಡಿಕೊಂಡು ಬೇಲೇಕೇರಿಗೆ ಬಂದಿದ್ದು ಪಾಲು ಪಡೆದುಕೊಂಡು ಹೋಗಲಿಕ್ಕಾಗಿತ್ತು ಎಂಬುದೀಗ ಖಾತ್ರಿಯಾಗಿ ಹೋಗಿದೆ. ಹೇಗಿದೆ ಆರೆಸೆಸ್ ಡಾನ್ ಡಾ. ಕಲ್ಲಡ್ಕ ಪ್ರಭಾಕರ್ ಭಟ್ಟರ ದೇಶಭಕ್ತಿಯ ಗರಡಿಯಲ್ಲಿ ತಯಾರಾದ ಪಾಲೇಮಾರ್‌ರ ಪ್ರಾಮಾಣಿಕತೆ ನಾಟಕ? ಇಂಥ ಮಂತ್ರಿಗಳನ್ನು ನೇಮಿಸಿಕೊಂಡು "ಜನಸೇವೆ" ಮಾಡುತ್ತಿರುವ ಯಡ್ಡಿ ಧನ್ಯ! ಧನ್ಯ!! ಅಲ್ಲವೇ?

• ನಹುಶ

ಸೋಮಣ್ಣಗೆ ಸಚಿವ ಸ್ಥಾನ : ಅಶೋಕ್ ವಿರೋಧ


ಯಾರು ಎಷ್ಟೇ ಬೈದರೂ, ಸ್ವತಃ ರಾಜ್ಯಪಾಲ ಭಾರದ್ವಾಜ್ ಕತ್ತು ಹಿಡಿದು ಆಚೆ ದಬ್ಬಿದರೂ ಹಿಂಬಾಗಿಲ ಮೂಲಕ ವಿಧಾನ ಪರಿಷತ್ ಪ್ರವೇಶಿಸಿರುವ ವಿ. ಸೋಮಣ್ಣಗೆ ಈಗ ಬಿಜೆಪಿಗಳಿಂದಲೇ ವಿರೋಧ ಎದುರಾಗಿದೆ.

ಸೋಮಣ್ಣ ಮಂತ್ರಿಯಾಗ ಕೂಡದು ಎಂಬುದೇ ಈ ಗುಂಪಿನ ಹಠ.



ಸಾರಿಗೆ ಸಚಿವ ಹಾಗೂ ಬೆಂಗಳೂರು ಬಿಜೆಪಿ ಶಾಸಕರ ನಾಯಕ ಆರ್. ಅಶೋಕ್ ಈಗ ಸೋಮಣ್ಣ ಮಂತ್ರಿಯಾಗದಂತೆ ತಡೆಯಲು ಕಸರತ್ತು ಶುರು ಮಾಡಿದ್ದಾರೆ. ಅಶೋಕ್ ಜೊತೆ ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರೂ ಸಹ ಈಗ ಸೋಮಣ್ಣ ವಿರೋಧಿ ಕ್ಯಾಂಪ್ ಸೇರಿಕೊಂಡಿದ್ದಾರೆ. ಬಿಜೆಪಿಯೊಳಗಿರುವ ಲಿಂಗಾಯತರ ಗ್ಯಾಂಗ್ ಅನ್ನು ಇನ್ನಷ್ಟು ಬಲಿಷ್ಠಪಡಿಸಿಕೊಳ್ಳಲು ಬಯಸಿರುವ ಯಡ್ಡಿಗೆ ಈಗ ಸೋಮಣ್ಣ ಸಚಿವನಾಗುವುದು ಬೇಕಿದೆ. ಆ ಮೂಲಕ ಹಾಲಿ ಬೆಂಗಳೂರಿನ ಅಧಿಪತಿಗಳಂತೆ ಮೆರೆಯುತ್ತಿರುವ ಕಟ್ಟಾ ನಾಯ್ಡು ಹಾಗೂ ಅಶೋಕ್‌ರನ್ನು ಮೂಲೆಗುಂಪು ಮಾಡುವ ಉದ್ದೇಶ ಯಡ್ಡಿಗಿದೆ. ಈ ಅಪಾಯದ ವಾಸನೆ ಹೊಡೆದ ತಕ್ಷಣ ಅಶೋಕ್ ರಾಂಗ್ ಆಗಿದ್ದಾರೆ. ಬೆಂಗಳೂರನ್ನು ಡಿವೈಡ್ ಮಾಡಿಕೊಂಡು ಆಳುತ್ತಿರುವ ಅಶೋಕ್-ನಾಯ್ಡು ಗುಂಪಿಗೆ ಸೋಮಣ್ಣನಂತಹ ಇನ್ನೊಬ್ಬ ನುಂಗಣ್ಣ ಬೇಕಿಲ್ಲ. ಸೋಮಣ್ಣನನ್ನು ಬಹುತೇಕ ನಗರಾಭಿವೃದ್ಧಿ ಮಂತ್ರಿಯಾಗಿಸುವ ಉದ್ದೇಶ ಯಡ್ಡಿಗಿದೆ. ಅಶೋಕ್ ಹಾಗೂ ಕಟ್ಟಾ ನಾಯ್ಡು ಹೇಳಿಕೇಳಿ ರಿಯಲ್ ಎಸ್ಟೇಟ್ ದಂಧೆಕೋರರು. ನಾಳೆ ಸೋಮಣ್ಣ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗೇ ಬಿಟ್ಟರೆ ತನಗೊಂದು ರಾಜಕಾಲುವೆ ತೋಡಿಕೊಂಡು ಇದೇ ದಂಧೆಗೆ ಕೈಹಾಕುವ ಬಗ್ಗೆ ಅಶೋಕ್‌ಗೆ ಅನುಮಾನಗಳಿಲ್ಲ. ಅಷ್ಟೇ ಅಲ್ಲ ಯಡ್ಡಿ-ಸೋಮಣ್ಣ ಲಿಂಗಾಯತರೇ ಆಗಿದ್ದು ಈಗ ದೂರದ ಸಂಬಂಧಿಗಳೂ ಹೌದು. ಯಡ್ಡಿಯ ಪತ್ರಿಕಾ ಕಾರ್ಯದರ್ಶಿ ಆರ್.ಪಿ. ಜಗದೀಶರ ಕೋ ಬ್ರದರ್ ಯಾರೋ ಮೈಸೂರಿನ ಕಡೆಯವರು ಇನ್ಯಾವುದೋ ಬಾದರಾಯಣ ಸಂಬಂಧದ ಮೂಲಕ ಮಂಡ್ಯದ ಬೂಕನಕೆರೆಯ ಯಡ್ಡಿಯ ನೆಂಟರಿಗೆ ನೆಂಟರಾಗಿದ್ದಾರೆ. ಈ ಮಧ್ಯೆ ಇನ್ನೊಬ್ಬ ಲಿಂಗಾಯತ ಅಬಕಾರಿ ಕಮಿಷನರ್ ವೀರಪ್ಪನ ಮಗನಿಗೆ ಸೋಮಣ್ಣ ತಮ್ಮ ಎರಡನೇ ಮಗಳ ಜೊತೆ ಮದುವೆ ಮಾಡಿದ್ದಾರೆ. ಹೀಗೆ ರಾಜ್ಯ ಲಿಂಗಾಯತ ರಾಜಕಾರಣಿಗಳು ಹಾಗೂ ಲಿಂಗಾಯತ ಅಧಿಕಾರಿಗಳ ನಡುವೆ ಗೀವ್ ಅಂಡ್ ಟೇಕ್ ಸಂಬಂಧ ಗಟ್ಟಿಯಾಗುತ್ತಾ ಹೊಸದೊಂದು ಸಮೀಕರಣ ಕಾಣಿಸಿಕೊಳ್ಳುತ್ತಿದೆ. ಹಾಗೆ ನೋಡಿದರೆ ಯಡ್ಡಿಯ ಲಿಂಗಾಯತ ಗ್ಯಾಂಗ್‌ಗೆ ಕರ್ನಾಟಕದ ಎಲ್ಲಾ ಕಡೆ ಸಾಲಿಡ್ ಮನಾಪಲಿ ಇದೆಯಾದರೂ ಬೆಂಗಳೂರು ನಗರ ಪೂರ್ತಿಯಾಗಿ ಅವರ ಕೈಗೆ ಸಿಕ್ಕಿಲ್ಲ. ಈಗ ಬೆಂಗಳೂರು ನಗರವನ್ನು ಗೆದ್ದು ಲಿಂಗಾಯತ ಸಾಮ್ರಾಜ್ಯಕ್ಕೆ ಸೇರಿಸಲು ಯಡ್ಡಿಯೇ ಸೋಮಣ್ಣನನ್ನು ದಂಡನಾಯಕನನ್ನಾಗಿ ಅರ್ಥಾತ್ ಮಂತ್ರಿಯನ್ನಾಗಿಸಲು ನಿರ್ಧರಿಸಿದ್ದಾರೆ.

ಅಶೋಕ್ ಗಾಬರಿಯಾಗಿರುವುದು ಇದೇ ಕಾರಣಕ್ಕೆ. ಈ ಅಶೋಕ್ ಎಂಥಾ ಕಿಲಾಡಿಯೆಂದರೆ ಸೋಮಣ್ಣನ ಬಗ್ಗೆ ತನಗಿರುವ ವಿರೋಧವನ್ನು ಪಕ್ಷದ ವೇದಿಕೆಯಲ್ಲಿ ತೋರಿಸಿಕೊಂಡಿಲ್ಲ. ಅದರ ಬದಲಾಗಿ ಸಿಟಿ ಬಿಜೆಪಿ ಶಾಸಕರನ್ನೇ ಛೂ ಬಿಡುತ್ತಿದ್ದಾರೆ. ಮಲ್ಲೇಶ್ವರದ ಬಿಜೆಪಿ ಶಾಸಕ ಡಾ. ಅಶ್ವಥ್‌ನಾರಾಯಣ್, ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಕೃಷ್ಣಪ್ಪ, ಯಲಹಂಕದ ವಿಶ್ವನಾಥ್, ಉತ್ತರಹಳ್ಳಿಯ ಶಾಸಕ ಎಂ. ಶ್ರೀನಿವಾಸ್ ಇನ್ನೂ ಮುಂತಾದ ಹತ್ತು ಶಾಸಕರು 'ಸೋಮಣ್ಣ ಮಂತ್ರಿಯಾಗ ಕೂಡದೆಂದು' ಗಲಾಟೆ ಶುರು ಮಾಡಿದ್ದಾರೆ. ಬೆಂಗಳೂರಿನ ಬಿಜೆಪಿ ಶಾಸಕರ ಪೈಕಿ ಜಯನಗರದ ವಿಜಯಕುಮಾರ್ ಹಾಗೂ



ಮೂರು ಕೋಟಿ ಟಿಪ್ಸಂತೆ!!

ಬೇಲೇಕೇರಿ ಬಂದರಿನಲ್ಲಿ ಮೂರು ಎಕ್ಸ್‌ಪೋರ್ಟ್ ...ಪನಿಗಳು ರಫ್ತು ವ್ಯವಹಾರ ಏಕಸಾಮ್ಯಕ್ಕೆ ಒಳಪಡಿಸಿ ...ಂಡು ನಖರಾ ಮಾಡುತ್ತಿವೆ. ಇವರಿಗೆ ಆಳುವ ಖೂಳರು ...ನ್ನಿಗೆ ನಿಂತು ಹುರಿದುಂಬಿಸುತ್ತಿದ್ದಾರೆ. ಮಲ್ಲಿಕಾರ್ಜುನ ...ಪ್ಪಿಂಗ್ ಕಂಪನಿಯ ಧಣಿ ಸತೀಶ್ ಸೈಲ್, ಗುಜರಾತಿನ ...ದಾನಿ ಕಂಪನಿ ಮತ್ತು ಗೋವಾದ ಸಾಲ್ಗಾಂಕರ್ ಕಂಪನಿ ...004 ರಿಂದಲೇ ಬಂದರು-ಕಂದಾಯ ಜಾಗ ಅತಿಕ್ರಮಿಸಿ-...ಮುದ್ರವನ್ನೇ ಹುಗಿದು ದೊಡ್ಡ-ದೊಡ್ಡ ಜಟ್ಟಿ ನಿರ್ಮಿಸಿ ...ಂಡು ಕೋಟ್ಯಂತರ ರೂ. ರಫ್ತು ದಂಧೆ ನಡೆಸುತ್ತಿವೆ.

ಈ ಲೂಟಿಕೋರರಿಗೆ ನೀಡಿರುವ ಲೀಸ್ ಇದೇ ...ಲೈನಲ್ಲಿ ಮುಗಿಯಲಿದೆ. ಪರಿಸರ, ಸಿಆರ್‌ಝಡ್ ...ತ್ತು ಮಾನವ ಹಕ್ಕುಗಳ ಕಾನೂನು-ಕಟ್ಟಳೆಗಳಿಗೆ ಕೇರ್ ...ಮಾಡದೆ ಬೇಲೇಕೇರಿ ಬಂದರಿನಲ್ಲಿ ದಾದಾಗಿರಿ ...ಡೆಸುತ್ತಿರುವ ಈ ಮೂರು ಕಂಪನಿಗಳಿಗೆ ಮತ್ತೆ ಪರವಾನಗಿ ...ಡಕೊಡದೆಂಬುದು ಪರಿಸರವಾದಿಗಳು ಮತ್ತು ಸ್ಥಳೀಯ ...ಮೀನುಗಾರರ ಬೇಡಿಕೆ. ಸರ್ಕಾರಿ ಜಾಗ ಅತಿಕ್ರಮಿಸಿ-...ಮೀನುಗಾರರನ್ನು ಬೀದಿಪಾಲು ಮಾಡಿದಾಗಲೇ ಈ ...ಕಂಪನಿಗಳ ಪರವಾನಗಿಗಳನ್ನು ಸರ್ಕಾರಿ ಪ್ರಭೃತಿಗಳು ರದ್ದು ...ಮಾಡಬೇಕಿತ್ತು. ಆದರೆ ಕುರುಡು ಕಾಂಚಾಣದ ಕುಣಿತದ ...ರ್ಭಟಕ್ಕೆ ಕಾನೂನು ಕಸದಬುಟ್ಟಿ ಸೇರಿಬಿಟ್ಟದೆ.


ಈಗಲೂ ಪರಿಸರ-ಬಂದರು ಖಾತೆ ಹೊಂದಿರುವ ...ಮಂತ್ರಿ ಪಾಲೇಮಾರ್ ಮನಸ್ಸು ಮಾಡಿದರೆ ಈ ಜನಪೀಡಕ ...ಕಂಪನಿಗಳನ್ನು ಬೇಲೇಕೇರಿಯಿಂದ ಹೊರಹಾಕುವುದು ...ಕಷ್ಟವೇನಲ್ಲ. ಪರಿಸರ-ಬಂದರು ನಿಯಮ ಉಲ್ಲಂಘಿಸಿರುವ ...ಈ ಕಂಪನಿಗಳ ಲೀಸ್ ಮುಂದುವರಿಸಬಾರದೆಂದು ರಾಜ್ಯ ...ಸರ್ಕಾರ ಕೇಂದ್ರಕ್ಕೆ ಮನವಿ ಮಾಡಿದರೆ ಸಾಕು, ಲೀಸ್ ...ಕ್ಯಾನ್ಸಲ್ ಆಗುತ್ತದೆ. ಈ ಕಾರಣಕ್ಕೇ ಈಗ ಈ ಮೂರೂ ...ಕಂಪನಿಯ ಕಿಂಗ್‌ಗಳು ಪಾಲೇಮಾರ್‌ರ ಓಲೈಸಲು ಅವರ ...ಬಂದಿಬಿದ್ದಿವೆ. ಮೊನ್ನೆ ಬೇಲೇಕೇರಿ ಬಂದರಿಗೆ ಪಾಲೇ...ಮಾರ್ ಬಂದಾಗ ಈ ಕಂಪನಿ ಖದೀಮರೇ ಎಲ್ಲ ...ಮೇಜುವಾನಿ ನೋಡಿಕೊಂಡಿದ್ದರು.

ಜತೆಗೆ ಲೀಸ್‌ಗೆ ಕಿರಿಕಿರಿ ಮಾಡಬಾರದೆಂದು ತಲಾ ...ಒಂದು ಕೋಟಿಯಂತೆ ಮೂರು ಕೋಟಿ ಮಂತ್ರಿ ...ಪಾಲೇಮಾರ್‌ಗೆ ಕೊಟ್ಟು ಕಳಿಸಿದ್ದಾರಂತೆ. ಹೀಗಾಗಿಯೇ ...ಪರಿಸರ ಖಾತೆಯನ್ನೂ ಹೊಂದಿರುವ ಈ ಮೂರ್ಖ ...ಮಂತ್ರಿ ಪಾಲೇಮಾರ್ ಲೀಸ್ ಮುಂದುವರಿಕೆ ನಿಲ್ಲಿಸುವ ...ಅಧಿಕಾರ ತನಗಿಲ್ಲವೆಂದು ಬಹಿರಂಗವಾಗಿಯೇ ಹೇಳಿ ...ಹೋಗಿದ್ದಾರೆ. ಅಲ್ಲಿಗೆ ಮೂರು ಪಾಪಿ ಕಂಪನಿಗಳ ...ಹಿತಕಾಯುವ ಮುನ್ಸೂಚನೆ ಮಂತ್ರಿಜೀ ಕೊಟ್ಟದ್ದಾರೆ. ...ಟ್ಟುನಿಟ್ಟಿನ ಸಿಆರ್‌ಝಡ್ ಕಾನೂನನ್ನೇ ಕೇರ್ ಮಾಡದ ...ಮಲ್ಲಿಕಾರ್ಜುನ, ಸಾಲ್ಗಾಂವ್ಕರ್, ಅದಾನಿ ಕಂಪನಿ ಖಳರಿಗೆ ...ಸೂದ್ಮಣಿ ಪಾಲೇಮಾರ್ ವೀಕ್‌ನೆಸ್ ಕಂಡುಹಿಡಿದು ...ಳಗಿಸುವುದು ಕಷ್ಟವೇ?

ಒಟ್ಟನಲ್ಲಿ ಬೇಲೇಕೇರಿ ಬೆಸ್ತರಿಗೆ ಬದುಕಿಲ್ಲ!

...ಬೊಮ್ಮನಹಳ್ಳಿಯ ನಂದೀಶ್ ರೆಡ್ಡಿ ಮಾತ್ರ ಸೋಮಣ್ಣನ ...ಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಸೋಮಣ್ಣನ ಬಗ್ಗೆ ಪಾರ್ಟಿ ...ನಾಯಕರು (ಯಡ್ಡಿ) ಯಾವ ನಿರ್ಧಾರ ಮಾಡುತ್ತಾರೋ ...ದು ನಮಗೂ ಒಪ್ಪಿಗೆ ಎನ್ನುತ್ತಿದ್ದಾರೆ.

ಅಶೋಕ್ ಜೊತೆಯಿರುವ ಒಕ್ಕಲಿಗ ಶಾಸಕರ ಸಿಟ್ಟಿಗೆ ...ನ್ನೂ ಕೆಲವು ಕಾರಣಗಳಿವೆ. ಈ ಸೋಮಣ್ಣ ವಿಧಾನಸಭಾ ...ಚುನಾವಣೆಯಲ್ಲಿ ಸೋತಿದ್ದ ಕ್ಯಾಂಡಿಡೇಟು. ವಿಧಾನ ...ಪರಿಷತ್ತಿಗೆ ನಾಮಕರಣ ಮಾಡಲು ರಾಜ್ಯಪಾಲರೇ 'ನೋ' ...ಎಂದಿದ್ದ ತಿರಸ್ಕೃತ ಮನುಷ್ಯ. ಈಗ ಕೇವಲ ಯಡ್ಡಿ ...ಬಲದಿಂದ ಎಂಎಲ್‌ಸಿಯಾಗಿದ್ದಾರೆ. ಅಂಥವರಿಗೆ ...ಮಂತ್ರಿಗಿರಿ ಯಾಕೆ ಕೊಡಬೇಕು? ಎಂಬುದೇ ಅವರ ...ಪ್ರಶ್ನೆ. ಅಷ್ಟೇ ಅಲ್ಲ, ಬೆಂಗಳೂರಿನಿಂದ ಕಟ್ಟಾ ಹಾಗೂ ...ಅಶೋಕ್ ಇಬ್ಬರ ನಂತರ ಮೂರನೆಯ ಮಂತ್ರಿಗಿರಿ ...ಮಂಜೂರಾದರೆ ಅದು ಸೋಮಣ್ಣನಿಗ್ಯಾಕೆ ನಮಗೆ ...ಸಿಗಲಿ ಎಂಬ ಬಯಕೆಯೂ ಈ ಶಾಸಕರಿಗಿದೆ. ಇವರ ...ಪೈಕಿ ಎಂ. ಶ್ರೀನಿವಾಸ್ ಅತೀ ಹಿರಿಯ ಶಾಸಕ. ಒಮ್ಮೆ ...ಸಂಸದರಾಗಿದ್ದವರು. ಅದೇ ರೀತಿ ಆನೇಕಲ್‌ನ ನಾರಾಯಣ ...ಸ್ವಾಮಿಯೂ ಅನೇಕ ಬಾರಿ ಗೆದ್ದು ಬಂದಿರುವಾತ. ಹೀಗೆ ...ಇವರೆಲ್ಲಾ ಸೀನಿಯರ್‌ಗಳಿರುವಾಗ ನಿನ್ನೆ ಮೊನ್ನೆ ಬಿಜೆಪಿಗೆ ...ಸೇರಿರುವ 'ವಲಸೆ ರಾಜಕಾರಣಿ' ಸೋಮಣ್ಣನಿಗೆ ಮಂತ್ರಿ ...ಪಟ್ಟ ಯಾಕೆ? ಅಂತಾ ಇವರ ಕೋಪ. ಯಡ್ಡಿಗೆ ಈ ...ಕಾಟ ಕಂಟ್ರೋಲ್ ಮಾಡುವುದು ಅಸಾಧ್ಯವಾಗಿದೆ. ...ಕಷ್ಟಪಟ್ಟು ಎಂಎಲ್‌ಸಿಯಾಗಿರುವ ಸೋಮಣ್ಣ ...ಕಷ್ಟಪಟ್ಟರೂ ಮಂತ್ರಿಯಾಗುವುದು ಅನಿಷ್ಟ ಎಂಬ ...ಬಹುಪಾಲು ಬಿಜೆಪಿ ಶಾಸಕರದ್ದು. ಈ ಕಷ್ಟ, ಇಷ್ಟ, ಅನಿಷ್ಟಗಳ ...ಮಧ್ಯೆ ಭ್ರಷ್ಟ ಸೋಮಣ್ಣನ ಟೆನ್‌ಷನ್ ಜಾಸ್ತಿಯಾಗುತ್ತಿದೆ. ●



'ಕರ್ನಾಟಕ ರತ್ನ'ಕ್ಕೇ ಕಳಂಕ ಈ ದೇಜಗೌ

ಶಶಿಧರ ಪ್ರಸಾದ್ ವಿ.ಸಿ. ಆಗಿದ್ದಾಗ ಮಾಡಿದ ಎಡವಟ್ಟುಗಳನ್ನು ನಮ್ಮ 'ಪತ್ರಿಕೆ' ಆಗಲೇ ಸಾಕಷ್ಟು ಬಾರಿ ಬಹಿರಂಗ ಮಾಡಿದೆ. ಆತ ನಿವೃತ್ತಿಯಾಗುವ ಮೊದಲು ಮಾಡಿ ಹೋದ ಅಪರಾತಪರಾಗಳನ್ನು ಜನವರಿ 16, 2008 ರ ಸಂಚಿಕೆಯಲ್ಲಿ ವಿವರವಾಗಿ ಬರೆದಿದ್ದೆವು. ಮಗನ ಈ ಕರ್ಮಕಾಂಡ ಕುರಿತು ಅಪ್ಪ ದೇಜಗೌ ಏನು ಹೇಳುತ್ತಾರೆ ಎಂದೂ ಪ್ರಶ್ನಿಸಿದ್ದೆವು. ಇವತ್ತಿಗೂ ದೇಜಗೌ ಮಗನನ್ನು ಸಮರ್ಥಿಸಿಕೊಳ್ಳುತ್ತಲೇ ಬಂದರು. ತಮ್ಮ ಲಾಬಿಯಿಂದಾಗಿ 'ಕರ್ನಾಟಕ ರತ್ನ'ವೂ ಆದರು.


ಈಗ ಮಗನ 'ಮಹಿಮೆ' ಕ್ರಿಮಿನಲ್ ಕೇಸ್ ಹಂತ ತಲುಪಿದೆ. ಈಗಲೂ ದೇಜಗೌ ಮೌನದಲ್ಲೇ ಇದ್ದಾರೆ. ಆದರೆ ತೆರೆಮರೆಯಲ್ಲಿ ಮಗನನ್ನು ರಕ್ಷಿಸಲು ಒಕ್ಕಲಿಗರ ಲಾಬಿಯನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಕ್ರಿಮಿನಲ್ ಮೊಕದ್ದಮೆಯನ್ನು ಹಿಂದೆ ಪಡೆಯುವಂತೆ ದೇವೇಗೌಡರ ಮೂಲಕ ರಾಜ್ಯಪಾಲರ ಮೇಲೆ ಇನ್‌ಫ್ಲೂಯೆನ್ಸ್ ಮಾಡಿದರು ಎಂಬ ವದಂತಿಯೂ ಇದೆ. ಮೈಸೂರಿನ ತಮ್ಮ 'ಬೆಂಬಲಿಗರ' ನೆರವಿನಿಂದ ಶಶಿಧರ ಪ್ರಸಾದ್ ಪರ ಪ್ರತಿಭಟನೆಗಳನ್ನು ಆಯೋಜಿಸುತ್ತಿದ್ದಾರೆ 'ಕಳಂಕ ರತ್ನ' ದೇಜಗೌ. ಹೀಗೆ ಶಶಿಧರ ಪ್ರಸಾದ್ ಎಂಬ ದಗಲ್ಬಾಜಿ ಪರವಾಗಿ ಮೈಸೂರಿನ ಕೆಲ ಸಾಹಿತಿಗಳೂ ನಿಂತಿರುವುದು ನಾಚಿಕೆಗೇಡಿನ ವಿಷಯ. ಇವರಲ್ಲಿ ಲತಾ ರಾಜಶೇಖರ್, ಮಳಲಿ ವಸಂತಕುಮಾರ್, ಕೆ.ಸಿ.ಎನ್. ರಾಜಾ, ಸಿಪಿಕೆ, ಅಕ್ಬರ್ ಅಲಿಯಂತಹ 'ಸಮಾಜಮುಖಿ' ಸಾಹಿತಿಗಳೂ ಇದ್ದಾರಂತೆ! ಅಂದಂತೆ, ಶಶಿಧರ ಪ್ರಸಾದನ ವಿರುದ್ಧ ಏನೂ ಮಾಡಲಾಗಲ್ಲ ಎಂಬ ಸುದ್ದಿಯನ್ನು ಈ 'ಬೆಂಬಲಿಗರು' ಹಬ್ಬಿಸಿದ್ದರು. ಮುಖ್ಯ ಕಾರ್ಯದರ್ಶಿಯವರು ಎಲ್ಲ ದಾಖಲೆಗಳನ್ನು ಕಳಿಸಿರಲಿಲ್ಲ ಎನ್ನುವುದೇ ಈ 'ಆಶಾಭಾವನೆ'ಗೆ ಕಾರಣವಾಗಿತ್ತು. ಇವತ್ತು (ಗುರುವಾರ) ಮೈಸೂರಿಗೆ ಶಶಿಧರ ಪ್ರಸಾದ್‌ನ ವಿರುದ್ಧ ಎಲ್ಲ ದಾಖಲೆಗಳೂ ಬಂದಿವೆ. ನಾಳೆ ಸಿಂಡಿಕೇಟ್ ಸಭೆ ನಡೆದು, ವಿವಿಪುರಂ ಠಾಣೆಗೆ ದೂರು ದಾಖಲಾಗಲಿದೆ. ಆದರೆ ಶಶಿಧರ ಪ್ರಸಾದ್‌ನನ್ನು ರಕ್ಷಿಸಲು ದೇಜಗೌ ಮಾತ್ರ ಹರಸಾಹಸ ಮಾಡುತ್ತಲೇ ಅವ್ರೆ!

ಸದ್ಯದಲ್ಲೇ ಸಾಯಿಬಾಬಾನ ವಿ.ವಿ.ಯೊಂದಕ್ಕೆ ವಿ.ಸಿ. ಆಗಲಿರುವ ಶಶಿಧರ ಪ್ರಸಾದ್‌ನನ್ನು ರಕ್ಷಿಸಲು ದೇಜಗೌ ಈ ಮಟ್ಟಕ್ಕಿಳಿಯಬೇಕೆ?

ಮೈಸೂರು: ಜೈಲು ಪಾಲಾಗಲಿದ್ದಾನೆ ವಿಶ್ರಾಂತ ವಿ.ಸಿ. ಶಶಿಧರ ಪ್ರಸಾದ್


ಮೈಸೂರು ವಿಶ್ವವಿದ್ಯಾಲಯವನ್ನು ಗಬ್ಬೆಬ್ಬಿಸಿ, ಕೋಟಿ ಕೋಟಿ ಕಬಳಿಸಿ, ಅಧ್ವಾನ ಮಾಡಿ ನಿವೃತ್ತನಾಗಿದ್ದ ಮಾಜಿ ವಿ.ಸಿ. ಶಶಿಧರ ಪ್ರಸಾದ್ ಸದ್ಯದಲ್ಲೇ ಜೈಲು ಪಾಲಾಗಲಿದ್ದಾನೆ.

ಸರ್ಕಾರ ಮತ್ತು ಯು.ಜಿ.ಸಿ. ನಿಯಮಗಳನ್ನು ಗಾಳಿಗೆ ತೂರಿ ಅಕ್ರಮವಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿದ್ದು ಈಗ ಸಾಬೀತಾಗಿದ್ದು, ಸರ್ಕಾರ ಶಶಿಧರ ಪ್ರಸಾದ್‌ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಮೈಸೂರು ವಿ.ವಿ.ಗೆ ಆದೇಶಿಸಿದೆ. ಶಶಿಧರ ಪ್ರಸಾದ್ ವಿ.ಸಿ. ಆಗಿದ್ದಾಗಲೇ 162 ಸಿಬ್ಬಂದಿಯ ಅಕ್ರಮ ನೇಮಕಾತಿಯ ಬಗ್ಗೆ ಸಾಕಷ್ಟು ಆರೋಪಗಳು ಕೇಳಿಬಂದಿದ್ದವು. ಆದರೆ ಅಪ್ಪ ದೇ. ಜವರೇಗೌಡರ ಪ್ರಭಾವದಿಂದ, ತನ್ನ ಅಕ್ರಮ ದುಡ್ಡಿನ ಬಲದಿಂದ ಎಲ್ಲವನ್ನೂ ಸಂಭಾಳಿಸಿದ್ದ ಶಶಿಧರ ಪ್ರಸಾದ್ 2008ರ ಆರಂಭದಲ್ಲಿ ಸೇಫಾಗಿ ರಿಟೈರ್ಡ್ ಆಗಿ ಮನೆ ಸೇರಿದ್ದ. ಆದರೆ ಈತ ಮಾಡಿಟ್ಟ ಹಗರಣಗಳು ಈತನ ಬೆನ್ನು ಬಿಡಲೇ ಇಲ್ಲ. ಕಳೆದ ವರ್ಷ ವಿಧಾನಮಂಡಲದಲ್ಲೂ ಈತನ ಭ್ರಷ್ಟಾಚಾರ, ಅಕ್ರಮ ನೇಮಕಾತಿಗಳ ವಿಷಯ ಪ್ರಸ್ತಾಪವಾಗಿ ಗದ್ದಲವೆದ್ದಾಗ, ಯಡ್ಡಿ ಸರ್ಕಾರ ಅನಿವಾರ್ಯವಾಗಿ ತನಿಖೆಗೆ ಆದೇಶ ನೀಡಿತ್ತು. ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಎಚ್. ರಂಗವಿಠಲಾಚಾರ್ ನೇತೃತ್ವದ ಏಕಸದಸ್ಯ ಸಮಿತಿ ತನಿಖೆ ನಡೆಸಿ, ಕಳೆದ ವರ್ಷದ ಸೆಪ್ಟೆಂಬರ್‌ನಲ್ಲೇ ಶಶಿಧರ ಪ್ರಸಾದ್‌ನ ಅಕ್ರಮ ನೇಮಕಾತಿಯನ್ನು ಸಾಬೀತುಮಾಡಿತ್ತು. ಇಲ್ಲಿವರೆಗೂ ಸುಮ್ಮನಿದ್ದ ಯಡ್ಡಿ ಸರ್ಕಾರ ಕೊನೆಗೂ ಶಶಿಧರ ಪ್ರಸಾದ್‌ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವ ನಿರ್ಧಾರ ಮಾಡಿದೆ.



ಪ್ರಾ.ಶ.ಶಿಧರ ಪ್ರಸಾದ್

2006-07 ರಲ್ಲಿ ನಡೆದ ಪ್ರೊಫೆಸರ್, ರೀಡರ್ ಮತ್ತು



ಉಪನ್ಯಾಸಕ ನೇಮಕಾತಿಗಳಲ್ಲಿ ಈ ಭ್ರಷ್ಟ ಶಶಿಧರ ಪ್ರಸಾದ್ ಸರ್ಕಾರದ ಮೀಸಲಾತಿ ನಿಯಮಗಳನ್ನು ಮತ್ತು ಯುಜಿಸಿ ನಿಯಮಾವಳಿಗಳನ್ನು ಗಾಳಿಗೆ ತೂರಿದ್ದನಲ್ಲದೇ, ಸುಪ್ರೀಂಕೋರ್ಟ್ ಮತ್ತು ರಾಜ್ಯ ಸರ್ಕಾರದ ಆದೇಶಗಳನ್ನು ಕಾಲಕಸ ಮಾಡಿ, ಕೆಲವು ಬೋಧಕೇತರ ಹುದ್ದೆಗಳನ್ನು ಕಾಯಂಗೊಳಿಸಿದ್ದ. ಇದೆಲ್ಲದರಲ್ಲಿ ಕೋಟಿ ಕೋಟಿ ಕಮಾಯಿ ಮಾಡಿದ್ದ.

ಸದ್ಯಕ್ಕೆ ಈ ಅಕ್ರಮ ನೇಮಕಾತಿ ಹಗರಣದ ತನಿಖೆಯಾಗಿದೆಯಷ್ಟೇ. ಆದರೆ ಈ ಶಶಿಧರ ಪ್ರಸಾದ್ ವಿ.ಸಿ.ಯಾಗಿದ್ದ ಅವಧಿಯುದ್ದಕ್ಕೂ ಇಂತಹ ಹತ್ತಾರು ಹಗರಣಗಳು ನಡೆದಿದ್ದು ನಮ್ಮ ಪತ್ರಿಕೆ ಅವನ್ನು ಬಯಲು ಮಾಡುತ್ತಲೇ ಬಂದಿತ್ತು. ಶಶಿಧರ ಪ್ರಸಾದ್ ವಿ.ಸಿ. ಹುದ್ದೆಯಿಂದ ನಿವೃತ್ತನಾದ ದಿನವೇ ಮಹಾರಾಷ್ಟ್ರದ ನಾಗಪುರದಲ್ಲಿ ಮ್ಯಾಗ್ನಸ್ ಸ್ಕೂಲ್ ಆಫ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಎಂಬ ನಕಲಿ ಸಂಸ್ಥೆಯ ಮೇಲೆ ಅಲ್ಲಿನ ಪೊಲೀಸರು ದಾಳಿ ಮಾಡಿ ಶಾಲಿನಿ-ಶುಬೇಂದು ದೇ ಎಂಬುವವರನ್ನು ಅರೆಸ್ಟ್ ಮಾಡಿದ್ದರು. ಈ ಮ್ಯಾಗ್ನಸ್ ಕಾಲೇಜಿನವರು ಮೈಸೂರು ವಿ.ವಿ.ಯಿಂದ ನೋಂದಾಯಿತ ಕಾಲೇಜೆಂದು, ಎಂ.ಬಿ.ಎ. ಡಿಗ್ರಿ ಕೊಡಿಸುವುದಾಗಿ ಒಂದೂವರೆ ಕೋಟಿ ರೂ.ಗಳನ್ನು ವಸೂಲಿ ಮಾಡಿದ್ದರು. ಶಶಿಧರ ಪ್ರಸಾದ್‌ನ ತುಘಲಕ್ ದರ್ಬಾರಿನಲ್ಲೇ ಕರ್ನಾಟಕ ವಿ.ವಿ. ಕಾಯ್ದೆಯ ಸೆಕ್ಷನ್ 66(2)ರ ನಿಯಮಗಳನ್ನು ಉಲ್ಲಂಘಿಸಿ, ಮ್ಯಾಗ್ನಸ್‌ಗೆ ದೂರ ಶಿಕ್ಷಣ ಕೇಂದ್ರದ ಸ್ಥಾನಮಾನ ನೀಡಲಾಗಿತ್ತು.

ಓರಿಯಂಟಲ್ ಡೀಲ್

ಶಶಿಧರ ಪ್ರಸಾದ್ ಮೇಲೆ ಕ್ರಮಕ್ಕೆ ಮುಂದಾಗಲು ಇಷ್ಟು ಸುದೀರ್ಘ ಹಿಡಿದದ್ದು ಏಕೆ ಎಂಬ ಪ್ರಶ್ನೆಗೆ ಹಲವಾರು ಉತ್ತರಗಳು ಎದುರಾಗುತ್ತವೆ. ಒಂದು, 'ಓರಾಟಗಾರ' ಸಾಹಿತಿ, ಅಪ್ಪ ದೇಜಗೌರ ಲಾಬಿ. ಇನ್ನೊಂದು ಶಶಿಧರ ಪ್ರಸಾದ್‌ಗೆ ಇದ್ದಿರಬಹುದಾದ ಅನಂತ ಕುಮಾರ್ ಲಿಂಕು. ಈ ಸಂಶಯಕ್ಕೆ ಕಾರಣವೂ ಇದೆ. ಶಶಿಧರ ಪ್ರಸಾದ್ ವಿ.ಸಿ.ಯಾಗಿದ್ದಾಗ ಮೈಸೂರು ವಿ.ವಿ.ಯ ಆಧೀನ ಸಂಸ್ಥೆ ಓರಿಯಂಟಲ್ ರಿಸರ್ಚ್ ಸೆಂಟರಿನ ಹಳೇ ಹಸ್ತಪ್ರತಿ, ಪುಸ್ತಕ ಇನ್ನಿತರ ಅಮೂಲ್ಯ ದಾಖಲೆಗಳನ್ನು ಸಂರಕ್ಷಿಸಲು, ಅವನ್ನೆಲ್ಲ ಡಿಜಿಟಲೈಸ್ ಮಾಡುವ ಕೆಲಸವನ್ನು ಮಹಾಭಾರತ ಸಂಶೋಧನಾ ಪ್ರತಿಷ್ಠಾನಕ್ಕೆ ಇದೇ ಶಶಿಧರ ಪ್ರಸಾದ್ ನೀಡಿದ್ದ. ಇದಕ್ಕೆ ಸಿಂಡಿಕೇಟಿನ ಅನುಮತಿ ಕೂಡಾ ಪಡೆದಿರಲಿಲ್ಲ. ಈ ಸಂಸ್ಥೆ ಬಿಜೆಪಿ ನಾಯಕ ಮುರಳಿ ಮನೋಹರ್ ಜೋಷಿ ಮತ್ತು ಸಂಸದ ಅನಂತಕುಮಾರರ ಪತ್ನಿ ತೇಜಸ್ವಿನಿಯವರಿಗೆ ಸೇರಿದ್ದು ಎನ್ನಲಾಗಿದೆ. ಈ ಸಂಸ್ಥೆಯ ಯೋಗ್ಯತೆ ಪರಿಶೀಲಿಸದೇ ಅಮೂಲ್ಯ ದಾಖಲೆಗಳನ್ನು ಈ ಭೂಪ ಹಸ್ತಾಂತರ ಮಾಡಿದ್ದ!

ಒಂದಲ್ಲ, ಎರಡಲ್ಲ!

ಬರೆಯುತ್ತ ಹೋದರೆ, ಈತ ಮಾಡಿದ ಹಗರಣಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. 150 ಕ್ಕೂ ಹೆಚ್ಚು ಹಂಗಾಮಿ ನೌಕರರನ್ನು ದುಡ್ಡು ತಿಂದು ಸಕ್ರಮ ಸೇವೆಗೆ ತಂದಿದ್ದೂ ಇದೇ ಶಶಿಧರ ಪ್ರಸಾದನೇ. ವಿ.ವಿ.ಯ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ, ಯಾವುದೇ ಅರ್ಜಿ ಕರೆಯದೇ, ಪತ್ರಿಕಾ ಜಾಹೀರಾತು ನೀಡದೇ, ಕೊನೆಗೆ ಮೀಸಲಾತಿ ನಿಯಮಗಳನ್ನೂ ಪಾಲಿಸದೇ 150 ನೌಕರರ ಕೆಲಸವನ್ನು ಅಕ್ರಮವಾಗಿ ಸಕ್ರಮಗೊಳಿಸಿದ್ದ. ಇದರಲ್ಲಿ ಲಕ್ಷಾಂತರ ರೂಪಾಯಿಗಳ ಡೀಲ್ ಕುದುರಿಸಲಾಗಿತ್ತು. ದುಡ್ಡಿರುವ ನೌಕರರಿಂದ ತಲಾ ಒಂದು ಲಕ್ಷ ಕಿತ್ತಿದ್ದರೆ, ದುಡ್ಡಿಲ್ಲದವರಿಗೆ ಬ್ಯಾಂಕ್ ಸಾಲದ ವ್ಯವಸ್ಥೆಯನ್ನು ಮಾಡಿ ಲಕ್ಷ ಲಕ್ಷ ಕಿತ್ತಿದ್ದ. ಇದಕ್ಕಾಗಿ ವಿ.ವಿ.ಯಿಂದಲೇ ಬ್ಯಾಂಕ್ ಗ್ಯಾರಂಟಿ ಕೊಡಿಸಿ ಕ್ರಿಮಿನಲ್ ಕೆಲಸ ಮಾಡಿದ್ದ. 10 ಕೋಟಿಗೂ ಹೆಚ್ಚು ಮೊತ್ತದ ಸಿವಿಲ್ ಕಾಮಗಾರಿ ಗುತ್ತಿಗೆಯನ್ನು ಒಬ್ಬನೇ ಗುತ್ತಿಗೆದಾರನಿಗೆ ಕೊಟ್ಟು ಸಾಕಷ್ಟು ಕಮಿಷನ್ ನುಂಗಿದ ಆರೋಪವೂ ಈತನ ಮೇಲಿದೆ. ತನ್ನ ಅಕ್ರಮ ವ್ಯವಹಾರಗಳಿಗೆ ದಲಿತರ ಬೆಂಬಲವೂ ಸಿಗಲಿ ಎಂದು ಪ್ಲಾನ್ ಹಾಕಿ, ರಾಮಸ್ವಾಮಿ ಎಂಬ ಸ್ಟೂಡೆಂಟ್ ವೆಲ್‌ಫೇರ್ ಆಫೀಸರ್‌ನ ಮೊಬೈಲು, ಲ್ಯಾಂಡ್‌ಫೋನ್‌ಗಳ ಬಿಲ್ ಅನ್ನು ವಿ.ವಿ.ಯೇ ಭರಿಸುವಂತೆ ಮಾಡಿಟ್ಟು ಹೋಗಿದ್ದ. ತಾನು ಕಾರು ನುಗ್ಗಿಸಿ ಐದು ಕುರಿಗಳನ್ನು ಕೊಂದದ್ದಕ್ಕೆ ವಿವಿಯಿಂದಲೇ 13 ಸಾವಿರ ರೂಪಾಯಿ ಪರಿಹಾರವನ್ನು ನೀಡಿ ಚಿಲ್ಲರೆತನ ಮೆರೆದಿದ್ದ.

ಮೈಸೂರು ವಿ.ವಿ. ಕ್ಯಾಂಪಸ್ಸಿನ 100 ಎಕರೆ ಜಾಗವನ್ನು ಟಾಟಾ ಸಂಸ್ಥೆಗೂ, ಐದು ಎಕರೆ ಜಾಗವನ್ನು ಕರ್ನಾಟಕ ಸಹಕಾರ ಪಟ್ಟಣ ಬ್ಯಾಂಕುಗಳ ಮಂಡಳಿಗೂ ನೀಡಲು ರಹದಾರಿ ನಿರ್ಮಿಸಿ ಹೋಗಿದ್ದ.

ಹೀಗೆ ತನ್ನ ಅವಧಿಯುದ್ದಕ್ಕೂ ಭ್ರಷ್ಟಾಚಾರವೆಸಗಿದ ಶಶಿಧರ ಪ್ರಸಾದ್ ಸದ್ಯವಾದರೂ ಸಿಕ್ಕಿಬಿದ್ದಿದ್ದಾನೆ. ಸಂಪೂರ್ಣ ತನಿಖೆ ನಡೆದರೆ ಈತನ ಎಲ್ಲ ಅಕ್ರಮ ಕೆಲಸಗಳೂ ಬಯಲಾಗಬಹುದು. ಒಟ್ಟಿನಲ್ಲಿ ಶಶಿಧರ ಪ್ರಸಾದ್ ಜೈಲುಪಾಲಾಗುವ ಕಾಲ ಬಂದಿದೆ. ಮಗನನ್ನು ಉಳಿಸಲು ಆಮರಣ ಉಪವಾಸ ಕೂಡುವುದೊಂದೇ ದೇಜಗೌಗಿರುವ ಏಕೈಕ ಹಾದಿಯೇನೋ?

● ಮಲ್ಲನಗೌಡರ್

ಕ್ರಿಮಿನಲ್ ಪ್ರಕರಣ!

ಹಾಗೆ ನೋಡಿದರೆ, 1997 ರ ಆಗಸ್ಟ್‌ನಲ್ಲೇ ಶಶಿಧರ ಪ್ರಸಾದ್ ಮೈಸೂರು ವಿ.ವಿ.ಯ ವಿ.ಸಿ.ಯಾಗಿ ನೇಮಕಗೊಂಡಿದ್ದ. ಒಂದು ದಿನದಲ್ಲಿ ಆ ನೇಮಕ ರದ್ದಾಗಿತ್ತು. ಈತನ ಮೇಲೆ ಕ್ರಿಮಿನಲ್ ಪ್ರಕರಣವೊಂದು ಇದ್ದುದು ತಿಳಿದ ಮೇಲೆ ಅಂದಿನ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಈತನನ್ನು ವಿ.ಸಿ. ಪಟ್ಟದಿಂದ ಕೆಳಗಿಳಿಸಿದ್ದರು. ಆದರೆ ಎಂಟು ವರ್ಷಗಳ ಬಳಿಕ ತನ್ನ ಒಕ್ಕಲಿಗ ಜಾತಿಯ ಪ್ರಭಾವದಿಂದ ಈ ಭೂಪ ವಿ.ಸಿ. ಆಗೇಬಿಟ್ಟ. ಹಗರಣಗಳನ್ನು ಸೃಷ್ಟಿಸಿ ದಾಖಲೆಯನ್ನೂ ಬರೆದುಬಿಟ್ಟ.

ನಕ್ಸಲ್ ಚಂದ್ರು ಗೊರಬಾಳ್ ಕತೆ

ಈಗ ಹೊರಬೀಳುತ್ತಿರುವ ಸುದ್ದಿಗಳನ್ನೇ ಆಧರಿಸಿ ಹೇಳಬಹುದಾದರೆ ಗೊರಬಾಳ್ ಮಲೆನಾಡಿನ ಕಾಡಿನೊಳಗಿನ ನಕ್ಸಲರ ಚಟುವಟಿಕೆಗಳಲ್ಲಿ ನೇರವಾಗಿ ಭಾಗಿಯಾದಂತಿಲ್ಲ. ಬಹುಶಃ ನಗರ ಪ್ರದೇಶಗಳಲ್ಲಷ್ಟೇ ಈತ ಸಂಘಟನೆಯ ಚಟುವಟಿಕೆ ನಡೆಸುತ್ತಿರಬಹುದು. ಇವರಿಗೆ ಆಂಧ್ರ ನಕ್ಸಲರೊಂದಿಗೂ ಇರುವ ನಂಟಿನ ಸಾಧ್ಯತೆಗಳನ್ನು ಮೆಹಬೂಬ್ ನಗರ ಜಿಲ್ಲೆಯಲ್ಲಾದ ಅವರ ಬಂಧನವೇ ಹೇಳುತ್ತಿದೆ. ಅಪಾರ ಓದು, ಮಾರ್ಕ್ಸಿಸ್ಟ್ ಸಿದ್ಧಾಂತದ ವಿಶ್ಲೇಷಣೆಗಳನ್ನೆಲ್ಲಾ ಮಾಡಬಲ್ಲವರಾಗಿದ್ದ ಗೊರಬಾಳ್‌ರನ್ನು ಒಂದು ಮರುಭೂಮಿಗೆ ಕಳಿಸಿದರೂ ಅಲ್ಲೇ ಹಸಿರು ಚಿಗುರಿಸಬಲ್ಲ ಕೆಪಾಸಿಟಿ ಇದ್ದ ಸಂಘಟಕರಾಗಿದ್ದರು.


ಚಂದ್ರಶೇಖರ್

ಕರ್ನಾಟಕದ ನಕ್ಸಲ್ ಹೋರಾಟಕ್ಕೆ ಆಕ್ಸಿಜನ್‌ನಂತಿದ್ದ ಒಂದೊಂದೇ ತಂತುಗಳಿಗೆ ಕಳೆದ ಹಲವು ತಿಂಗಳಿಂದ ಪೆಟ್ಟು ಬೀಳುತ್ತಲೇ ಇದೆ.

ಈಗಿನದು ಕೇವಲ ಗಾಯ ಮಾತ್ರವಲ್ಲ, ಅದೇ ಗಾಯದ ಮೇಲಿನ ಬರೆ ಕೂಡಾ.

ಅದು ಚಂದ್ರಶೇಖರ ಗೊರಬಾಳ್ ಬಂಧನ! ನಲವತ್ತೆರಡು ವಯಸ್ಸಿನ, ತೆಳು ಶರೀರದ, ಸದಾ ಹಸನ್ಮುಖಿ ಗೊರಬಾಳ್ ಹೊರನೋಟಕ್ಕೆ ಉತ್ತರ ಕರ್ನಾಟಕದ ಸರ್ವೆ ಸಾಧಾರಣ ಯುವಕರಂತೆ ಕಾಣುತ್ತಾರೆ. ಆದರೆ ಆತ ಅನೇಕ ಸಾಧ್ಯತೆಗಳಿದ್ದ ವ್ಯಕ್ತಿ. ಅಪಾರ ವಿಲ್ ಪವರ್ ಹಾಗೂ ದೃಢ ನಿರ್ಧಾರವಿರುವ ಹೋರಾಟಗಾರ ಚಂದ್ರು. ನಕ್ಸಲರೊಂದಿಗೆ ಸೇರಿದ್ದರಾದರೂ ಭೂಗತರಾಗದೆ ಹಾಗೇ ಲೀಗಲ್ ಹೋರಾಟಗಳಲ್ಲಿ ಮುಂದುವರೆದಿದ್ದರೆ ಇವತ್ತಿನ ಹೈದರಾಬಾದ್ ಕರ್ನಾಟಕದ ಚಿತ್ರಣವೇ ಬೇರೆಯಾಗಿರುತ್ತಿತ್ತು. ಇದು ಖಂಡಿತಾ ಉತ್ಪ್ರೇಕ್ಷೆಯ ಮಾತಲ್ಲ. ಮೊದಲೇ ಹೇಳಿದಂತೆ ಹೊರನೋಟಕ್ಕೆ ಈತ ಸಾಮಾನ್ಯನಂತೆ ಕಂಡರೂ ಈತನೊಳಗೆ ಸದಾ ಕುದಿಕುದಿಯುವ ಬಂಡುಕೋರನಿದ್ದ. ಎಲ್ಲಾ ಅನ್ಯಾಯಗಳ ವಿರುದ್ಧ ದನಿ ಎತ್ತುತ್ತಾ, ನೂರಾರು ವಿದ್ಯಾರ್ಥಿ ಯುವಜನರನ್ನು ತನ್ನತ್ತ ಸೆಳೆಯಬಲ್ಲವರಾಗಿದ್ದ ಗೊರಬಾಳ್ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್ ಮುಂತಾದೆಡೆ ಒಂದು ದೊಡ್ಡ ಮಟ್ಟದ ಜನಾಂದೋಲನ ಕಟ್ಟಬಲ್ಲ ಸಾಮರ್ಥ್ಯ ಹೊಂದಿದ್ದರು. ಆದರೆ ಅವರಲ್ಲಿದ್ದ ಹೋರಾಟದ ಕೆಚ್ಚು ಹಾಗೂ ರಾಜಿಯಾಗದ ಮನೋಭಾವಗಳು ಅವರನ್ನು ನಕ್ಸಲ್ ಹೋರಾಟದತ್ತ ಸೆಳೆದಿದ್ದವು.

ಈಗೊಂದು ಆರೆಂಟು ವರ್ಷಗಳ ಹಿಂದೆ ರಾಯಚೂರು ತಾಲ್ಲೂಕಿನ ಸಿಂಧನೂರಿನಿಂದ ಏಕಾಏಕಿ ಕಣ್ಮರೆಯಾದ ಗೊರಬಾಳ್ ಈಗ ಆಂಧ್ರ ಪೊಲೀಸರಿಂದ ಅರೆಸ್ಟಾಗಿದ್ದಾರೆ. ಈ ಬಂಧನ ಕೇವಲ ನಕ್ಸಲರಿಗೆ ಮಾತ್ರವಲ್ಲ, ಕರ್ನಾಟಕದ ಜನಸಾಮಾನ್ಯರ ಆಶೋತ್ತರಗಳಿಗೂ ಬಿದ್ದ ದೊಡ್ಡ ಪೆಟ್ಟು. ಬಹುಶಃ ಸಾಕೇತ್ ಹತ್ಯೆಯ ನಂತರ ನಡೆದಿರುವ ನಕ್ಸಲರ ಬಂಧನಗಳ ಪೈಕಿ ಈಗ ಅತೀ ಹೆಚ್ಚು ಮೀಡಿಯಾ ಪ್ರಚಾರ ಪಡೆದಿರುವ, ಪೊಲೀಸರ ತಲೆ ಕೆಡಿಸಿರುವ ಬಂಧನವೆಂದರೆ ಅದು ಚಂದ್ರಶೇಖರ್ ಗೊರಬಾಳ್‌ರದ್ದು.

ಈತ ಎಲ್ಲಿಂದ ಬಂದರು? ನಕ್ಸಲನಾಗುವ ಮುನ್ನ ಏನು ಮಾಡುತ್ತಿದ್ದರು? ಮತ್ತು ನಕ್ಸಲ್ ಹೋರಾಟಕ್ಕೆ ಸೇರಿದ್ದೇಕೆಂಬುದೇ ಒಂದು ಕತೆ.

ನ್ಯಾಯ ಅನ್ಯಾಯಗಳನ್ನು ತಿಳಿಯುವ, ತಾರತಮ್ಯ ವಿರೋಧಿಸುವ ಸರಳ ಉದ್ದೇಶಗಳ ಹೋರಾಟಗಾರನಾಗಿರಲಿಲ್ಲ ಈ ಗೊರಬಾಳ್. ಅವರ ಹೋರಾಟ ಆಶಯಗಳ canvas ಇನ್ನು ದೊಡ್ಡದಿತ್ತು. ಹಾಗಾಗಿ ದೊಡ್ಡ ಮಟ್ಟದ ತೀವ್ರ ಸ್ವರೂಪದ ಚಟುವಟಿಕೆಗಳಿಗೆ ಅವರು ಮನಸ್ಸು ಕೊಟ್ಟಿದ್ದರು.

ಸಿಂಧನೂರಿನ ಸಾಮಾನ್ಯ ರೈತ ಕುಟುಂಬದಿಂದ ಬಂದಿರುವ ಗೊರಬಾಳ್ ನಕ್ಸಲ್ ಆಗವ ಮುನ್ನ ಓರ್ವ ಸಾಧಾರಣ, ಉತ್ತಮ ಯುವಕರಾಗಿದ್ದರು. ಆನಂತರ ಅಸಾಧಾರಣ ಮನುಷ್ಯ ಕಾಳಜಿಗಳು, ಅತ್ಯುತ್ತಮ ವ್ಯಕ್ತಿಯಾಗಿ ಅರಳಿದರು.

ಪಿಗ್ಮಿ ಕಲೆಕ್ಟರ್ ನಕ್ಸಲ್ ಆದ

ಈಗ್ಗೆ ಐದು ವರ್ಷಗಳ ಹಿಂದೆ ಹೊಸಪೇಟೆ ಬಸ್‌ಸ್ಟಾಂಡಿನಲ್ಲಿ ಪೊಲೀಸರ ಕೈಗೆ ಸಿಕ್ಕು ಜೈಲು ಸೇರಿ ಈಗ ಬಿಡುಗಡೆಯಾಗಿರುವ ಉಜ್ಜನಿಗೌಡರ ಹೆಸರು ನಿಮಗೆ ನೆನಪಿರಬಹುದು.

ದಕ್ಷಿಣ ಕರ್ನಾಟಕದವರಾದ ಉಜ್ಜನಿಗೌಡರು ಸಿಂಧನೂರಿನಲ್ಲಿ ನೆಲೆ ನಿಂತು ನಾರಾಯಣಪುರ ಬಲದಂಡೆ ಕಾಲುವೆಗಾಗಿ ಹೋರಾಟ ರೂಪಿಸಲು ಹೊರಟಾಗ ಅವರ ಜೊತೆಗೂಡಿದ ಸ್ಥಳೀಯ ಯುವಕ ಈ ಗೊರಬಾಳ್. ಕುಷ್ಟಗಿ ತಾಲ್ಲೂಕಿನ ಮುದೇನೂರು ಗ್ರಾಮದ ರೈತ ಕುಟುಂಬದ ಗೊರಬಾಳ್ ಅಪಾರ ಬಡತನ ಮಧ್ಯೆ ವಿದ್ಯಾವಂತರಾದವರು. ಆಗ ಸ್ಥಳೀಯ ಬ್ಯಾಂಕೊಂದರ ಪಿಗ್ಮಿ ಏಜೆಂಟ್ ಆಗಿ ಕೆಲಸ ಮಾಡಿ ಒಂದಿಷ್ಟು ಹಣ ಗಳಿಸಿ ಓದಿ ಫಸ್ಟ್ ಕ್ಲಾಸಿನಲ್ಲಿ ಪಾಸಾಗಿದ್ದ ಯುವಕ ಈ ಚಂದ್ರು ಗೊರಬಾಳ್ ನಂತರ ಸಿಂಧನೂರಿನ ಸರ್ಕಾರಿ ಕಾಲೇಜಿಗೆ ಪಾರ್ಟ್ ಟೈಂ ಲೆಕ್ಚರರ್ ಆಗಿಬಂದರು. ಇವರ ಹೋರಾಟದ ಬದುಕು ಶುರುವಾಗಿದ್ದು ಅಲ್ಲಿಯೇ. ಆಗ ರಾಯಚೂರು-ಗಂಗಾವತಿ ರಸ್ತೆಯಲ್ಲಿ ಸರ್ವೆ ನಂಬರ್ 768/1 ನಲ್ಲಿದ್ದ ನೂರಾರು ಎಕರೆ ಸರ್ಕಾರಿ ಜಮೀನನ್ನು ಸ್ಥಳೀಯ ರಾಜಕಾರಣಿಗಳು ಹಾಗೂ ಭೂಮಾಲೀಕರು ನುಂಗಿ ಹಾಕಿದ್ದರು. ಈ ವಂಚನೆಯ ವಿರುದ್ಧ ಒಂದು ಬೃಹತ್ ಸಂಘಟಿತ ಹೋರಾಟ ರೂಪಿಸಿದ್ದರು ಗೊರಬಾಳ್. ನಂತರ ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಹಾಸ್ಟೆಲ್ ಸೌಲಭ್ಯಕ್ಕಾಗಿ ಬಹುದೊಡ್ಡ ಪ್ರತಿಭಟನೆ ಮಾಡಿಸಿದ್ದರು. ಅದೊಂದು ಮಿಲಿಟೆಂಟ್ ಹೋರಾಟವಾಗಿತ್ತು. ಈ ಪ್ರಕ್ರಿಯೆಯಲ್ಲೇ ಕರ್ನಾಟಕ ವಿಮೋಚನಾ ರಂಗದ ನಾಯಕರಲ್ಲೊಬ್ಬರಾಗಿ ಬೆಳೆದರು ಗೊರಬಾಳ್. ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಗೊರಬಾಳ್‌ರ ವಿದ್ಯಾರ್ಥಿಗಳು ಹಾಗೂ ಸಿಂಧನೂರಿನ ನೂರಾರು ಯುವಜನರು ಕೇವಲ ತಮ್ಮ ಊರಿನಲ್ಲಿ ಮಾತ್ರವಲ್ಲದೆ ಮಲೆನಾಡಿನ ತುಂಗಾ ಮೂಲ ಉಳಿಸಿ ಹೋರಾಟಕ್ಕೆ ಬಂದು ಬೆಂಬಲಿಸಿದ್ದರು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ನಾನಾ ಸಂಗತಿಗಳ ಕಾರ್ಯಕ್ರಮ, ಪ್ರತಿಭಟನೆಗಳಲ್ಲೂ ಪಾಲ್ಗೊಳ್ಳುತ್ತಿದ್ದರು. ಇದರಿಂದ ಏನಾಯಿತೆಂದರೆ ಗೊರಬಾಳ್ ಮೂಲಕ ಹೊಸ ತಲೆಮಾರಿನ ದೊಡ್ಡ ಪ್ರಗತಿಪರರ ಗುಂಪೇ ರೂಪು ತಳೆಯಲಾರಂಭಿಸಿತ್ತು. ಇದು ಹೀಗೇ ಮುಂದುವರೆದಿದ್ದರೆ ಹೈದರಾಬಾದ್ ಕರ್ನಾಟಕಕ್ಕೆ ಇನ್ನೊಬ್ಬ ಎಸ್.ಕೆ. ಕಾಂತಾ ಸಿಕ್ಕಿರುತ್ತಿದ್ದರು. ಬಹುತೇಕ ಕಾಂತರನ್ನೇ ಮೀರಿಸುವ ಜನ ನಾಯಕರಾಗಿರುತ್ತಿದ್ದರೇನೋ ಗೊರಬಾಳ್.


ಸಿಂಧನೂರಿನ ಅಂಬೇಡ್ಕರ್ ಸ್ಮರಣ ಸಭೆಯಲ್ಲಿ ಗೊರಬಾಳ್(ಬಲತುದಿ)-90ರ ದಶಕದ ಫೋಟೋ

ಆದರೆ ಗೊರಬಾಳ್‌ರ ಬದುಕಿನ ಹಾದಿ ಬೇರೆಡೆಗೆ ಹೊರಳಿತು. ಪಾರ್ಟ್ ಟೈಂ ಲೆಕ್ಚರರ್ ಆಗಿದ್ದ ಅವರು ಫುಲ್‌ಟೈಂ ಹೋರಾಟಗಾರರಾಗಿ ಮುಂದುವರೆಯುವ ತೀರ್ಮಾನ ಮಾಡಿದರು. ಆಗಿನ ನಕ್ಸಲ್ ಸಂಘಟನೆಯ ನಿಯಮದಂತೆ ಗೊರಬಾಳ್ ಭೂಗತರಾಗಬೇಕಾಯಿತು. ಈ ತರದ ಓಬೀರಾಯನ ಕಾಲದ ರಹಸ್ಯತೆಯ ನಿಯಮಗಳು ಈಗಲೂ ಅನೇಕ ನಕ್ಸಲ್ ಸಂಘಟನೆಗಳಲ್ಲಿವೆ. ಎಲ್ಲರ ಕಣ್ಣೆದುರೇ ಓಡಾಡಿಕೊಂ[illegible]ರುತ್ತಾ, ಜನನಾಯಕರಾಗಿ ಹಾಗೂ ಸಂಘಟನೆಗಳ ಮುಖಂಡರಾಗಿ ಒಬ್ಬರು ವಿಕಾಸವಾಗಲು ಶುರುವಾಗುತ್ತಿದ್ದಂತೆ ಅಂಥವರನ್ನೇ ಆರಿಸಿ ಯಾರ ಕೈಗೂ ಸಿಗದಂತೆ, ಜನರ ಕಣ್ಣಿಗೂ ಕಾಣಿಸದಂತೆ ಅಂಡರ್‌ಗ್ರೌಂಡ್ ಮಾಡಿಸಿಬಿಡುವ ಒಂದು ವಿಚಿತ್ರ ಪದ್ಧತಿ ನಕ್ಸಲರಿಗಿದೆ. ಮಲೆನಾಡಿನಲ್ಲಿದ್ದ ಸಿರಿಮನೆ ನಾಗರಾಜ್, ಮಂಡ್ಯದ ಉಜ್ಜನಿಗೌಡ, ಮಲೆನಾಡಿನ ಪಾರ್ವತಿ, ದೇವಣ್ಣ, ಬಿ.ಜಿ. ಕೃಷ್ಣಮೂರ್ತಿ, ಪದ್ಮನಾಭ, ನಂದಕುಮಾರ್, ಆಶಾ... ಹೀಗೆ ಇಂತಹ ಡಜನ್‌ಗಟ್ಟಲೆ ಉದಾಹರಣೆಗಳು ಕರ್ನಾಟಕದಲ್ಲಿವೆ.

ಎ.ಕೆ.47 -ಆಂಧ್ರ ಪೊಲೀಸರ ಕಟ್ಟುಕತೆ

ಗೊರಬಾಳ್ ಬಂಧನವಾದದ್ದು ಆಂಧ್ರದ ಮೆಹಬೂಬ್‌ನಗರ ಜಿಲ್ಲೆಯ ಐಜಾ ಗ್ರಾಮದಲ್ಲಿ ಎಂಬುದು ಸದ್ಯದ ಮಾಹಿತಿ. ಇದು ನಿಜವಿರಲೂಬಹುದು. ಆದರೆ ಚಂದ್ರು ವಾಸವಿದ್ದ ಶಹಪೂರ ತಾಲ್ಲೂಕಿನ ಹೊತ್‌ಪೇಟೆ ತಾಂಡಾದ ರೂಮಿನಲ್ಲಿ ಒಂದು ಎ.ಕೆ.47 ರೈಫಲ್ ಹಾಗೂ ರೌಂಡ್ಸ್ ಸಿಕ್ಕಿದೆಯೆಂಬುದಂತೂ ಕಟ್ಟುಕತೆ. ಕರ್ನಾಟಕ ಪೊಲೀಸರ ಪ್ರತಿಕ್ರಿಯೆಯೇ ಇದಕ್ಕೆ ಸಾಕ್ಷಿ.

ಗೊರಬಾಳ್ ಬಂಧನದ ನಂತರ ಸ್ಥಳಕ್ಕೆ ಹೋದ ಯಾದಗೀರ್ ಜಿಲ್ಲಾ ಅಡಿಷನಲ್ ಎಸ್‌ಪಿ ಯಾತನೂರ್ "ಆಂಧ್ರ ಪೊಲೀಸರು ಹೀಗೆ ಮನಸಿಗೆ ಬಂದದ್ದು ಹೇಳಿ ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಿದ್ದಾರೆ" ಎಂದು ಗೊಣಗುತ್ತಿದ್ದಾರೆ. ಸೀತಾಬಾಯಿ ಎಂಬ ಲಂಬಾಣಿ ಮಹಿಳೆಗೆ ಸೇರಿದ್ದ ಈ ರೂಮಿನ ತಲಾಟಿಯಲ್ಲಿ ಒಂದು ರಟ್ಟಿನ ಬಾಕ್ಸ್ ಮಾತ್ರ ಪೊಲೀಸರಿಗೆ ಸಿಕ್ಕಿದೆ. ಸಹಜವಾಗಿಯೇ ಅದರಲ್ಲಿ ನಕ್ಸಲ್ ಹೋರಾಟದ ಕರಪತ್ರಗಳು ಸಿಕ್ಕಿರುತ್ತವೆ. ಜೊತೆಗೆ ಮಾರ್ಕ್ಸಿಸ್ಟ್ ಸಿದ್ಧಾಂತದ ಪುಸ್ತಕಗಳೂ ಇರಲಿಕ್ಕೆ ಸಾಕು.

ಭೀಮರಾಯನಗುಡಿಯ ಸಮೀಪ, ಕೃಷಿ ಕಾಲೇಜಿನಿಂದ ಕೂಗಳತೆ ದೂರದಲ್ಲಿದ್ದ ಈ ಚಿಕ್ಕ ರೂಮಿನಲ್ಲಿ ಗೊರಬಾಳ್ ಎಂಬ ಬಹುದೊಡ್ಡ ಕ್ರಾಂತಿಯ ಕಿಡಿ ಇತ್ತೇ ವಿನಃ ಬೇರೆ ಇನ್ಯಾವ ಆಯುಧಗಳೂ ಪೊಲೀಸರಿಗೆ ಸಿಕ್ಕಿಲ್ಲ.

ತಾಂಡಾದಲ್ಲಿ ಹೀಗಿದ್ದರು ಗೊರಬಾಳ್


"ನೀ ಚೆನ್ನಾಗಿ ಸಾಲಿ ಕಲೀಬೇಕು, ಇಲ್ಲಾಂದ್ರೆ ಕೂಲಿ ಮಾಡೋದ್ ಬಿಟ್ರೆ ಜೀವನದಾಗ ಮತ್ ಬೇರೇನ್ ಸಿಗಂಗಿಲ್ ನೋಡು...."

-ಇದು ತಾನು ಬಾಡಿಗೆಗಿದ್ದ ರೂಮಿನ ಓನರ್ ಸೀತಾಬಾಯಿಯ ಮಗ ಅರ್ಜುನನಿಗೆ ಚಂದ್ರಶೇಖರ್ ಗೊರಬಾಳ್ ಹೇಳುತ್ತಿದ್ದ ಮಾತುಗಳು. ಈಗಿನ್ನು ಪಿಯುಸಿ ಓದುತ್ತಿರುವ ಅರ್ಜುನನಿಗಾಗಲಿ ಅಥವಾ ಹೊತ್‌ಪೇಟ್ ತಾಂಡಾ ನಿವಾಸಿಗಳಿಗಾಗಲಿ ಗೊರಬಾಳ್ ವಿರುದ್ಧ ಏನೂ ದೂರುಗಳಿಲ್ಲ, ಬದಲಾಗಿ ಅವರ ಬಗ್ಗೆ ಪ್ರೀತಿಯ, ಗೌರವದ ಮಾತುಗಳನ್ನೇ ಆಡುತ್ತಿದ್ದಾರೆ.

'ಪೊಲೀಸ್ನೋರ್ ಬಂದು, ಅವ ಡೇಂಜರ್ ಇದಾನೆ ಅಂದಾರ್ರಿ. ಆದ್ರೂ ಮಾಸ್ತರಿಂದ ನಮಿಗೇನೂ ತೊಂದರಿ ಆಗಲ್ಲಾರಿ' ಎನ್ನುವುದೇ ತಾಂಡಾವಾಸಿಗಳ ಅನಿಸಿಕೆ. ಕಳೆದ 2 ವರ್ಷಗಳಿಂದ ಹೊತ್‌ಪೇಟ್ ತಾಂಡಾದಲ್ಲಿ ಒಂದು ಪುಟ್ಟ ಕೊಠಡಿ ಬಾಡಿಗೆಗೆ ಪಡೆದು ವಾಸವಿದ್ದ ಗೊರಬಾಳ್ ತಮ್ಮೊಂದಿಗೆ ಹೆಚ್ಚೇನು ವಸ್ತುಗಳನ್ನು ಇಟ್ಟುಕೊಂಡಿರಲಿಲ್ಲ, ಶಸ್ತ್ರಾಸ್ತ್ರ ಗನ್ನು ಮುಂತಾದವಂತೂ ಈ ತಾಂಡಾದಲ್ಲಿ ಇರಲೇ ಇಲ್ಲ. ಎಕೆ 47 ಇತ್ಯಾದಿ ಸುದ್ದಿಗಳೆಲ್ಲಾ ಆಂಧ್ರ ಪೊಲೀಸರ ಕಟ್ಟುಕತೆಗಳಷ್ಟೇ. ಇದನ್ನು ಕರ್ನಾಟಕ ಪೊಲೀಸರೂ ನಂಬಲ್ಲ. ತಾನೇ ಅಡುಗೆ ಮಾಡಿಕೊಂಡು ಉಣ್ಣುತ್ತಾ, ಬಿಡುವಾದಾಗ ಬಟ್ಟೆ ಒಗೆದುಕೊಂಡು ಉಳಿದೆಲ್ಲಾ ಸಮಯದಲ್ಲೂ ಓದು ಬರವಣಿಗೆಯಲ್ಲಿ ಗೊರಬಾಳ್ ತೊಡಗಿದ್ದನ್ನು ಸ್ಥಳೀಯ ಜನ ಗಮನಿಸಿದ್ದಾರೆ. ಬೆಂಗಳೂರು-ಬೀದರ್ ಹೈವೆ ಪಕ್ಕದಲ್ಲೇ ಇದ್ದ ಈ ರೂಮಿನ ಹತ್ತಿರವೇ ಒಂದು ನೀರಾವರಿ ಕಾಲುವೆ ಇದೆ. ತನ್ನ ಟೂರ್ ಮುಗಿಸಿ ರೂಮಿಗೆ ಹಿಂತಿರುಗಿದಾಗ ಈ ಕಾಲುವೆಯಲ್ಲೇ ಚಂದ್ರು ಸ್ನಾನ ಮುಗಿಸಿಕೊಳ್ಳುತ್ತಿದ್ದರು. ಆಗೊಮ್ಮೆ ಈಗೊಮ್ಮೆ ಬಿಡುವು ಮಾಡಿಕೊಂಡು ತಾಂಡಾದ ಪುಟ್ಟ ಮಕ್ಕಳೊಂದಿಗೂ ಆಡುತ್ತಾ ಬೆರೆಯುತ್ತಿದ್ದ ಚಂದ್ರು ಆ ಮಕ್ಕಳು 'ಸಾಲಿ ಕಲಿಯುವ' ಬಗ್ಗೆ ಸದಾ ಕಾಳಜಿ ವಹಿಸಿದ್ದಾರೆ.

ಬಹುತೇಕ ಎಲ್ಲಾ ನಕ್ಸಲರೂ ಹೀಗೆ ಇರುತ್ತಾರೆ.

ಚಂದ್ರಶೇಖರ ಗೊರಬಾಳ್ ಸಹ ಅದೇ ರೀತಿ ಇದ್ದು ಅರೆಸ್ಟಾಗಿ ಹೋಗಿದ್ದಾರೆ.


ತಾಂಡಾದಲ್ಲಿದ್ದ ವಿದ್ಯಾರ್ಥಿ ಮಿತ್ರ ಅರ್ಜುನ...



ಚಂದ್ರಶೇಖರ್ ಗೊರಬಾಳ್ ಸಹ ಅದೇ
ಗೆ ದೂಡಲ್ಪಟ್ಟರು. ಅದರ ತಕ್ಷಣದ
ಾಮವೆಂಬಂತೆ ಸಿಂಧನೂರು, ರಾಯಚೂರು
ುತ್ತ ಬೆಳೆದು ದೊಡ್ಡದಾಗಬಹುದಾಗಿದ್ದ
ಕ ಮಾಸ್ ಮೂವ್‌ಮೆಂಟ್‌ಗಳ ಚೈತನ್ಯವೇ
ಗಿಹೋಯಿತು. ಮುಂದೇನಾಯಿತೆಂಬುದು
ಗೂ ಗೊತ್ತು.

2000ನೇ ಇಸವಿಯ ನಂತರ ಮಲೆನಾಡಿನಲ್ಲಿ
ರು ಆರಂಭಿಸಿದ ಸಶಸ್ತ್ರ ಹೋರಾಟದಲ್ಲಿ
ನೂರಿನ ಕೆಲವರು ಭಾಗಿಗಳಾದರು. ಅವರಲ್ಲಿ
ಂಗು, ಹಾಜಿಮಾ, ಚನ್ನಪ್ಪ ಪೊಲೀಸರ
ಕೌಂಟರ್‌ಗಳಲ್ಲಿ ಸಿಲುಕಿ ಪ್ರಾಣ ತೆತ್ತರು. ಇತ್ತ
ರ್ಗಾದಿಂದ ಹಿಡಿದು ಬೆಂಗಳೂರಿನ ತನಕ
ಡಿಕೊಂಡಿರುತ್ತಿದ್ದ ಗೊರಬಾಳ್ ರಾಜ್ಯ ನಕ್ಸಲ್
ಟನೆಯ ರಾಜ್ಯ ಸಮಿತಿಯ ಸದಸ್ಯರೂ ಆದರು.
ೀಸರ ಪ್ರಕಾರ ಈತ ನಕ್ಸಲರ ಸೌತ್ ವೆಸ್ಟರ್ನ್
ರೋ ಅಥವಾ ಕೇಂದ್ರ ಸಮಿತಿಯ ಸದಸ್ಯರೂ
ಸ್ಥರಂತೆ. ಬಹುತೇಕ ಆ ಸಾಧ್ಯತೆ ಇರಲಿಕ್ಕಿಲ್ಲ.

ಈಗ ಹೊರಬೀಳುತ್ತಿರುವ ಸುದ್ದಿಗಳನ್ನೇ ಆಧರಿಸಿ
ಬಹುದಾದರೆ ಗೊರಬಾಳ್ ಮಲೆನಾಡಿನ
ನೊಳಗಿನ ನಕ್ಸಲರ ಚಟುವಟಿಕೆಗಳಲ್ಲಿ ನೇರವಾಗಿ
ಯಾದಂತಿಲ್ಲ. ಬಹುಶಃ ನಗರ
ಶಗಳಲ್ಲಷ್ಟೇ ಈತ ಸಂಘಟನೆಯ ಚಟುವಟಿಕೆ
ುತ್ತಿರಬಹುದು. ಇವರಿಗೆ ಆಂಧ್ರ
ರೊಂದಿಗೂ ಇರುವ ನಂಟಿನ ಸಾಧ್ಯತೆಗಳನ್ನು
ಭೂಬ್ ನಗರ ಜಿಲ್ಲೆಯಲ್ಲಾದ ಅವರ
ನವೇ ಹೇಳುತ್ತಿದೆ.

ಅಪಾರ ಓದು, ಮಾರ್ಕ್ಸಿಸ್ಟ್ ಸಿದ್ಧಾಂತದ
ಷಣೆಗಳನ್ನೆಲ್ಲಾ ಮಾಡಬಲ್ಲವರಾಗಿದ್ದ
ಬಾಳ್‌ರ ಒಂದು ಮರುಭೂಮಿಗೆ ಕಳಿಸಿದರೂ
ಹಸಿರು ಚಿಗುರಿಸಬಲ್ಲ ಕೆಪಾಸಿಟಿ ಇದ್ದ
ಟಕರಾಗಿದ್ದರು. ಕರ್ನಾಟಕ ನಕ್ಸಲರೊಳಗೇ
ರಾಟದ ಹಾದಿ ಯಾವುದಾಗಿರಬೇಕೆಂಬ
ದ ಎದ್ದಿದ್ದಾಗ ಗೊರಬಾಳರ ಆತ್ಮ
ುತೀಯರೊಂದಿಗೂ, ದೇಹ-ಮನಸ್ಸು ಮೂಲ
ಯೊಂದಿಗೂ ಇತ್ತು ಎನ್ನಲಾಗಿದೆ. ಈತ ತಾನು
ದ್ದನ್ನೇ ಬದುಕಿದವರು; ಆಶಿಸಿದ್ದನ್ನೇ ಆಚರಣೆಗೆ
ು ಹೋರಾಡಿದ ವ್ಯಕ್ತಿ.

ಗೊರಬಾಳ್ ಸೆರೆ ಸಿಕ್ಕ ತಕ್ಷಣ ಪೊಲೀಸರು
ಸು ಹೊಡೆದು ಕೊಲ್ಲಲಿಲ್ಲವಲ್ಲ ಎಂಬುದೇ
ಧಾನದ ಸಂಗತಿ. ಗೊರಬಾಳ್
್ಯನೊಂದಿಗೆ ಕರ್ನಾಟಕ ನಕ್ಸಲರ ಸಮಸ್ಯೆಗಳು
ನ್ನು ಹೆಚ್ಚಲಿದೆ. ಸಶಸ್ತ್ರ ಹೋರಾಟದಲ್ಲಿ ಅವರು
ಕ್ಷಿಸಿದ್ದ, ಬಯಸಿದ್ದ **break through**
ಲ್ಲ. ತಕ್ಷಣದ ಭವಿಷ್ಯದಲ್ಲಿ ಅದು
ವಂತೆಯೂ ಕಾಣುತ್ತಿಲ್ಲ. ಸದ್ಯಕ್ಕೆ ಸಶಸ್ತ್ರ
ರಾಟವನ್ನು **low key** ನಲ್ಲಿಟ್ಟು ಸಂಘಟನಾ
ರ್ಯ ಮಾಡುವ ಉದ್ದೇಶ ನಕ್ಸಲರಿಗಿದ್ದಂತಿದೆ.

ಇದು ನಿಜವಾಗಿದ್ದರೆ ತಪ್ಪೇನೂ ಇಲ್ಲ.
ಶೀಟುಗಳು, ದಾಳಿ-ಪ್ರತಿದಾಳಿಗಳು,
ಕೌಂಟರ್ ಹತ್ಯೆಗಳೆಂಬ ವಿದ್ಯಮಾನಗಳಿಂದ
ಟಕದ ಬಹುತೇಕ ಜನ ಇನ್ನೂ ದೂರವೇ
ಿದ್ದಾರೆ.

ಆದರೆ ಗೊರಬಾಳ್ ತರದವರ ಬಂಧನ
ನ್ನು ಕಂಡಿದ್ದ, ಮಾರ್ಗದರ್ಶನ ಪಡೆದಿದ್ದ
ಲ್ಲಿ ಬೇಸರ ಮೂಡಿಸಿದೆ. ಬಹುತೇಕ ಮುಂದಿನ
ದು ವರ್ಷ ಅವರಿಗೆ ಜೈಲಿನ ಬದುಕು
ುವಂತಿದೆ.

ಆದರೆ ಬದುಕು ಜೈಲಿನಲ್ಲಾಗಲಿ ಅಥವಾ
ಲಿನಲ್ಲಾಗಲಿ ಈ ಚಂದ್ರಶೇಖರ್ ಗೊರಬಾಳ್
ರಾಟಗಾರನಾಗಿಯೇ ಉಳಿಯುತ್ತಾರೆ.
ಅವರ ಕಮಿಟ್‌ಮೆಂಟ್ ಹಾಗೂ ವ್ಯಕ್ತಿತ್ವ
ನರ ಅನಿಸಿಕೆ ಇದು.


• ಪಾರ್ವತೀಶ
hparvateesha@gmail.com

ಕರಂದ್ಲಾಜೆ ಬಿಟ್ಟರೆ ಬಿಜೆಪಿಗೆ ಮತ್ತೊಬ್ಬ ಮಹಿಳೆ ಗತಿಯಿಲ್ಲವೇ?

ಕರಂದ್ಲಾಜೆ v/s ವಿಮಲಾಗೌಡ

ಮಹಿಳೆ ಎಂಬ ಒಂದೇ ಕಾರಣಕ್ಕೆ ಮತ್ತೆ ಕರಂದ್ಲಾಜೆಯನ್ನು ಮಂತ್ರಿ ಮಾಡೋದೇ ಆದರೆ ಆಕೆಗಿಂತ ಹಿರಿಯ, ಪಕ್ಷಕ್ಕಾಗಿ ದುಡಿದ ಬೇರೆ ಯಾವ ಮಹಿಳೆಯರೂ ಬಿಜೆಪಿಯಲ್ಲಿಲ್ಲವೇ?

ಏಕೆ ಕರಂದ್ಲಾಜೆಯನ್ನೇ ಮತ್ತೆ ಮಂತ್ರಿ ಮಾಡಬೇಕು? ಆಕೆಗಿಂತ ಸಮರ್ಥ, ದಕ್ಷರು, ಸಂಘಟನಾ ನಿಪುಣ ಮಹಿಳೆಯರಿದ್ದೂ ಅವರಿಗೇಕೆ ಅವಕಾಶ ಕೊಡಬಾರದು? ಕರಂದ್ಲಾಜೆ ನಿಷ್ಠೆ ಪಕ್ಷಕ್ಕಾ ಅಥವಾ ಮುಖ್ಯಮಂತ್ರಿ ಯಡಿಯೂರಪ್ಪನವರಿಗಾ? ಹಾಗಾದರೆ ಈತನಕ ಪಕ್ಷಕ್ಕಾಗಿ ದುಡಿದ ಬೇರೆಲ್ಲ ಮಹಿಳೆಯರ ಶ್ರಮಕ್ಕೆ ಬೆಲೆಯೇ ಇಲ್ಲವೇ? ಬೇರೆಲ್ಲ ಮಹಿಳಾ ನಾಯಕಿಯರ ನಿಷ್ಠೆಗೆ ಪಕ್ಷ ಏನು ಬೆಲೆ ಕೊಟ್ಟಂತಾಯ್ತು? ಹಾಗೊಮ್ಮೆ ಕರಂದ್ಲಾಜೆಯನ್ನು ಮಂತ್ರಿ ಮಾಡಲೇಬೇಕು ಎಂದು ಯಡ್ಡಿ ಹಠಕ್ಕೆ ಬೀಳೋದಾದ್ರೆ ಇನ್ನೊಂದಿಬ್ಬರು ಮಹಿಳೆಯರನ್ನು ಮಂತ್ರಿ ಮಾಡೋದಕ್ಕೆ ಏನು ಕಷ್ಟ?



ಶೋಭಾ


ಇಂಥ ತರಹೇವಾರಿ ಪ್ರಶ್ನಾವಳಿಗಳೆಲ್ಲ ಏಕಾಏಕಿ ಬಿಜೆಪಿ ಪಾಳೆಯದಲ್ಲಿ ಹೊಗೆಯಾಡುವುದಕ್ಕೂ, ಇತ್ತ ಸಂಪುಟ ಪುನರ್ರಚನೆಗೆ ಕಾಲ ಸನ್ನಿಹಿತವಾಗುವುದಕ್ಕೂ ದೊಡ್ಡ ಅಂತರವೇನಿಲ್ಲ. ಶೋಭಾ ಕರಂದ್ಲಾಜೆ ಮತ್ತೆ ಮಂತ್ರಿಯಾಗಲು ತಮ್ಮ ವಿರೋಧವೇನಿಲ್ಲ ಎಂದು ರೇಣುಕಾಚಾರ್ಯ ಹೇಳಿಕೆ ಕೊಟ್ಟ ಬೆನ್ನಲ್ಲೇ ಇಂಥ ಪ್ರಶ್ನೆಗಳೆಲ್ಲ ಏಕಾಏಕಿ ಹೆಡೆಯೆತ್ತಿ ನಿಂತುಬಿಟ್ಟಿವೆ.

ಮೇಲ್ನೋಟಕ್ಕಿದು ಕರಂದ್ಲಾಜೆ ವಿರುದ್ಧದ ಪಕ್ಷನಿಷ್ಠರ ಪ್ರಶ್ನೆಗಳಂತೆ ಕಂಡರೂ ಆಳದಲ್ಲಿ ವಿಮಲಾಗೌಡ ಎಂಬ ಮತ್ತೊಬ್ಬ ಮಹಿಳಾ ನಾಯಕಿಯ ಮಂತ್ರಿಗಿರಿ ಲಾಬಿಯ ಮತ್ತೊಂದು ಮುಖವಷ್ಟೇ!

ಮುಖ್ಯವಾಗಿ ಬಿಜೆಪಿಯ ರಾಷ್ಟ್ರ ನಾಯಕಿ ಸುಷ್ಮಾಸ್ವರಾಜ್‌ಗೆ ಕರಂದ್ಲಾಜೆ ಮತ್ತೆ ಮಂತ್ರಿಯಾಗುವುದು ಬೇಕಿಲ್ಲ. ಮೊನ್ನೆ ದೆಹಲಿಯಲ್ಲಿ ನಡೆದ ಕಾರ್ಯಕಾರಿಣಿಯಲ್ಲಿ 'ಅವಳನ್ನು ತೆಗೆದಿದ್ದು ಯಾಕೆ? ಮತ್ತೆ ಮಂತ್ರಿ ಮಾಡೋದು ಯಾಕೆ? ಬೇರೆ ಮಹಿಳೆಯರಿಗೆ ಒಂದು ಛಾನ್ಸ್ ಕೊಡಬಹುದಲ್ಲವೇ?' ಎಂದರಂತೆ ಸುಷ್ಮಾಸ್ವರಾಜ್. ಈ ರೀತಿ ಸುಷ್ಮಾ ಬಾಯಿಯಿಂದ ಹೊರಬಿದ್ದ ತಾತ್ಸಾರಕ್ಕೆ ಕೇವಲ ರೆಡ್ಡಿಬ್ರದರ್ಸ್ ಮಾತ್ರವೇ ಕಾರಣವಲ್ಲ ಎಂಬುದು ಕೂಡ ಬಿಜೆಪಿಗಳಿಗೆ ಗೊತ್ತಿಲ್ಲವೆಂದೇನಲ್ಲ. ಮುಖ್ಯಮಂತ್ರಿ ಯಡ್ಡಿ ಮತ್ತು ಚಪಲಾಧಿಪತಿ ರಾಮಚಂದ್ರಗೌಡರ ಹೊರತಾಗಿ ಬಿಜೆಪಿ-ಸಂಘಪರಿವಾರದ ಯಾರೊಬ್ಬರಿಗೂ ಮತ್ತೆ ಕರಂದ್ಲಾಜೆ ಮಂತ್ರಿಯಾಗುವುದು ಬೇಕಿಲ್ಲ!

ಬಿಜೆಪಿ ರಾಷ್ಟ್ರ ನಾಯಕ ಅನಂತ್‌ಕುಮಾರ್ ರಾಜ್ಯಾಧ್ಯಕ್ಷ ಈಶ್ವರಪ್ಪ, ಮತ್ತೊಬ್ಬ ನಾಯಕ ಜಗದೀಶ್ ಶೆಟ್ಟರ್, ಶಂಕರಮೂರ್ತಿ, ಆರ್.ಅಶೋಕ್ ಇತ್ಯಾದಿ ಯಾರೇ ಒಬ್ಬ ಮುಂಚೂಣಿಯ ನಾಯಕರೂ ಕರಂದ್ಲಾಜೆಯನ್ನು ಬೆಂಬಲಿಸುತ್ತಿಲ್ಲ. ಹಾಗಂತ ಕರಂದ್ಲಾಜೆಗೆ ಪರ್ಯಾಯವಾಗಿ ಮತ್ತೊಬ್ಬ ನಾಯಕಿ ಬೇಕಲ್ಲವೇ? ಅದಕ್ಕೆ ವಿಮಲಾಗೌಡ ಎಂಬ ಪಕ್ಕಾ ಒಕ್ಕಲಿಗ ನಾಯಕಿಯನ್ನು ಮುಂದೆ ಬಿಡುತ್ತಿದ್ದಾರೆ.

ಕರಂದ್ಲಾಜೆಗೆ ಹೋಲಿಸಿದರೆ ವಿಮಲಾಗೌಡ ಸೀನಿಯಾರಿಟಿ ಮತ್ತು ಜಾತಿಯಲ್ಲೂ ಹೆಚ್ಚಿಗೆ ತೂಗುತ್ತಾರೆ. ಕರಂದ್ಲಾಜೆ ಇನ್ನೂ ಬಿಜೆಪಿಗೆ ಕಾಲೇ ಇಡದಿದ್ದ ಕಾಲದಲ್ಲಿ ವಿಮಲಾಗೌಡ ರಾಜ್ಯ ಮಹಿಳಾ ಮೋರ್ಚಾದ ಅಧ್ಯಕ್ಷೆಯಾಗಿದ್ದರು. ಹೆಚ್ಚೂ ಕಮ್ಮಿ ರಾಮಚಂದ್ರೇಗೌಡ, ಬಿ.ಬಿ. ಶಿವಪ್ಪ ಯಡಿಯೂರಪ್ಪನವರ ಸಮಕಾಲೀನರಾದ ವಿಮಲಾಗೌಡಗೆ ಒಕ್ಕಲಿಗರ ಸಂಘದ ಆಗುಹೋಗುಗಳಲ್ಲಿ ಸಕ್ರಿಯ ಪಾತ್ರವಿದೆ. ಮೈಸೂರು ಪ್ರಾಂತದ ಒಕ್ಕಲಿಗರಿಗೆ ಕರಂದ್ಲಾಜೆಯ ಹಾಗೆ ವಿಮಲಾ ಪರಕೀಯ ಮುಖವಲ್ಲ. ಬೆಂಗಳೂರಿನ ಒಕ್ಕಲಿಗರ ಹೋರಾಟಗಳಲ್ಲೂ ಒಂದಲ್ಲ ಒಂದು ಪಾತ್ರ ವಹಿಸಿಕೊಂಡೇ ಬಂದ ವಿಮಲಾಗೌಡ ಹೇಳಿಕೇಳಿ ಅನಂತ ಕುಮಾರ್ ಪರಮಾಪ್ತೆ ಮತ್ತು ಆದಿ ಚುಂಚನಗಿರಿ ವಲಯದಲ್ಲಿ ವಿಶೇಷವಾಗಿ ಗುರುತಿಸಿಕೊಂಡಾಕೆ.



ವಿಮಲಾಗೌಡ

ಇದನ್ನೆಲ್ಲ ಗಮನಿಸಿಯೇ ಬಿಜೆಪಿಯ ಬಹುತೇಕ ನಾಯಕರೆಲ್ಲ ವಿಮಲಾಗೌಡರನ್ನು ಬೆಂಬಲಿಸುತ್ತಿದ್ದಾರೆ. ಅದು ಕೇವಲ ವಿಮಲಾಗೌಡರ ಮೇಲಿನ ಕಾಳಜಿಯಷ್ಟೇ ಅಲ್ಲ. ಮುಖ್ಯವಾಗಿ ಅಶೋಕ್‌ಗೆ ಕರಂದ್ಲಾಜೆ ಬೆಳೆಯುವುದು ಇಷ್ಟವಿಲ್ಲ. ಕರಾವಳಿ ಭಾಗದ ಅರೆಭಾಷೆ ಗೌಡರಾದರೂ ಕರಂದ್ಲಾಜೆ ತಾನೊಬ್ಬ ಪಕ್ಕಾ ಗೌಡತಿಯೆಂಬಂತೆ ಪೋಜು ಕೊಡುತ್ತಿರುವುದು ಮಂತ್ರಿ ಅಶೋಕ್ ಹೊಟ್ಟೆಯಲ್ಲಿ ಖಾರ ಕಲಸಿದಂತಾಗುತ್ತದೆ. ಯಡ್ಡಿ ಕೈ ಇನ್ನೆಲ್ಲಿ ಬಲಗೊಳ್ಳುತ್ತೋ ಎಂಬ ಕಾರಣಕ್ಕೆ ಶೆಟ್ಟರ್, ಈಶ್ವರಪ್ಪ, ಶಂಕರಮೂರ್ತಿ ಇತ್ಯಾದಿಗಳೆಲ್ಲ ಕರಂದ್ಲಾಜೆಗೆ ಮಂತ್ರಿಗಿರಿಯನ್ನು ವಿರೋಧಿಸುತ್ತಿದ್ದಾರೆ.

ಇದಕ್ಕೆ ಪೂರಕವಾಗಿ ದೆಹಲಿ ಮಟ್ಟದಲ್ಲಿ ಲಾಬಿಗೆ ಕೈಯಿಟ್ಟ ವಿಮಲಾಗೌಡ ರಾಷ್ಟ್ರಾಧ್ಯಕ್ಷ ಗಡ್ಕರಿ ಮತ್ತು ಅಧ್ವಾನಿಯನ್ನು ಬೆನ್ನಿಗಿಟ್ಟುಕೊಂಡೇ ಮಂತ್ರಿಗಿರಿಗೆ ಒತ್ತಡ ಹೇರುತ್ತಿದ್ದಾರೆ.



ಬಹುಶಃ ಜುಲೈ ಕೊನೆ ವಾರಕ್ಕೋ ಅಥವಾ ಆಗಸ್ಟ್ ಮೊದಲನೇ ವಾರಕ್ಕೋ ಯಡ್ಡಿ ಸಂಪುಟ ಪುನರ್ರಚನೆಗೊಳ್ಳುವುದು ಶತಸ್ಸಿದ್ಧ. ಜೂನ್ 28ರಿಂದ ವಿಧಾನಮಂಡಲ ಅಧಿವೇಶನ ಬೇರೆ ಶುರುವಾಗುತ್ತದೆ. ಅಲ್ಲಿಗೆ ವಿವಿಧ ಲಾಬಿಗಳೂ ತೀವ್ರಗೊಂಡಿರುತ್ತವೆ. ಈ ಬಾರಿ ಶತಾಯಗತಾಯ ಕರಂದ್ಲಾಜೆ ಮತ್ತು ಸೋಮಣ್ಣನನ್ನು ಮಂತ್ರಿ ಮಾಡೇ ತೀರಲು ಮುಖ್ಯಮಂತ್ರಿ ಯಡಿಯೂರಪ್ಪ ಹೆಣಗಾಡುತ್ತಿದ್ದರೆ ಅದಕ್ಕೆ ಕಲ್ಲುಹಾಕಲು ಯಡ್ಡಿ ವಿರೋಧಿ ಶಕ್ತಿಗಳೆಲ್ಲ ಒಟ್ಟಾಗುತ್ತಿವೆ. ಕರಂದ್ಲಾಜೆ ಬಿಟ್ಟು ಬೇರೆ ಮಹಿಳೆಗೆ ಅವಕಾಶ ಕೊಡಬಹುದಲ್ಲ? ಎಂಬುದು ಒಂದು ಕ್ಯಾತೆಯಾದರೆ ನಿನ್ನೆ ಮೊನ್ನೆ ಪಕ್ಷಕ್ಕೆ ಬಂದ ಸೋಮಣ್ಣನನ್ನು ಎಮ್ಮೆಲ್ಸಿ ಮಾಡಿ ಪಕ್ಷ ಕೈಹಿಡಿದಿದ್ದೇ ಸಾಕು. ಹಾಗೇ ದಕ್ಷಿಣ ಕರ್ನಾಟಕದ ಲಿಂಗಾಯತರೊಬ್ಬರನ್ನು ಮಂತ್ರಿ ಮಾಡಲೇಬೇಕು ಅನ್ನೋದಾದ್ರೆ ಅದಕ್ಕೆ ಒಂದಲ್ಲ ನಾಲ್ಕು ಬಾರಿ ಗೆದ್ದು ಬಂದಿರುವ ತುಮಕೂರಿನ ಸೊಗಡು ಶಿವಣ್ಣ ಇದ್ದಾರಲ್ಲವೇ? ಇದಲ್ಲದೇ ಸತತ ನಾಲ್ಕು ಬಾರಿಗೆ ಅಥವಾ ಮೂರನೇ ಅವಧಿಗೆ ಗೆದ್ದು ಎಮ್ಮೆಲ್ಲೆಯಾದ ಆನೇಕಲ್ ನಾರಾಯಣ ಸ್ವಾಮಿ, ಸಿ.ಟಿ.ರವಿ. ಮೈಸೂರಿನ ಶಂಕರಲಿಂಗೇಗೌಡ, ರಾಮದಾಸ್ ಮುಂತಾದವರಿದ್ದಾರೆ. ಆ ಕಾಲದಿಂದಲೂ ಪಕ್ಷಕ್ಕಾಗಿ ದುಡಿದವರದ್ದೇ ಪ್ರತ್ಯೇಕ ಪಟ್ಟಿಯಿದೆ. ಈ ಸಲದ ಸಂಪುಟ ಪುನರ್ರಚನೆಯಲ್ಲಿ ಇಂಥವರೆಲ್ಲರಿಗೂ ಮನ್ನಣೆ ಸಿಗಲೇಬೇಕೆಂಬುದು ಆರೆಸ್ಸೆಸ್ ಪಟ್ಟು.

ಅದಕ್ಕೊಂದು ಬಿಜೆಪಿ ವರಿಷ್ಠ ಮಂಡಳಿ ಮತ್ತು ಆರೆಸ್ಸೆಸ್ ಸೇರಿ ಪ್ರತ್ಯೇಕ ತಂತ್ರವೊಂದನ್ನು ಹೆಣೆದಿವೆ. ಆ ಪ್ರಕಾರ ಈಗಾಗಲೇ ಮಂತ್ರಿಗಿರಿ ಅನುಭವಿಸಿರುವ ಐದೂ ಮಂದಿ ಪಕ್ಷೇತರ ಸಚಿವರನ್ನು ಈ ಬಾರಿ ಕೈಬಿಡುವುದು ಅಥವಾ ಸಚಿವ ಸ್ಥಾನ ಬಿಟ್ಟು ಕೊಡುವಂತೆ ಪಕ್ಷೇತರರ ಮನವೊಲಿಸುವುದು, ಅದು ಸಾಧ್ಯವಾಗದ ಪಕ್ಷದಲ್ಲಿ ಕನಿಷ್ಠ ಮೂವರು ಪಕ್ಷೇತರ ಸಚಿವರಿಗಾದರೂ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು. ಜೊತೆಗೆ ರಾಮಚಂದ್ರಗೌಡರನ್ನು ಯೋಜನಾ ಆಯೋಗಕ್ಕೆ ಸಾಗಹಾಕಿ ಸದ್ಯ ಅಲ್ಲಿರುವ ಶಂಕರಮೂರ್ತಿಗೆ ಮಂತ್ರಿಗಿರಿ ಕಲ್ಪಿಸುವುದು.

ಈಗಾಗಲೇ ಮೂರು ಮಂತ್ರಿ ಹುದ್ದೆಗಳು ಬೇರೆ ಖಾಲಿ ಬಿದ್ದಿವೆ. ಸೋಮಣ್ಣ, ಈಶ್ವರಪ್ಪ ಮತ್ತು ಹಾಲಪ್ಪನವರಿಂದ ತೆರವಾದ ಈ ಮೂರೂ ಸಚಿವ ಪದವಿಗಳ ಜೊತೆಗೆ ಐವರು ಪಕ್ಷೇತರರನ್ನು ಕೆಳಕ್ಕಿಳಿಸಿ ಲೋಕೋಪಯೋಗಿ ಮಂತ್ರಿ ಉದಾಸಿಯನ್ನೋ ಅಥವಾ ಮೂಲ ಬಿಜೆಪಿಯರಲ್ಲ ಎಂಬ ಕಾರಣಕೊಟ್ಟು ಬೊಮ್ಮಾಯಿಯವರನ್ನೋ ತೆರವುಗೊಳಿಸಿದರೆ ಒಟ್ಟೂ ಸೇರಿ ಹತ್ತು ಮಂತ್ರಿಸ್ಥಾನಗಳು ಖಾಲಿ ಬೀಳುತ್ತವೆ. ಹಾಗೊಮ್ಮೆ ಕರಂದ್ಲಾಜೆ ಮತ್ತು ಸೋಮಣ್ಣರಿಗಾಗಿ ಯಡ್ಡಿ ಹಠಕ್ಕೆ ಬಿದ್ದಿದ್ದೇ ಆದರೆ ಪಕ್ಷ ಮತ್ತು ಸಂಘಪರಿವಾರ ಉಳಿದ ಎಂಟೂ ಸಚಿವ ಸ್ಥಾನಗಳಿಗೆ ತಮ್ಮವರನ್ನೇ ನೇಮಿಸಬಹುದು. ಸದ್ಯ ಯಡ್ಡಿ ಸಂಪುಟದಲ್ಲಿ ಇಬ್ಬರು ಒಕ್ಕಲಿಗ ಮಂತ್ರಿಗಳ ಪೈಕಿ ಅಶೋಕ್ ಮತ್ತು ಬಚ್ಚೇಗೌಡ ಇಬ್ಬರೂ ತಮಿಳುನಾಡು ಮೂಲದ ಯರಸು ಒಕ್ಕಲಿಗರು. ಮೈಸೂರು ಪ್ರಾಂತದ ಗಂಗಟಕಾರ, ಕುಂಚಿಟಿಗ, ದಾಸ ಒಕ್ಕಲಿಗರಿಗೆ ಅವಕಾಶ ಕಲ್ಪಿಸಬೇಕೆಂದರೆ ಸಿ.ಟಿ.ರವಿ ಜೊತೆ ವಿಮಲಾಗೌಡರಿಗೂ ಅವಕಾಶ ಕೊಡಬೇಕು. ತುಮಕೂರಿನ ಸೊಗಡು ಶಿವಣ್ಣ ಆನೇಕಲ್ ನಾರಾಯಣಸ್ವಾಮಿ ಮತ್ತು ಮೈಸೂರಿನ ಶಂಕರಲಿಂಗೇಗೌಡರನ್ನು ಆರೆಸ್ಸೆಸ್ ಒತ್ತಾಸೆ ಮೇರೆಗೆ ಮಂತ್ರಿ ಮಾಡಿದರೂ ಒಕ್ಕಲಿಗರ ಕೋಟಾ ಮತ್ತು ಕರಂದ್ಲಾಜೆಗೆ ಪರ್ಯಾಯವಾಗಿ ಮತ್ತೊಬ್ಬ ಮಹಿಳೆ ಎಂಬ ಕಾರಣಕ್ಕಾದರೂ ಸಿ.ಟಿ.ರವಿ ಜೊತೆ ವಿಮಲಾಗೌಡ ಮಂತ್ರಿಯಾಗಲೇಬೇಕು.

ಇಂಥದೊಂದು ಕಾರ್ಯತಂತ್ರವನ್ನು ಈಗಾಗಲೇ ಆರೆಸ್ಸೆಸ್ ಮತ್ತು ಪಕ್ಷದ ಪ್ರಮುಖ ಸಂತೋಷ್ ಸೇರಿಕೊಂಡು ನಿರ್ಧರಿಸಿದ್ದಾಗಿದೆಯಂತೆ. ಹಾಗೊಮ್ಮೆ ವಿಮಲಾಗೌಡರ ಬದಲು ಧಾರವಾಡದ ಶಾಸಕಿ ಸೀಮಾ ಮಸೂತಿ ಅಥವಾ ಪುತ್ತೂರಿನ ಮಲ್ಲಿಕಾ ಪ್ರಸಾದ್‌ರನ್ನು ಮಂತ್ರಿ ಮಾಡಬೇಕೆಂದರೆ ಅವರ‍್ಯಾರಿಗೂ ವಿಮಲಾಗೌಡದಷ್ಟು ಸೀನಿಯಾರಿಟಿಯಿಲ್ಲ. ವಿಮಲಾಗೌಡರಿಗೆ ಮಂತ್ರಿಗಿರಿ ಕೊಡೋದಾದ್ರೆ ತಾನು ಅದಕ್ಕೆ ಅಡ್ಡಬರೋಲ್ಲ ಎಂದು ಈಗಾಗಲೇ ಮಲ್ಲಿಕಾ ಪ್ರಸಾದ್ ಮತ್ತು ಸೀಮಾ ಮಸೂತಿ ಪಕ್ಷಾಧ್ಯಕ್ಷ ಈಶ್ವರಪ್ಪನವರಿಗೆ ಮುಖಾಮುಖಿ ಹೇಳಿಬಿಟ್ಟಿದ್ದಾರೆ.

ಬಹುಶಃ ಮುಖ್ಯಮಂತ್ರಿ ಯಡ್ಡಿ ಮತ್ತು ರಾಮಚಂದ್ರಗೌಡರ ಹೊರತಾಗಿ ವಿಮಲಾಗೌಡರ ಮಂತ್ರಿಗಿರಿಗೆ ಪಕ್ಷದಲ್ಲಾಗಲಿ, ಸಂಘಪರಿವಾರದಲ್ಲಾಗಲಿ ಯಾವುದೇ ತಕರಾರಿಲ್ಲ. ಅದಕ್ಕೆ ಯಡ್ಡಿ ಬಣ ಈಗ ಹೊಸದೊಂದು ಕ್ಯಾತೆ ತೆಗೆಯುತ್ತಿದೆ. ಅದು ಎಮ್ಮೆಲ್ಸಿಗಳಿಗೆ ಮಂತ್ರಿಗಿರಿ ಕೊಡಕೂಡದು ಎಂಬ ವಿತಂಡವಾದ. ಹಾಗಾದರೆ ಸೋಮಣ್ಣನಿಗೂ ಇದೇ ಸೂತ್ರ ಅನ್ವಯವಾಗಬೇಕು. ಆಗಲೂ ಅದು ಯಡ್ಡಿಗೆ ಮುಳುವಾಗುತ್ತದೆ.

ಶೋಭಾ ವರ್ಸಸ್ ವಿಮಲಾಗೌಡರ ಹಣಾಹಣಿಯಂತೂ ದಿನಕ್ಕೊಂದು ರಂಗು ಪಡೆಯುತ್ತಿದೆ.

• ರಾ. ಸೋಮನಾಥ್
ra.somanath2010@gmail.com

ಆನೇಕಲ್ ನಾರಾಯಣಸ್ವಾಮಿಗಾಗಿ ಉದಾಸಿಯಾ? ಬೊಮ್ಮಾಯಿಯಾ?


ಗೋವಿಂದ ಕಾರಜೋಳರನ್ನೂ ಕೈಬಿಟ್ಟು ಅದೇ ಎಡಗೈ ದಲಿತ ವರ್ಗದ ಆನೇಕಲ್ ನಾರಾಯಣಸ್ವಾಮಿಯನ್ನು ಮಂತ್ರಿ ಮಾಡಬೇಕೆಂಬ ಪ್ರಸ್ತಾವನೆಯೂ ಬಿಜೆಪಿ ಪಾಳೆಯದಲ್ಲಿತ್ತು. ಪಶುಸಂಗೋಪನಾ ಮಂತ್ರಿ ರೇವೂ ನಾಯಕ ಬೆಳಮಗಿಯನ್ನು ಕೆಳಗಿಳಿಸಬೇಕೆಂಬ ಒತ್ತಡವನ್ನೂ ಆರೆಸ್ಸೆಸ್ ಹಾಕಿತ್ತು. ಹಾಗೊಮ್ಮೆ ಕಾರಜೋಳರನ್ನು ಕೈಬಿಟ್ಟರೆ ಅದು ಇಡೀ ಉತ್ತರ ಕರ್ನಾಟಕದ ಮಾದಿಗ ಸಮೂಹವನ್ನು ಕೆರಳಿಸುತ್ತದೆ ಎಂಬ ಎಚ್ಚರಿಕೆಯನ್ನೂ ಈಶ್ವರಪ್ಪ ಕೊಟ್ಟರು. ಬೆಳಮಗಿಯ ಬೆನ್ನಿಗೆ ಲಂಬಾಣಿ ಸಮೂಹವಿದೆಯಾದ್ದರಿಂದ ಅದೂ ಕೂಡಾ ಅಪಾಯವೆಂಬುದು ಪಕ್ಷದ ಪ್ರಮುಖ ಸಂತೋಷ್ ಲೆಕ್ಕಾಚಾರವಾಗಿತ್ತು. ಹೀಗಾಗಿ ಆನೇಕಲ್ ನಾರಾಯಣಸ್ವಾಮಿ ಮತ್ತು ಸೊಗಡು ಶಿವಣ್ಣನಂಥವರಿಗೆ ಅವಕಾಶ ಕಲ್ಪಿಸಬೇಕೆಂದರೆ ಒಂದೋ ಉದಾಸಿಯನ್ನು ಕೆಳಕ್ಕಿಳಿಸಬೇಕು ಅಥವಾ ಬೊಮ್ಮಾಯಿಗೆ ಕೊಕ್ ಕೊಡಬೇಕೆಂಬುದು ಶೆಟ್ಟರ್ ಬಣದ ಒತ್ತಾಯವಾಗಿತ್ತು. ಉದಾಸಿ ಮತ್ತು ಬೊಮ್ಮಾಯಿ ಮೂಲತಃ ಜನತಾದಳದಿಂದ ವಲಸೆ ಬಂದವರಾದರೂ ಯಡ್ಡಿಯ ಪರಮಾಪ್ತರು. ಸದ್ಯ ಕೋರ್ ಕಮಿಟಿಯಲ್ಲಿ ಯಡ್ಡಿಯದೇ ಪ್ರಾಬಲ್ಯವಿದೆಯಾದ್ದರಿಂದ ಬೊಮ್ಮಾಯಿ ಮತ್ತು ಉದಾಸಿಯನ್ನು ಉಳಿಸಿಕೊಳ್ಳುತ್ತಾರಾ ಎಂಬುದೇ ಅಸಲಿ ಪ್ರಶ್ನೆ.



ಸಂಪುಟ ಪುನರ್ರಚನೆಯೆಂದರೆ ಅದು ಯಡ್ಡಿಯ ಅಳಿವುಉಳಿವಿನ ಪ್ರಶ್ನೆಯಲ್ಲದೇ ಮತ್ತೇನು?

ವಾಯುವ್ಯ ಸಾರಿಗೆ ಸಂಸ್ಥೆಯಲ್ಲೊಬ್ಬ ಶನಿ ಸಾವ್ಕಾರ!

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಕೇಂದ್ರೀಕರಣ ನೀತಿ ಸಂಪೂರ್ಣ ಉಲ್ಟಾ ಹೊಡೆದಿದೆ. ಪ್ರಯಾಣಿಕರು ಹಾಗೂ ಕಾರ್ಮಿಕರ ಹಿತಕ್ಕೋಸ್ಕರ ಲಾಭದ ಉದ್ದೇಶದಿಂದ ಈಶಾನ್ಯ ವಾಯುವ್ಯ ಅಂತ ವಿಭಜನೆಯಾಗಿದ್ದ ಸಂಸ್ಥೆ ಅದರಿಂದಾಗಿಯೇ ನಷ್ಟ ಅನುಭವಿಸಬೇಕಾಗಿ ಬಂದಿದೆ. ಪ್ರಸ್ತುತ ವಾಯುವ್ಯ ಸಾರಿಗೆ ಸಂಸ್ಥೆಗೆ ಅಧ್ಯಕ್ಷನಾಗಿ ವಕ್ಕರಿಸಿರುವ ಮಲ್ಲಿಕಾರ್ಜುನ ಸಾವ್ಕಾರ ನೆಂಬಾತ ಗೆದ್ದಲಿನಂತೆ ಕೊರೆಯಹತ್ತಿದ್ದಾನೆ.




ಜಗದೀಶ್ ಶೆಟ್ಟರ್ ಮನೆಯಲ್ಲಿ ಕಾರಕೂನಿಕೆ ಮಾಡುತ್ತಿದ್ದ ಸಾವ್ಕಾರ ಆ ಬಲದಿಂದಲೇ ಹುಬ್ಬಳ್ಳಿಯಲ್ಲಿರುವ ವಾಯುವ್ಯ ಸಾರಿಗೆ ಸಂಸ್ಥೆಗೆ ಅಧ್ಯಕ್ಷನಾಗಿ ಅಟಕಾಯಿಸಿಕೊಂಡಿದ್ದ. 'ಸಂಸ್ಥೆಗೆ ಲಾಭದ ದಿಕ್ಕು ತೋರುಸ್ತೀನಿ' ಅನ್ನುತ್ತಲೇ ಭ್ರಷ್ಟ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸ್ವ-ಲಾಭದ ಹಾದಿಹುಡುಕತೊಡಗಿದ. ಹಡಬೆ ಹಣ ಶೇಖರಣೆಯಾಗುತ್ತಲೇ ಇಂಗ್ಲೆಂಡ್-ಫ್ರಾನ್ಸ್ ಅಂತ ಪ್ರವಾಸ ಮಾಡಲಾರಂಭಿಸಿದ ಈತ ಇದೀಗ ಮುಖ್ಯ ಸಂಚಾರಿ ವ್ಯವಸ್ಥಾಪಕ ಅಶೋಕ್ ಕುಮಾರನೊಡಗೂಡಿ ದುಬೈ ಪ್ರವಾಸ ಹೊಟಿರುವ ಉದ್ದೇಶ ಆಯಾ ದೇಶಗಳ ಸಾರಿಗೆ ವ್ಯವಸ್ಥೆ ಮತ್ತು ರಸ್ತೆ ಸಮೀಕ್ಷೆಯಂತೆ! ಇದೆಲ್ಲಾ ಹಾಳಾಗಿ ಹೋಗಲಿ ಅದರಿಂದ ವಾಯುವ್ಯ ಸಾರಿಗೆ ಸಂಸ್ಥೆಗೆ ಸಹಾಯವಾಗಿದೆಯ ಅಂತ ನೋಡಹೋದರೆ ದುರಂತಗಳೇ ಪ್ರತ್ಯಕ್ಷವಾಗುತ್ತವೆ.

ಈತನ ದರ್ಬಾರು ಹೇಗಿದೆಯೆಂದರೆ ತಿಂಗಳೊಂದರ ಖರ್ಚೇ ಐದುಲಕ್ಷದ ಗಡಿ ತಲುಪುತ್ತದೆ. ಮೂರು ಮಂದಿ ಆಪ್ತ ಸಹಾಯಕರು, ಎರಡು ಮಂದಿ ಡ್ರೈವರ್‌ಗಳು, ಮನೆಗೆ ಇಬ್ಬರು ಸೆಕ್ಯೂರಿಟಿ ಗಾರ್ಡುಗಳು-ಒಟ್ಟಾರೆ ಸಾವ್ಕಾರನದ್ದು ಹಡಬೆ ಹಣದಲ್ಲಿ ಅದ್ಧೂರಿ ಬದುಕು!

ಇನ್ನು ವಾಯುವ್ಯ ಸಾರಿಗೆ ಸಂಸ್ಥೆಗೆ ಬಂದರೆ 7 ಡಿವಿಜನ್ ಹಾಗೂ 34 ಡಿಪೋಗಳನ್ನ ಹೊಂದಿದೆ. 23 ಸಾವಿರ ಮಂದಿ ಕೆಲಸ ಮಾಡುತ್ತಾರೆ. ಇದರ ಅಧೀನದಲ್ಲಿ ಹುಬ್ಬಳ್ಳಿಯಲ್ಲೊಂದು ಬಸ್ ದುರಸ್ತಿ ಹಾಗೂ ಬಾಡಿ ಬಿಲ್ಡಿಂಗ್ ಕಾರ್ಯಾಗಾರವೊಂದಿದೆ. ಇದರಲ್ಲಿದ್ದ ಸಾವಿರಕ್ಕೂ ಹೆಚ್ಚು ಕಾರ್ಮಿಕರಲ್ಲಿ ಬಹಳಷ್ಟು ಜನರನ್ನು ಹೊರದಬ್ಬಿ 331 ಮಂದಿಯನ್ನ ಮಾತ್ರ ಶನಿ ಸಾವ್ಕಾರ ಉಳಿಸಿಕೊಂಡಿದ್ದಾನೆ. ಈ ಕಾರ್ಯಾಗಾರದಲ್ಲಿ ಒಂದು ಬಸ್‌ಗೆ ಬಾಡಿ ಬಿಲ್ಡಿಂಗ್ ಮಾಡಲು 13 ಲಕ್ಷ ಖರ್ಚು ತಗುಲುತ್ತದೆ. ಆದರೆ ಕಮಿಷನ್ ಆಸೆಗೆ ಬಿದ್ದ ಸಾವ್ಕಾರ ಈ ಕೆಲಸವನ್ನ ಧಾರವಾಡದಲ್ಲಿರುವ ಟಾಟಾ ಒಡೆತನದ ಟೆಲ್ಕೊ ಕಂಪೆನಿಯ ಮಾರ್ಕ್ಸ್ ಪೋಲೊಗೆ ವಹಿಸಿದ್ದಾನೆ. ಇದರಲ್ಲೀಗ ಪ್ರತೀ ಬಸ್ ಬಾಡಿ ಬಿಲ್ಡಿಂಗ್‌ಗೆ 18 ಲಕ್ಷ ತಗಲುತ್ತದೆ! ಇದು ಸಾವ್ಕಾರ ಸಾರಿಗೆ ಸಂಸ್ಥೆಯನ್ನು ಉದ್ಧಾರವಾಗಿಸುತ್ತಿರುವ ಪರಿ!

ಇದರಿಂದಾಗಿ ಕಾರ್ಮಿಕರ ಭವಿಷ್ಯ ಹೊಯ್ದಾಡಹತ್ತಿದೆ. ಈಗಾಗಲೇ ಬಸ್ ದುರಸ್ತಿ ಮತ್ತು ಬಾಡಿ ಬಿಲ್ಡಿಂಗ್ ಕಾರ್ಯಾಗಾರವನ್ನ ಶಾಶ್ವತವಾಗಿ ಮುಚ್ಚಲು ತಯಾರಿ ನಡೆದಿದೆ. ಅದರ ಅಂಗವಾಗಿ ಸೀಟ್ ಕವರ್, ಟಯರ್, ಟ್ಯೂಬ್, ಬ್ಯಾಟರಿ, ಅಲ್ಯೂಮಿನಿಯಂ ಪ್ಲೇಟ್ ಖರೀದಿಗೆ ಸಾವ್ಕಾರನ ಕಡೆಯಿಂದ ತಡೆ ಬಿದ್ದಿದೆ. ಈಗಿರುವ ದಾಸ್ತಾನು ಮುಗಿಯಿತೆಂದರೆ ಹಾಲಿ ಇರುವ 331 ಮಂದಿ ಕೆಲಸಗಾರರ ಕತೆಯೂ ಮುಗಿದಂತೆಯೇ!

ಇನ್ನು ಬಸ್ ಖರೀದಿಯ ನೆಪದಲ್ಲೂ ಕಾಸು ಹೊಡೆಯುವ ಕೆಲಸವನ್ನು ಸಾವ್ಕಾರ ಶುರುವಿಟ್ಟಿದ್ದಾನೆ. ಆದರನ್ವಯ ಸಾರಿಗೆ ಸಂಸ್ಥೆಯ 65 ಮಿನಿ ಬಸ್‌ಗಳನ್ನು 1 ರಿಂದ 1.50 ಲಕ್ಷ ರೂಪಾಯಿಗಳಿಗೆ ಮಾರಿಬಿಟ್ಟಿದ್ದಾನೆ. ಕಳೆದ ವರ್ಷಗಳಿಂದ ಇಲ್ಲಿನ ಸಾರಿಗೆ ಸಂಸ್ಥೆಯ ಕಳ್ಳ-ಖದೀಮರೊಂದಿಗೆ ನಂಟುಹೊಂದಿದ್ದ ಸವಣೂರ ಎಂಬಾತನೀಗ 65 ಬಸ್‌ಗಳ ಒಡೆಯನಾಗಿಬಿಟ್ಟಿದ್ದಾನೆ. ಇದೊಂದು ಡೀಲ್‌ನಲ್ಲೇ ಪಾಪಿ ಸಾವ್ಕಾರ ಲಕ್ಷ-ಲಕ್ಷ ಹಣ ಎಣಿಸಿದ್ದಾನೆ.




ಇದೆಲ್ಲ ಇರಲಿ, ಹಡೆಬಿಟ್ಟ ಹಣದಿಂದ ಹಾಯಾಗಿರುವ ಸಾವ್ಕಾರ ಕೆಲಸಗಾರರನ್ನಾದರೂ ಚೆಂದಗೆ ನೋಡಿಕೊಳ್ತಾನ ಅಂತ ನೋಡಹೋದರೆ ಅಲ್ಲೂ ಈತನ ಪೀಡಕ ಗುಣಗಳೇ ಎದುರಾಗುತ್ತವೆ. ಸಂಸ್ಥೆಯ ಕಾರ್ಮಿಕರಿಗೆ 2009ನೇ ಸಾಲಿನ 9 ತಿಂಗಳ ತುಟ್ಟಿಭತ್ಯೆ ಹಾಗೂ 2010ರ 5 ತಿಂಗಳ ತುಟ್ಟಿ ಭತ್ಯೆಯನ್ನು ಬಾಕಿಯಿಟ್ಟುಕೊಂಡು ಸತಾಯಿಸುತ್ತಿದ್ದಾನೆ. ಈತನ ವಿರುದ್ಧ ದನಿಯೆತ್ತಿದ ಕಾರ್ಮಿಕ ನಾಯಕರನ್ನು ಎತ್ತಂಗಡಿ ಮಾಡಿ, ಕೋರ್ಟು-ಕಚೇರಿ ಅಂತ ಕಾಟ ಕೊಡುವುದು ಮಾಮೂಲಿ ಸಂಗತಿ. ಹಾಗೂ ಹೀಗೂ ಹುಟ್ಟಿಕೊಳ್ಳುವ ಸಂಘಟನೆಗಳನ್ನು ಸಹ ಹಣಬಲದಿಂದ ಹತ್ತಿಕ್ಕುವುದು ಸಾವ್ಕಾರನಿಗೆ ನೀರು ಕುಡಿದಷ್ಟೇ ಸಲೀಸಾಗಿ ಹೋಗಿದೆ. ಈ ಕಾರಣದಿಂದಲೇ ಕಾರ್ಮಿಕ ಪರ ಸಂಘಟನೆ (ಬಿಎಂಎಸ್)ಯ ವಲಯ ಅಧ್ಯಕ್ಷ ಎಂ.ಡಿ. ದೊಡ್ಡಗೌಡ ಹಾಗೂ ಸನದಿ ಎಂಬವರು ಸಾವ್ಕಾರನ ಎಂಜಲು ತಿಂದು ತೆಪ್ಪಗಿದ್ದಾರೆ.

ಈ ರೀತಿಯಾಗಿ ಸಾವ್ಕಾರ ಹೆಜ್ಜೆಹೆಜ್ಜೆಗೂ ವಾಯುವ್ಯ ಸಾರಿಗೆ ಸಂಸ್ಥೆಯನ್ನು ಹಳ್ಳ ಹಿಡಿಸುತ್ತಿದ್ದಾನೆ. ಸಂಸ್ಥೆಯ ಅಭಿವೃದ್ಧಿಯತ್ತ ಕಡೆಗಣ್ಣಲ್ಲೂ ನೋಡದ ಈತ ಪುಗಸಟ್ಟೆ ಫಾರಿನ್ ಟೂರ್ ಹಾಕಿ, ಹಡಬೆ ಹಣದಲ್ಲಿ ಮಸಾಜು-ಮಾಲೀಷ್ ಅಂತ ಹಾಯಾಗಿದ್ದಾನೆ. ಇಂಥ ಭ್ರಷ್ಟನಿಗೆ ತಕ್ಕ ಶಿಕ್ಷೆ ನೀಡುವ ದರ್ದು ಸಚಿವ ಅಶೋಕ್ ಮೇಲಿದೆ.

ಇಂಥವನನ್ನು ಪೊರೆಯುತ್ತಿರುವ ಜಗದೀಶ್ ಶೆಟ್ಟರ್‌ಗಾದರೂ ಮರ್ಯಾದೆ ಬೇಡವಾ?

ಅಡ್ನಾಡಿ ಅಧಿಕಾರಿಗಳು


ಪಾಟೀಲ್

ಕಾರ್ಮಿಕರು ಸತ್ತರೂ, ನಿವೃತ್ತಿ ಹೊಂದಿದರೂ ಪರಿಹಾರ ಭತ್ಯೆ ಕೊಡಲು ಸಾವ್ಕಾರನ ಬಳಿ ಹಣವಿಲ್ಲ, ಆದರೆ ತನ್ನ ಹಿಂದೆ ಬಾಲ ಅಲ್ಲಾಡಿಸುವ ಅಧಿಕಾರಿಗಳ ದೇಖರೇಖಿಗೆ ಮಾತ್ರ ಯಾವ ಕೊರತೆಗಳೂ ಕಾಡುವುದಿಲ್ಲ!

ಇಂಥ 26 ಶ್ವಾನಸದೃಶ ಅಧಿಕಾರಿಗಳ ಹಿಂಡು ಸಾವ್ಕಾರನಿಗೆ ಸಾಥ್ ನೀಡುತ್ತಿದೆ. ಇವರಿಗೆಲ್ಲ ತಪ್ಪದೆ ಪ್ರತೀ ತಿಂಗಳು 18 ಲಕ್ಷದಷ್ಟು ಪಗಾರ, ಮನೆ ಬಾಡಿಗೆ, ಮೊಬೈಲ್ ಬಿಲ್, ವಾಹನ ಭತ್ಯೆಗಳನ್ನು ಸಾವ್ಕಾರ ನೀಡುತ್ತಿದ್ದಾನೆ. ಸಾವ್ಕಾರನ ಶ್ರೇಯಸ್ಸಿಗಾಗಿ ನಿಯತ್ತನ್ನೇ ಮುಡಿಪಾಗಿಟ್ಟಿರುವ ಈ 26 ಅಧಿಕಾರಿಗಳು ಕಳೆದ 20 ವರ್ಷಗಳಿಂದ ಇಲ್ಲೇ ಮೇಯುತ್ತಿದ್ದಾರೆ. ಪ್ರಧಾನ ವ್ಯವಸ್ಥಾಪಕ ಎಚ್.ಬಾಬುರಾವ್, ಮುಖ್ಯ ಸಂಚಾರ ವ್ಯವಸ್ಥಾಪಕ ಕುಮಾರ್ ಎಂಬುವವರು ಸಾವ್ಕಾರನ ಏಜೆಂಟ್‌ಗಳಂತೆ ಕೆಲಸ ಮಾಡುತ್ತಿದ್ದಾರೆ. ಕಾರ್ಯಾಗಾರ-ಡಿಪೋಗಳಲ್ಲಿ ಆಡಿಗಡಿಗೆ ಕಳ್ಳತನವಾಗುತ್ತಿದ್ದರೂ ಮುಖ್ಯ ವ್ಯವಸ್ಥಾಪಕ ಎಸ್.ಬಿ.ದೊಡ್ಡಮನಿ ಎಂಬ ಮಹಾಶಯ ಏನೂ ನಡೆದಿಲ್ಲವೆಂದು ಸರ್ಟಿಫಿಕೇಟ್ ಕೆತ್ತುತ್ತಿದ್ದಾನೆ.

ಇನ್ನು ಇಲಾಖೆಯ ವ್ಯವಸ್ಥಾಪಕ ನಿರ್ದೇಶಕನಾಗಿ ಯಡ್ಡಿಯ ಖಾಸಾ ನೆಂಟ ಎ.ಎಸ್.ಪಾಟೀಲನೆಂಬಾತ ವಕ್ಕರಿಸಿದ್ದಾನೆ. ತಿಂಗತಿಂಗಳು 41,856 ರೂಪಾಯಿ ಸಂಬಳ ಪಡೆಯುವ ಈತ ಹೇಗೆ ಬೇಕೋ ಹಾಗೆಲ್ಲ ವೈಭೋಗ ಅನುಭವಿಸುತ್ತಿದ್ದಾನೆ. ಕಳೆದ 20 ವರ್ಷಗಳಿಂದ ಇಲ್ಲೇ ಠಿಕಾಣಿ ಹೂಡಿರುವ ಪ್ರಧಾನ ವ್ಯವಸ್ಥಾಪಕ ಎಚ್.ಬಾಬುರಾವ್, ಮುಖ್ಯ ಲೆಕ್ಕಾಧಿಕಾರಿ ಎಸ್ ಮಹಾದೇವ್ ಸೇರಿದಂತೆ ಬಹುತೇಕರದ್ದು ಹಣ ಹೊಡೆಯುವುದೇ ಪ್ರಮುಖ ದಂಧೆ.

ಇಂಥ ಹಲಾಲುಕೋರರ ನಡುವೆ ಸಂಸ್ಥೆ ಅಭಿವೃದ್ಧಿ ಹೊಂದಬೇಕೆಂದರೆ ಹೇಗಾದೀತು?

ಮಿತ್ತಲ್, ಪೋಸ್ಕೋ...

▶▶ 2ರಿಂದ

ಬಳಕೆಯ ಪ್ರಮಾಣವನ್ನು ಹೆಚ್ಚಿಸುವ ಸಾಧ್ಯತೆ ಅತಿಹೆಚ್ಚು. ಹೀಗಾಗಿಯೇ ಪ್ರಪಂಚದ ಎಲ್ಲಾ ಸ್ಟೀಲ್ ಉದ್ಯಮಗಳು ಏಷಿಯಾ ದೇಶಗಳನ್ನೇ ಗುರಿಯಾಗಿರಿಸಿಕೊಂಡಿದೆ.


ಆದರೆ ಸ್ಟೀಲ್ ಕಂಪನಿಗಳ ಲಾಭದಾಯಕತೆಗೆ ಅತಿದೊ[...] ಹೊಡೆತ ನೀಡಿದ್ದು 2008ರಲ್ಲಿ ಪ್ರಾರಂಭವಾದ ಹಣಕಾಸು ಬಿಕ್ಕಟ್ಟು. ಆದರೆ ಸರ್ಕಾರಗಳ ದಲ್ಲಾಳಿ ನೀತಿಯಿಂದಾ[...] ಮರುಜೀವ ಪಡೆದುಕೊಂಡ ಸ್ಟೀಲ್ ಕಂಪನಿಗಳು 2009ರ[...] ಮತ್ತೊಂದು ಬಿಕಟ್ಟನ್ನು ಎದುರಿಸಿದವು. ಅದೇ ಅದಿರು ಸರಬರಾಜಿನ ಬಿಕ್ಕಟ್ಟು. ಸ್ಟೀಲ್ ಉತ್ಪಾದಿಸಲು ಪ್ರಮುಖವಾ[...] ಬೇಕಿರುವುದು ಕಬ್ಬಿಣ ಅದಿರು. ಇಂದು ಕಬ್ಬಿಣ ಅದಿರು ಸರಬರಾಜು ಉದ್ಯಮದ ವೇಲ್, ಬಿಹೆಚ್‌ಪಿ ಬಿಲಿಟನ್ ಮತ್ತು ರಿಯೋ ಟಿಂಟೋ ತರಹದ ಕಲವೇ ಕೆಲ[...] ಕಂಪನಿಗಳ ಒಡೆತನದಲ್ಲಿವೆ. ಈವರೆಗೆ ಇವು ವರ್ಷಕ್ಕೊಮ್ಮೆ ತಮ್ಮ ಅದಿರು ದರವನ್ನು ಪುನರ್ ವಿಮರ್ಶಿಸುತ್ತಿದ್ದವು. ಆದರೆ ಇದೇ ಜನವರಿಯಲ್ಲಿ ಅವು ಪರಸ್ಪರ ಮಾತಾ[...] ಕೊಂಡು ಏಕಾಏಕಿ ಮೂರು ತಿಂಗಳಿಗೊಮ್ಮೆ ದರ[...] ಪರಿಷ್ಕರಣೆ ಮಾಡುವ ನೀತಿಯನ್ನು ಪ್ರಕಟಿಸಿದವು. ಇದರಿಂ[...] ಕಬ್ಬಿಣದ ಅದಿರು ಸರಬರಾಜು ಏಕಾಏಕಿ ಶೇ.90ರಷ್ಟು ಹೆಚ್ಚಾಯಿತು. 2009ರಲ್ಲಿ ಒಂದು ಟನ್ ಅದಿರಿಗೆ ಕೇವಲ 50 ಡಾಲರ್ ಇದ್ದದ್ದು 2009ರ ಅಂತ್ಯದ ವೇಳೆಗೆ ಟನ್ನಿ[...] 120 (4,800ರೂ.) ಡಾಲರ್‌ಗಳಿಗೇರಿತು. ಇದರಿಂ[...] ಸ್ಟೀಲ್ ಕಂಪನಿಗಳ ಲಾಭದ ದರದ ಮೇಲೂ ಪೆಟ್ಟುಬಿದ್ದಿತು. ಇದರಿಂದ ಶಾಶ್ವತವಾಗಿ ಹೊರಬರುವ ಸಲುವಾಗಿಯೇ ಮಿತ್ತಲ್, ಪೋಸ್ಕೊದಂಥ ಕಂಪನಿಗಳು ಲಾಭವನ್ನು ಹೆಚ್[...] ಮಾಡಿಕೊಳ್ಳಬೇಕೆಂದರೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲೇಬೇಕಿತ್ತು. ಅದರ ಸಲುವಾಗಿಯೇ ಅಗ್ಗದ ದರದ[...] ಅದಿರು, ನೀರು, ವಿದ್ಯುತ್ತನ್ನು ಪೂರೈಸುವ ಮತ್ತು ಕಡಿಮೆ ಬಡ್ಡಿ ದರದಲ್ಲಿ ಬಂಡವಾಳ ನೀಡುವ ಮತ್ತು ಖಚಿ[...] ಮಾರುಕಟ್ಟೆಯೂ ಸಿಗುವ ದೇಶಗಳನ್ನು ಅರಸುತ್ತಾ ಹೊರಟವು.

ಇದಕ್ಕೆ ದಾರಿಯಲ್ಲಿ ಎದುರಾದದ್ದು ಯಡಿಯೂರಪ್ಪ. ಈಗ ಈ ದಲ್ಲಾಳಿ ಮುಖ್ಯಮಂತ್ರಿ ಅಗ್ಗದ ದರದಲ್ಲಿ ದಿನ[...] 40 ಮಿಲಿಯನ್ ಗ್ಯಾಲನ್ ತುಂಗಭದ್ರಾ ನೀರು, 1[...] 000 ಎಕರೆಗೂ ಹೆಚ್ಚು ಜಮೀನು ಮತ್ತು ಪ್ರತ್ಯೇಕ ಗ[...] ಎಲ್ಲವನ್ನು ಖಾತರಿಪಡಿಸಿ ಪೋಸ್ಕೊ ಹಾಗೂ ಮಿತ್ತಲ್ ಅನ್ನು ಕರ್ನಾಟಕ್ಕೆ ಕರೆತಂದಿದ್ದಾರೆ. ಇವುಗಳು ವಿಶೇಷ ಆರ್ಥಿಕ ವಲಯದಲ್ಲಿ ತಲೆ ಎತ್ತುವುದರಿಂದ ಇದರಿಂ[...] ನಾಡಿಗೆ ತೆರಿಗೆ ಲಾಭವೂ ಆಗುವುದಿಲ್ಲ. 10,000 ಎಕರೆ ಉಳುವ ಯೋಗ್ಯ ಭೂಮಿ ರೈತರಿಂದ ಕಸಿಯಲಾಗುವುದರಿಂದ ಅದನ್ನೇ ಆಧರಿಸಿ ಬದುಕುತ್ತಿರು[...] ಲಕ್ಷಕ್ಕೂ ಹೆಚ್ಚು ರೈತರು ಬೀದಿಪಾಲಾಗುತ್ತಾರೆ. ಇದ[...] ಜೊತೆಗೆ ರೈತರಿಗೆ ದೊರಕಬೇಕಿದ್ದ ಡ್ಯಾಂ ನೀರು [...] ಕಂಪನಿಗಳ ಪಾಲಾಗಿ ತುಂಗಭದ್ರಾ ನೀರನ್ನೇ ಆಧರಿ[...] ಬದುಕುತ್ತಿರುವ 10 ಲಕ್ಷಕ್ಕೂ ಹೆಚ್ಚು ರೈತರ ಬದುಕು ಆತ್ಮಹತ್ಯೆಗೆ ಹತ್ತಿರವಾಗುತ್ತದೆ. ವಿದ್ಯುತ್ತಿನದ್ದೂ ಇದೇ ಕ[...]

ಜನರ ಬದುಕು ಏನೇ ಆಗಲಿ, ಇದರಿಂದ ಕರ್ನಾಟ[...] ಕ್ಕಂತೂ ಅಭಿವೃದ್ಧಿಶೀಲವೆಂಬ ಪಟ್ಟ. ಯಡಿಯೂರಪ್ಪ[...] ಯಶಸ್ವೀ ಮುಖ್ಯಮಂತ್ರಿಯೆಂಬ ಹೆಸರೂ ದಕ್ಕುತ್ತದೆ. ನ[...] ನಾಜೂಕಯ್ಯಗಳಾದ ಯಡಿಯೂರಪ್ಪಗಳು ಮಿತ್ತಲ್ ಮ[...] ಪೋಸ್ಕೊಗಳಿಗೆ ನವನಾಡಪ್ರಭುಗಳ ಪಟ್ಟ ಕಟ್ಟುತ್ತಾರೆ. ಇದೆ[...] ಆದ ಮೇಲೆ ಕನ್ನಡಿಗರಿಗೆ ಸ್ವರ್ಗಕ್ಕೆ ಮೂರೇ ಗೇಣಲ್ಲವೇ[...]

BMTC ಬಾಟ್ಲು ವೆಂಕಟ ಟಿ.ಸಿ.ಗಳಿಗೆ ಸಂಕಟ!

ಯಾವುದೇ ಸರ್ಕಾರಿ ಇಲಾಖೆಯಿರಲಿ, ಕೈ-ಬಾಯಿ ಶುದ್ಧವಿಟ್ಟುಕೊಂಡು ಆನ್ಯರಿಗೆ ತಲೆನೋವಾಗದೆ ಕೆಲಸ ಮಾಡುವವರು ಬಲು ವಿರಳ. ಬೆಂಗಳೂರು ಸಾರಿಗೆ ಸಂಸ್ಥೆ (BMTC)ಯೂ ಇದಕ್ಕೆ ಹೊರತಾಗಿಲ್ಲ, ಕೆ.ಆರ್.ಮಾರ್ಕೆಟ್ ವಲಯದ ಬಿಎಂಟಿ.ಸಿ.ಯಲ್ಲಿ ಎಟಿಎಸ್ ಆಗಿರುವ ವೆಂಕಟಸ್ವಾಮಿ ತನ್ನ ಹಣಬಾಕತನ, ಗುಂಡಿನ ಗೀಳು ಮುಂತಾದ ಹಲವಾರು 'ಕಾಯಿಲೆ'ಗಳ ಮೂಲಕ ಅಧೀನ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದ್ದಾನೆ.




ಈತ ತನ್ನ ಅಧೀನದಲ್ಲಿ ಬರುವ ಟಿ.ಸಿ.(ಸಂಚಾರ ನಿಯಂತ್ರಕರು)ಗಳನ್ನು ಹೆಜ್ಜೆಹೆಜ್ಜೆಗೂ ಕಾಡುತ್ತಿದ್ದಾನೆ. ಟಿ.ಸಿ.ಗಳು ಕಾಲಕಾಲಕ್ಕೆ ಈತನಿಂದ ಬರುವ ಹಣ-ಹೆಂಡದ ಬೇಡಿಕೆಗಳನ್ನ ತೀರಿಸಲೇಬೇಕು. ಸರಿಯಾಗಿ ವಾರಕ್ಕೆ ಅಥವಾ 15 ದಿನಗಳಿಗೊಮ್ಮೆ ದುಬಾರಿ ಬೆಲೆಯ ಬಾಟಲುಗಳನ್ನ ವೆಂಕಟನಿಗೆ ಸಮರ್ಪಿಸಲೇಬೇಕು!

ಸಿಕ್ಕಾಪಟ್ಟೆ ಬೇನಾಮಿ ಆಸ್ತಿ ಮಾಡಿಕೊಂಡಿರುವ ವೆಂಕಟ E.C.K.E.B ಶುಲ್ಕ ಪಾವತಿಗೆ ಟಿ.ಸಿ.ಗಳ ಜೇಬನ್ನೇ ನಂಬಿಕೊಂಡಿದ್ದಾನೆ. ಕಡಿಮೆಯೆಂದರೆ ತಿಂಗಳಿಗೆ 200ರಿಂದ 500ರವರೆಗೆ ಟಿ.ಸಿ.ಗಳಿಂದ ವಸೂಲಿ ಮಾಡುತ್ತಾನೆ. ಒಂದೊಂದು ಕಂಟ್ರೋಲ್ ಪಾಯಿಂಟ್‌ಗೆ ಟಿ.ಸಿ.ಗಳನ್ನು ನೇಮಿಸಲು 3000ದಿಂದ 5000 ಕಿತ್ತುಕೊಳ್ಳುತ್ತಾನೆ. ಒಂದರ್ಥದಲ್ಲಿ ತನ್ನ ಅಧಿಕಾರ ವ್ಯಾಪ್ತಿಯ ಪ್ರತೀ ಕೆಲಸವನ್ನು ಈತ ಪಕ್ಕಾ ಬ್ಯುಸಿನೆಸ್ ಮಾಡಿಕೊಂಡಿದ್ದಾನೆ.

ಈತನ ಲಂಚಗುಳಿತನ ಯಾವ ಹಂತ ತಲುಪಿದೆಯೆಂದರೆ, ಅಧಿಕಾರಿಗಳು ನ್ಯಾಯಯುತವಾಗಿ ದಕ್ಕಬೇಕಿರುವ ರಜೆಗಳಿಗೂ ಪರದಾಡಬೇಕಾಗಿದೆ. ಸಮಸ್ಯೆಯಿದ್ದರೂ, ಅದಕ್ಕೆ ತಕ್ಕುದಾದ ದಾಖಲೆಗಳನ್ನ ಒದಗಿಸಿದರೂ 500ರಿಂದ 1000 ರೂಪಾಯಿಗಳಿಗೆ ಡಿಮ್ಯಾಂಡ್ ಇಡುತ್ತಾನೆ. ಅಷ್ಟು ಕೊಟ್ಟರೆ ಮಾತ್ರ ಅನುಮತಿ ನೀಡಿ ನಖರಾ ಮಾಡಿದವರಿಗೆ ಗೈರುಹಾಜರಿ ಗೀಚಿ ದಾರ್ಷ್ಟ್ಯ ಮೆರೆಯುತ್ತಿದ್ದಾನೆ.

ಇಂಥಾ ವೆಂಕಟ ಕಮಾಯಿ ಕೈಂಕರ್ಯಕ್ಕೆ ಎತ್ತಿಕೊಂಡಿರುವ ಮತ್ತೊಂದು ಪ್ರಬಲವಾದ ಅಸ್ತ್ರ: ವರ್ಗಾವಣೆ. ಟಿ.ಸಿ.ಗಳನ್ನು ಕೂಡಿಸಿಕೊಂಡು ವರ್ಗಾವಣೆ ಆದೇಶ ಬರ್ತಿದೆ ಅಂತೆಲ್ಲ ಹೆದರಿಸಿ 5000ದವರೆಗೆ ಡೀಲು ಕುದುರಿಸಿಕೊಳ್ಳುತ್ತಾನೆ. ಕೆಲ ಟಿ.ಸಿ.ಗಳು ಈತನ ಪಿಂಪ್‌ಗಳಂತೆ ವರ್ತಿಸುವುದೂ ಇದೆ. ಅಂಥವರಿಂದ ಮಿಕಗಳನ್ನು ತಲಾಶ್ ಮಾಡುವ ವೆಂಕಟ ವೈಯಕ್ತಿಕ ತೆವಲುಗಳಿಗೆ ಹಣ ಹೊಂದಿಸಿಕೊಳ್ಳುತ್ತಾನೆ.


ವೆಂಕಟ

ವಸೂಲಿಯ ವಿಚಾರಕ್ಕೆ ಬಂದರೆ ವೆಂಕಟನದ್ದು ತೀರಾ ನಿಷ್ಠುರವಾದ. ಶಸ್ತ್ರಚಿಕಿತ್ಸೆಗೊಳಗಾಗಿ ಜೀವನೋಪಾಯಕ್ಕೆಂದು ಕೆಲಸ ಮಾಡುವವರು, ನಿವೃತ್ತಿಯ ಅಂಚಿನಲ್ಲಿರುವವರಿಗೂ ಈತ ಮಾಮೂಲಿ ಕೊಡದಿದ್ದಕ್ಕಾಗಿ ವರ್ಗಾವಣೆ ಶಿಕ್ಷೆ ವಿಧಿಸಿದ ಉದಾಹರಣೆಗಳಿವೆ.

ಇಂಥ ವೆಂಕಟ ತಿಂಗಳಿಗೆ 25 ಸಾವಿರ ಸಂಬಳ ಪಡೆಯುತ್ತಾನೆ. ಅದಕ್ಕಾಗಿ ಈತ ಮಾಡುವ ಘನಂದಾರಿ ಕೆಲಸವೇನು ಅಂತ ನೋಡಹೋದರೆ ಷೇರು ಸಂಬಂಧಿ ವ್ಯವಹಾರವೇ ಈತನ ಫುಲ್‌ಟೈಂ ದಂಧೆ! ಪುಗಸಟ್ಟೆ ಸಿಕ್ಕ ಎಣ್ಣೆ ಕಿಕ್ಕಿಂದ ನಿತ್ತರಿಸಿಕೊಂಡು 10 ಗಂಟೆ ಹೊತ್ತಿಗೆ ಆಫೀಸಿಗೆ ಹಾಜರಾಗುವ ಈತ ದಿನಪತ್ರಿಕೆ ತಿರುವಿಹಾಕಿ, ಮಿಕಗಳನ್ನು ಹುಡುಕಿ ವಾಪಸಾಗುತ್ತಾನೆ.

ಆಗೀಗ ಸಿಟಿ ಬಸ್ ಹತ್ತಿ ಚಾಲಕ-ನಿರ್ವಾಹಕರಿಗೆ ಆವಾಜ್ ಹಾಕಿ ಹೂಂಕರಿಸುವ ಸಚಿವ ಆರ್.ಅಶೋಕ್ ಬಾಟ್ಲು ವೆಂಕಟನ ಬುಡಕ್ಕೆ ಒದ್ದು ಹೊರಗಟ್ಟಿಯಾರೇ?

ಜಿಮ್ ಬಗ್ಗೆ ಒಂದಷ್ಟು ಕೊಸರು

ಜಾಗತಿಕ ಹೂಡಿಕೆದಾರರ ಸಮ್ಮೇಳನದ ಯಶಸ್ವಿನ ರಾಜ್ಯಕ್ಕೆ ರಾಜ್ಯವೇ ರೋಮಾಂಚಿತವಾಗಿದೆ. ಜೀವದ ಕನಸು ದೇಹ ತಳೆದು ಕೈಗೆಟುಕಿದಂತೆ ಎಲ್ಲರೂ ಕಾಡುತ್ತಿದ್ದಾರೆ. ಮಾಧ್ಯಮಗಳ ಮೂಲಕ ನೋಡಿದರೆ ಸು ಹುಟ್ಟಿಸುತ್ತದೆ.

ಈ ಹೂಡಿಕೆ ಒಪ್ಪಂದಗಳನ್ನು ಗಮನಿಸಿದರೆ, ಈ ಸಾಲಾ ವಿಜೃಂಭಣೆಗೆ ಕಾರಣವೇ ಇಲ್ಲ ಅನ್ನಿಸುತ್ತೆ. ನಾಲ್ಕು ಲಕ್ಷ ಕೋಟಿ ಹೂಡಿಕೆ ಸೃಷ್ಟಿಸುವ ಉದ್ಯೋಗ ಹಾಜು ಎಂಟು ಲಕ್ಷ ಎಂದು ಸರ್ಕಾರವೇ ಘೋಷಿಸಿದೆ. ರಲ್ಲಿ ಸಿಂಹಪಾಲು ಗಾರ್ಮೆಂಟ್ ಮತ್ತು ಐಟಿ ಗಳದ್ದು. ಲಕ್ಷಾಂತರ ಕೋಟಿ ಹೂಡಿಕೆಯ ಉಕ್ಕಿನ ಜಾಟು ಸೃಷ್ಟಿಸುವ ಉದ್ಯೋಗಕ್ಕೆ ತೆರಬೇಕಾದ ಪರಿಸರದ ಬೆಲೆಯನ್ನು ಯಾರೂ ಲೆಕ್ಕ ಹಾಕಿಲ್ಲ. ಬಳ್ಳಾರಿಯನ್ನು ಸಂಪೂರಾ ಆಪೋಶನ ತೆಗೆದುಕೊಳ್ಳುವ ಮತ್ತು ಗಭದ್ರಾ, ಕೃಷ್ಣಾ ನೀರನ್ನು ಕಲುಷಿತಗೊಳಿಸುವ ಮನ್ನು ಕಲ್ಪಿಸಿಕೊಂಡರೆ ಭವಿಷ್ಯದ ಬಗ್ಗೆ ಆತಂಕ ಡುತ್ತದೆ.

ಇದಕ್ಕೆ ಬೇಕಾದ ಭೂಮಿಯೂ ಅಷ್ಟೇ, ರೈತರಿಂದ ಬೇರೆ ಯಾವ ಮೂಲದಿಂದ ಬರಲು ಸಾಧ್ಯ? ...ತ್ ಸೃಷ್ಟಿಯಾಗುವ ಉದ್ಯೋಗದ ಹತ್ತು ಪಟ್ಟು ...ವಿ ಜೀವನೋಪಾಯ ಕಳೆದುಕೊಳ್ಳುವುದು ಖಂಡಿತ. ...ಲ್ಲ ಉತ್ಪ್ರೇಕ್ಷಿತ ಆತಂಕದ ಗುಲ್ಲೆಂದು ಸರ್ಕಾರವೂ, ...ರಿಕೋದ್ಯಮವೂ ಹೇಳೀತು.

ಆದರೆ ಸರಳ ಲೆಕ್ಕ ನೋಡಿ. ನಮ್ಮಲ್ಲಿ ವರ್ಷಕ್ಕೆ ...ಯಾಗುವ ಉದ್ಯೋಗಾಕಾಂಕ್ಷಿಗಳ ಸಂಖ್ಯೆಯೇ ಐದು ...ಕ್ಕೂ ಮಿಕ್ಕಿ ಇದೆ (ಎಸ್‌ಎಸ್‌ಎಲ್‌ಸಿ ಯನ್ನು ಮಾನದಂಡ ...ಟ್ಟುಕೊಂಡರೆ). ಈ ಎಲ್ಲ ಹೂಡಿಕೆಗಳೂ ಅನುಷ್ಠಾನ ...ಗೊಳ್ಳಲು ಕನಿಷ್ಠ ಐದು ವರ್ಷಗಳು ಬೇಕು. ಈ ...ಅವಧಿಯಲ್ಲಿ ಮುಕುರಿಕೊಳ್ಳುವ ನಿರುದ್ಯೋಗಿಗಳ ಸಂಖ್ಯೆ ... ಎಂಬುದನ್ನು ಸರ್ಕಾರದ ಅಂಕಿ-ಸಂಖ್ಯೆ ಇಲಾಖೆಯೇ ...ಹಾಕಿ ಹೇಳಬಹುದು! ಅಂದರೆ ಇದು ಉದ್ಯೋಗ ...ಸುವುದು ಅಷ್ಟರಲ್ಲೇ ಇದೆ. ಅಷ್ಟಕ್ಕೂ ಗಾರ್ಮೆಂಟ್ ...ಮ ಬಿಟ್ಟರೆ ಬೇರೆ ಯಾವ ಕೈಗಾರಿಕೆಯಲ್ಲೂ ...ಕ್ಷಿತ, ಅರೆಕುಶಲಿ ವಿದ್ಯಾವಂತರಿಗೆ ಕೆಲಸ ಸಿಗುವುದು ... ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬಹುದು ...ಒಂದು ಉದ್ಯೋಗ ಸೃಷ್ಟಿಗೆ ಹೂಡುವ ಬಂಡವಾಳ ... ಎಂಬುದರ ಮೇಲೆ ಅದು ನಮ್ಮ ಸಂದರ್ಭಕ್ಕೆ ...ಬದ್ಧವೇ ಎಂದು ತೀರ್ಮಾನಿಸಬಹುದು.

ಒಂದು ಪತ್ರ

ಸರ್ಕಾರವೇ ಒಪ್ಪಿಕೊಂಡಂತೆ ನಾಲ್ಕು ಲಕ್ಷ ಕೋಟಿಗೆ ಎಂಟು ಲಕ್ಷ ಉದ್ಯೋಗ ಅಂದರೆ ಸರಾಸರಿ 50 ಲಕ್ಷ ಹೂಡಿಕೆಗೆ ಒಂದು ಉದ್ಯೋಗ! ಈ 50 ಲಕ್ಷದ ಬಡ್ಡಿಗೇ ಸುಮಾರು ...ಮಂದಿಗೆ ಗೌರವಾರ್ಹ ವೇತನ ನೀಡಬಹುದು. ...ಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ, ಬಿಸಿ ಊಟದ ...ರಿಗೆ ಕೊಡುವ ಸಂಬಳ ಇದಕ್ಕೂ ಕಡಿಮೆ.

ಇದರರ್ಥ ಇಷ್ಟೇ: ಹೂಡಿಕೆ ಮಾಡುವವನು ...ಕಾರರು ಕಡಿಮೆ ಇರುವ ಉದ್ಯಮಶೀಲತೆಗೆ ಒತ್ತು ...ತ್ತಾನೆ. ತನ್ಮೂಲಕ ಹೂಡಿಕೆಗೆ ಬರುವ ಲಾಭವನ್ನು ...ಕೊಳ್ಳುತ್ತಾನೆ. ಅಷ್ಟೇ. ಪ್ರಾಯಶಃ ಸರ್ಕಾರ ಕೊಡುವ ...ವಿನಾಯಿತಿ, ಅಗ್ಗದ ನೀರು, ಭೂಮಿ ಲೆಕ್ಕಕ್ಕೆ ...ಕೊಂಡರೆ, ಈ ಲಾಭಾಂಶ ಇನ್ನೂ ಜಾಸ್ತಿ. ಈ ...ದಲ್ಲಿ ನಮ್ಮ ಅಧಿಕಾರಿಗಳಿಗೂ ಪಾಲು ಸಿಗುವುದು ...ತ! ಇದರ ಹೊರತಾಗಿ ಕೇಂದ್ರ ಆಹಾರ ...ಶೋಧನಾ ಸಂಸ್ಥೆಯ ನಿರ್ದೇಶಕ ಪ್ರಕಾಶ್ ಅವರು ...ದ ಮಾತುಗಳು ಗಮನಾರ್ಹ. ಕೃಷಿ ರಂಗದಲ್ಲಿ ... ವರ್ಧನೆಗೆ ಬಂಡವಾಳ ಹೂಡದೇ ಯಾವ ...ವೂ ಉದ್ಧಾರವಾಗಿಲ್ಲ. ಈ ನಾಲ್ಕು ಲಕ್ಷ ಕೋಟಿ ..., ನಮ್ಮ ಕೃಷಿ ರಂಗಕ್ಕೆ ಕೇವಲ 20,000 ಕೋಟಿ ...ಮೊತ್ತ ಟಾಟಾ ನ್ಯಾನೋ ಯೋಜನೆಗೆ ಗುಜರಾತ್ ...ರ ನೀಡಿರುವ ದೀರ್ಘಾವಧಿ ಸಾಲ!) ರೂ. ಹೂಡಿಕೆ ...ದರೆ ಸುಮಾರು ಒಂದು ಕೋಟಿ ಜನಕ್ಕೆ ಜೀವನ ... ಸಿಗುತ್ತದೆ.

...ಮೆಟ್ರೋ ರೈಲಿಗೇ 10-15 ಸಾವಿರ ಕೋಟಿ ಸುರಿದು ...ವರ್ಷದಲ್ಲಿ ಅದರ ಅಸಲು ವಾಪಸ್ ಪಡೆಯುವ ...ಜನೆ ಇರುವ ಸರ್ಕಾರಕ್ಕೆ, ಕೃಷಿಯಲ್ಲಿ ನೇರವಾಗಿ ...ವರ್ಷದಲ್ಲಿ ಈ ಮೊತ್ತದ ಎರಡು ಪಟ್ಟು ವಾಪಸ್ ...ಸುವುದು ಹೇಗೆ ಎಂಬುದನ್ನು ಹೇಳಿಕೊಡಬೇಕಾ ...ಲೋ ಪಿಸಿಓ. ನೀವು ಯಾವ ವಿಚಾರದ ಬಗ್ಗೆ ...ರೋಮಾಂಚನಗೊಳ್ಳುತ್ತೀರಿ ಎಂಬುದು ನಿಮ್ಮ ...ಯನ್ನು ತೋರಿಸುತ್ತದೆ.

- ಕೆ.ಪಿ.ಸುರೇಶ, ಬೆಂಗಳೂರು

ಹಾವೇರಿ: ಸರಕಾರಿ ಹತ್ಯೆಗೆ ಎರಡು ವರ್ಷ

ಗಾಯಾಳುಗಳ ಗೋಳು ಕೇಳುವವರ್‍ಯಾರು?



"ಎರಡು ವರ್ಷದ ಹಿಂದ ಹಾವೇರ್‍ಯಾಗ ಗೊಬ್ಬರ ತರಾಕ ಹೋದಾಗ ಪೊಲೀಸರು ಹಾರಿಸಿದ ಗುಂಡಿಗೆ ನಾವೂ ಸತ್ತಿದ್ರ ಚಲೋ ಇತ್ರಿ. ನಮ್ಮ ಹೆಂಡ್ರು ಮಕ್ಕಳಾದ್ರು ಆರಾಮ ಇರತಿದ್ರು.."



ಚೆಡ್ಡಿ ಸರಕಾರ ಅಸ್ತಿತ್ವಕ್ಕೆ ಬಂದ ಕೆಲವೇ ತಿಂಗಳಲ್ಲಿ ರೈತರ ಮೇಲೆ ನಡೆಸಿದ ಸರಕಾರಿ ಎನ್‌ಕೌಂಟರ್‌ನಲ್ಲಿ ಗುಂಡೇಟು ತಿಂದು ತೀವ್ರವಾಗಿ ಗಾಯಗೊಂಡವರ ನೋವಿನ ನುಡಿಯಿದು.

2008ರ ಜೂನ್ 10 ರಾಜ್ಯದ ರೈತರ ಪಾಲಿಗೆ ಕರಾಳ ದಿನ. ಸಿಗದ ಗೊಬ್ಬರಕ್ಕಾಗಿ ಸಾವಿರಾರು ಜನ ರೈತರು ಸರಕಾರದ ವಿರುದ್ಧ ತಿರುಗಿ ಬಿದ್ದಾಗ ಮಾನವೀಯತೆಯನ್ನು ಲೆಕ್ಕಿಸದ ರಕ್ತದಾಹಿ ಚೆಡ್ಡಿ ಸರಕಾರ ಇಬ್ಬರು ರೈತರ ಜೀವ ತೆಗೆದು ಅವರ ಹೆಣದ ಮೇಲೆ ಅಧಿಕಾರ ಆರಂಭಿಸಿದ್ದನ್ನ ನೇಗಿಲಯೋಗಿಗಳ್ಯಾರೂ ಇನ್ನೂ ಮರೆತಿಲ್ಲ. ಅದರಂತೆ ಘಟನೆಯಲ್ಲಿ ಗುಂಡೇಟು ತಿಂದವರ ಸ್ಥಿತಿ ಕೂಡಾ ಚಿಂತಾಜನಕವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಕೆಲಸ ನಿರ್ವಹಿಸಿ ಕುಟುಂಬ ಸಲಹುವುದಿರಲಿ, ಸ್ವತಃ ತಮ್ಮ ಕೆಲಸಗಳನ್ನೂ ಮಾಡಿಕೊಳ್ಳದ ಸ್ಥಿತಿಯಲ್ಲಿದ್ದಾರೆ ಇವರು. ಆದರೆ ಇದಕ್ಕೆ ಕಾರಣವಾದ ಯಡ್ಡಿ ಬಂಡವಾಳಶಾಹಿಗಳ ಜೊತೆ ಸೂಟು, ಬೂಟಿನಲ್ಲಿ ಮಿಂಚುತ್ತಾ ಒಂದೂವರೆ ಲಕ್ಷ ಎಕರೆ ಕೃಷಿಭೂಮಿಯನ್ನು ಹರಾಜು ಹಾಕುತ್ತಲೇ "ನಾನೆಂದೆಂದೂ ರೈತರ ಪರ" ಎಂದು ಬೊಗಳೆ ಬಿಡುತ್ತಿದ್ದಾರೆ. ರೈತರನ್ನು ಕೊಂದು ಅಧಿಕಾರಕ್ಕೆ ಬಂದ ಈ ಸರ್ಕಾರ ಇವತ್ತಿಗೂ ಆ ಸಂತ್ರಸ್ತರತ್ತ ತಿರುಗಿ ನೋಡಿಲ್ಲ. 'ಪತ್ರಿಕೆ' ಗಾಯಾಳುಗಳನ್ನು ಮತ್ತು ಮೃತ ಕುಟುಂಬದವರನ್ನು ಭೇಟಿ ಮಾಡಿ ಮಾತನಾಡಿಸಿದಾಗ ಅವರಿಂದ ಬಂದ ನೊಂದ ನುಡಿಗಳು ಸರ್ಕಾರದ ಕಾರ್ಯವೈಖರಿಗೆ ಕೈಗನ್ನಡಿಯಂತಿವೆ.

ಕಲಿಯುವ ಆಸೆ ನನಸಾಗಲಿಲ್ಲ


ಬದಾಮಿಯ ಸಮೀರ್ ಅಬ್ದುಲ್ ಖಾದರ್ ಡಿಗ್ರಿ ಓದಲು ಹಾವೇರಿಯ ಅಜ್ಜಿ ಮನೆಗೆ ಬಂದ. ಜೊತೆಗೆ ಮಾವನ ಎಲೆಕ್ಟ್ರಿಕಲ್ ಅಂಗಡಿಯಲ್ಲಿ ಕೆಲಸವನ್ನು ಮಾಡುತ್ತಿದ್ದ.

2008 ಜೂನ್ 10ರಂದು ದಿನಂಪ್ರತಿಯಂತೆ ಕೆಲಸ ಮುಗಿಸಿಕೊಂಡು ಮನೆಗೆ ಮರಳುತ್ತಿದ್ದ ಸಮೀರ, ಏಕಾಏಕಿ ನಗರದಲ್ಲಿ ಗಲಭೆ ಆರಂಭವಾದಾಗ ಏನು ಮಾಡಬೇಕೆಂದು ತೋಚದೆ ಹೊಸಮನಿ ವೃತ್ತದಲ್ಲಿ ಅಂಗಡಿಯೊಂದರ ಮರೆಗೆ ನಿಂತಿದ್ದ. ಆಗ ಪೊಲೀಸರು ಹಾರಿಸಿದ ಗುಂಡು ಈತನ ಎಡಗೈಗೆ ತಗುಲಿದೆ. ಆಗಿನಿಂದಲೂ ಈತನ ಎಡಗೈ ಸ್ವಾಧೀನ ಕಳೆದುಕೊಂಡಿದೆ. ಈತನಿಗೆ ಸದ್ಯ ಯಾವ ಕೆಲಸವನ್ನೂ ಮಾಡಲು ಸಾಧ್ಯವಾಗುತ್ತಿಲ್ಲ.

ಇಷ್ಟೆಲ್ಲಾ ಗೋಳು ಅನುಭವಿಸುವ ಸಮೀರ್ ತನ್ನ ಎಡಗೈ ಚಿಕಿತ್ಸೆಗಾಗಿ ಇಲ್ಲಿಯವರೆಗೆ ಸಾಲ ಮಾಡಿ 1.35 ಲಕ್ಷವನ್ನು ಖರ್ಚು ಮಾಡಿದ್ದಾನೆ. ಆದರೂ ಪ್ರಯೋಜನವಾಗಿಲ್ಲ.

ಪರಿಹಾರ ಕೊಡಲೇ ಇಲ್ಲ

ಗೋಲಿಬಾರ್ ಆದನಂತರ ಗಾಯಾಳುಗಳಿಗೆ ವಿತರಿಸಿದ ಪರಿಹಾರದ ಹಣದಲ್ಲೂ ಈತನಿಗೆ ತಾರತಮ್ಯವಾಗಿದೆ. ಅಧಿಕಾರಿಗಳ ಬೇಜವಾಬ್ದಾರಿ ಎನ್ನಬೇಕೋ ಅಥವಾ ಚೆಡ್ಡಿ ಸರಕಾರದ ಮುಸ್ಲಿಂ ವಿರೋಧಿ ಧೋರಣೆ ಎನ್ನಬೇಕೋ ಗೊತ್ತಿಲ್ಲ. ಹುಬ್ಬಳ್ಳಿ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಎಲ್ಲರಿಗೂ ಕೊಟ್ಟಂತೆ 50 ಸಾವಿರ ರೂಗಳನ್ನು ಸಮೀರನಿಗೆ ನೀಡಿದರು. ಆದರೆ ಉಳಿದ ಗಾಯಾಳುಗಳಿಗೆ ಎರಡನೇ ಕಂತಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಮತ್ತೆ 50 ಸಾವಿರ ಕೊಡಲಾಗಿದೆ. ಆದರೀತನಿಗೆ ಏನೂ ಸಿಕ್ಕಿಲ್ಲ. ಸರಕಾರದಿಂದ ಆದ ಈ ಅನ್ಯಾಯದಿಂದ ನೊಂದ ಸಮೀರನ ಕುಟುಂಬ ಎರಡು ಬಾರಿ ಬೆಂಗಳೂರಿಗೂ ತೆರಳಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಭೇಟಿ ಮಾಡಿ ಉಳಿದ ಪರಿಹಾರಕ್ಕಾಗಿ ಬೇಡಿಕೊಂಡಿದ್ದಾರೆ. ಆದರೆ ಮುಸ್ಲಿಂ ವಿರೋಧಿ ಮೂರ್ಖ ಮುಖ್ಯಮಂತ್ರಿ ಪರಿಶೀಲನೆಯ ಭರವಸೆ ನೀಡಿ ಕೈ ತೊಳೆದುಕೊಂಡಿದ್ದಾರೆ.



ಆಲದಕಟ್ಟಿ ಅಬ್ದುಲ್ ರಜಾಕ್ ಕಲಕೋಟಿ ಎತ್ತಿನ ಬಂಡಿ ಇಟ್ಟುಕೊಂಡು ಹಮಾಲಿ ಕೆಲಸ ಮಾಡುತ್ತಿದ್ದ. ಈ ಮೂಲಕ ತನ್ನ 4 ಮಕ್ಕಳು ಹಾಗೂ ಪತ್ನಿಯನ್ನು ಸಾಕುತ್ತಿದ್ದ. ಅಂದು (2008 ಜೂನ್ 10) ಎಂದಿನಂತೆ ತನ್ನ ಎತ್ತಿನ ಬಂಡಿ ನಿಲ್ಲಿಸಿ ರಕ್ಷಣೆ ಪಡೆಯಲು ಜಾಗ ಹುಡುಕುತ್ತಿದ್ದ. ಅಷ್ಟರೊಳಗೆ ಪೊಲೀಸರು ಹಾರಿಸಿದ ಗುಂಡು ಈತನ ಬಲಗೈಗೆ ತಗುಲಿದೆ.


ಇದರಿಂದಾಗಿ ಬಲಗೈ ಸಂಪೂರ್ಣ ಸ್ವಾಧೀನ ಕಳೆದುಕೊಂಡಿದ್ದು, ಒಂದು ಚರಿಗೆ ನೀರು ಎತ್ತಲೂ ಆಗುತ್ತಿಲ್ಲ. ಈತನಿಗೆ ಸರಕಾರದಿಂದ ಈವರೆಗೆ 1 ಲಕ್ಷ ರೂ. ಪರಿಹಾರ ಸಿಕ್ಕಿದೆ. ಆದರಲ್ಲಿ 95 ಸಾವಿರ ಚಿಕಿತ್ಸೆ ಹಾಗೂ ಕೋರ್ಟ್ ಅಲೆದಾಟಕ್ಕೆ ಖರ್ಚಾಗಿ ಹೋಗಿದೆ. 4 ಹೆಣ್ಣು ಮಕ್ಕಳನ್ನು ಹೊಂದಿರುವ ಕಲಕೋಟಿ ಕುಟುಂಬದ ಜೀವನ ನಿರ್ವಹಣೆ ದುಸ್ತರವಾಗಿದೆ. ಆರ್ಥಿಕ ತೊಂದರೆಯಿಂದಾಗಿ ತನ್ನ ಹಿರಿಯ ಮಗಳ ವಿದ್ಯಾಭ್ಯಾಸಕ್ಕೆ ಎಳ್ಳು ನೀರು ಬಿಟ್ಟಂತಾಗಿದೆ.

"ಗೋಲಿಬಾರ್‌ನಲ್ಲಿ ಮಡಿದ ಕುಟುಂಬದವರಿಗೆ ಸರಕಾರಿ ನೌಕರಿ ನೀಡಲಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಇಂತಿಷ್ಟು ದುಡ್ಡು ಅಂತಾ ಇಡಲಾಗಿದೆ. ಆದರೆ ಗಾಯಾಳುಗಳಾಗಿ ಇದ್ದೂ ಸತ್ತಂತಿರುವ ನಮ್ಮ ಮಕ್ಕಳ ಬಗ್ಗೆ ಯಾವುದೇ ಕಾಳಜಿ ವಹಿಸಿಲ್ಲ. ಒಂದು ವೇಳೆ ನಾನು ಗೋಲಿಬಾರ್‌ನಲ್ಲಿ ಸತ್ತಿದ್ದರೆ ನನ್ನ ಕುಟುಂಬಕ್ಕೂ ಸರಕಾರಿ ನೌಕರಿ ಹಾಗೂ ಹೆಚ್ಚಿನ ಪರಿಹಾರ ಸಿಗುತ್ತಿತ್ತು" ಎನ್ನುತ್ತಾ ಕಣ್ಣೀರು ಸುರಿಸಿದರು ಕಲಕೋಟಿ.

ಗೋಲಿಬಾರ್ ಗಾಯಾಳುಗಳು ಕೋರ್ಟಿಗೆ ಅಲೆಯುವುದು ಇನ್ನೂ ತಪ್ಪಿಲ್ಲ. ಗೋಲಿಬಾರ್ ಪ್ರಕರಣಗಳನ್ನೆಲ್ಲ ಹಿಂದಕ್ಕೆ ಪಡೆಯಲು ಇತ್ತೀಚೆಗೆ ನಡೆದ ಸಚಿವ ಸಂಪುಟದ ಸಭೆಯಲ್ಲಿ ಸರಕಾರ ನಿರ್ಧರಿಸಿದೆ. ಆದರೆ ಈ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಗುಂಡಿಕ್ಕಿದ ಸರಕಾರಕ್ಕೆ ಗಾಯಾಳುಗಳ ಮೇಲಿನ ಸೇಡು ಇನ್ನೂ ತೀರಿದಂತಿಲ್ಲ. ●

ಗೋಲಿಬಾರ್ ಇನ್ನೂ ದುಸ್ವಪ್ನ

'ನಾವು ಯಾರನ್ನ ನಂಬಿ ಬಂದಿದ್ದೇವೋ ಅವರು ಅರ್ಧ ದಾರಿಯಲ್ಲೇ ನಮ್ಮನ್ನು ಬಿಟ್ಟು ಹೋಗುವಂತಾಯಿತು. ಮಕ್ಕಳು ತಂದೆ ಪ್ರೀತಿಯಿಂದ ವಂಚಿತರಾಗಿ ಜೀವನ ಪೂರ್ತಿ ಕಣ್ಣೀರಲ್ಲೇ ಕೈತೊಳೆಯುವಂತಾಯಿತು. ಈ ಸ್ಥಿತಿ ಯಾರಿಗೂ ಬರಬಾರದು. ಆವತ್ತಿನ ಆ ಘಟನೆಯನ್ನು ನೆನಪಿಸಿಕೊಂಡರೆ ಇನ್ನೂ ಮೈ ನಡುಕ ಬರುತ್ತದೆ...'



ಗೋಲಿಬಾರ್‌ಗೆ ಪ್ರಾಣ ತೆತ್ತ ಇಬ್ಬರು ರೈತರ ಪತ್ನಿಯರ ನಿಟ್ಟುಸಿರ ನುಡಿಯಿದು. ಗೋಲಿಬಾರ್ ತನಿಖೆಗಾಗಿ ಸರಕಾರ ನಿವೃತ್ತ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಆಯೋಗವು ಇತ್ತೀಚೆಗಷ್ಟೇ ತನ್ನ ತನಿಖೆ ಮುಗಿಸಿ ಸರಕಾರಕ್ಕೆ ವರದಿ ಸಲ್ಲಿಸಿದೆ. ಆದರೆ ಈವರೆಗೂ ವರದಿಯಲ್ಲೇನಿದೆ ಎಂಬುದು ಬಹಿರಂಗಗೊಂಡಿಲ್ಲ. ಒಂದು ದುರಂತ ಎಂದರೆ ಆಯೋಗದ ಮುಂದೆ ಚೆಡ್ಡಿ ಶಾಸಕರು ಮತ್ತು ಸಚಿವರು ಸೇರಿದಂತೆ ಇವರ ಛೇಲಾ ಅಧಿಕಾರಿಗಳು ಗೋಲಿಬಾರ್‌ನಲ್ಲಿ ಮಡಿದವರು ರೈತರೇ ಅಲ್ಲಾ ಅಂತಾ ಹೇಳಿಕೆ ನೀಡಿ ತಮ್ಮ ಲುಚ್ಚಾತನವನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ರೈತರಲ್ಲ ಎಂಬ ಹೇಳಿಕೆ ಇಬ್ಬರು ಮೃತರ ಕುಟುಂಬದವರನ್ನು ಕೆರಳಿಸಿದೆ. ಪತ್ರಿಕೆ ಭೇಟಿಯಾದಾಗ ಅವರಿಂದ ಬಂದ ಕೆಲ ಆಕ್ರೋಶದ ನುಡಿಗಳು ಇಲ್ಲಿವೆ.

ಗುಂಡೇಟಿನಲ್ಲಿ ಸತ್ತವರು ರೈತರಲ್ಲ ಎಂದು ಭಂಡ ಶಾಸಕರು, ಅಧಿಕಾರಿಗಳು ಹೇಳಿಕೆ ನೀಡಿರುವುದು ಮೃತ ರೈತ ಸಿದ್ದಲಿಂಗಪ್ಪ ಚೂರಿ ಪತ್ನಿ ಕುಸುಮಾರಿಗೆ ದಿಗ್ಭ್ರಮೆ ಮೂಡಿಸಿದೆ. ಜಗನ್ನಾಥ ಶೆಟ್ಟಿ ಆಯೋಗ ನೀಡಿದ ವರದಿಯಲ್ಲೂ ಇದೇ ರೀತಿ ಹೇಳಲಾಗಿದೆಯಂತೆ. ಕೂಡಲೇ ವರದಿ ಬಹಿರಂಗಪಡಿಸಬೇಕೆಂದೂ, ತನ್ನ ಪತಿ ರೈತರೇ ಆಗಿದ್ದರು, ಅವರು ರೈತರು ಎಂಬುದಕ್ಕೆ ಸಾಕ್ಷಾಧಾರಗಳನ್ನು ಒದಗಿಸಲು ತಾವು ಸಿದ್ಧರಿರುವುದಾಗಿ ಆಕ್ರೋಶದಿಂದ ನುಡಿಯುತ್ತಾರೆ ಕುಸುಮಾ.

ಹಾವೇರಿ ತಾಲೂಕಿನ ನೇಲೂಗಲ್ಲ ಗ್ರಾಮದ ಪುಟ್ಟಪ್ಪ ಹೊನ್ನತ್ತಿ ಮನೆಯಲ್ಲೂ ಗಾಢ ಮೌನ ಆವರಿಸಿದೆ. ಮಗನನ್ನು ಕಳೆದುಕೊಂಡ ಕೊರಗು ತಾಯಿಯನ್ನು ಜರ್ಜರಿತಗೊಳಿಸಿದ್ದರೆ, ಗಂಡನನ್ನು ಕಳೆದುಕೊಂಡ ಕರಬಸವ್ವನಿಗೆ ನಿತ್ಯವೂ ಮಾನಸಿಕ ವೇದನೆ. ಮುದ್ದು ಮಕ್ಕಳಿಗೆ ತಂದೆ ಪ್ರೀತಿ ಇಲ್ಲದ ಅನಾಥ ಪ್ರಜ್ಞೆ.

ಇರುವ 1.5 ಎಕರೆ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಪುಟ್ಟಪ್ಪ ಹೊನ್ನತ್ತಿ ಕುಟುಂಬ ಬದುಕು ಸಾಗಿಸುತ್ತಿತ್ತು. ಗೊಬ್ಬರ ತರಲು ಹೊನ್ನತ್ತಿ ಹಾವೇರಿಗೆ ಬಂದಿದ್ದ. ಗುಂಡೇಟು ತಿಂದು ತೀವ್ರವಾಗಿ ಗಾಯಗೊಂಡ ಈತ ಬೆಂಗಳೂರಿನಲ್ಲಿ ಆಸ್ಪತ್ರೆಯಲ್ಲಿ ಅಸುನೀಗಿದ.


'ನನ್ನ ಗಂಡಾ ರೈತನೇ ಅಲ್ಲ ಅಂತಾ ಶಾಸಕರು, ಅಧಿಕಾರಿಗಳು ಹೇಳಿಕಿ ನೀಡ್ಯಾರ್ರಿ, ಆದ್ರ ನನ್ನ ಗಂಡಾ ರೈತ ಇದ್ದಾರಿ, ಗೊಬ್ಬರ ಬೀಜಾ ತರಾಕ ಹಾವೇರಿಗೆ ಹೋಗಿ ಮನೆಗೆ ಹೆಣವಾಗಿ ಬಂದಾರಿ' ಎಂದು ನೋವಿನಿಂದ ಕಂಬನಿ ನುಡಿಯುತ್ತಾಳೆ ಕರಬಸವ್ವ.

ಹಸಿರು ಶಾಲು ಹೊತ್ತು ಪ್ರಮಾಣ ವಚನ ಸ್ವೀಕರಿಸಿದಾಕ್ಷಣ ರೈತರ ಗೋಳಿಗೆ ಸ್ಪಂದಿಸದೇ ಗುಂಡಿಕ್ಕಿ ಕೊಂದು, ಸತ್ತವರ ಮನೆ ಮುಂದೆ ಮೊಸಳೆ ಕಣ್ಣೀರು ಇಟ್ಟು ಅವರ ಮನೆಗೆ ಶಾಂತಿ ಕೊಡಲಿಲ್ಲ ಮುಖ್ಯಮಂತ್ರಿ ಯಡ್ಡಿ. ಈಗ ಸತ್ತವರು ರೈತರೇ ಅಲ್ಲ ಎನ್ನುತ್ತ ಗಾಯಾಳುಗಳನ್ನು ನಿತ್ಯವೂ ಕೊಲ್ಲುತ್ತಿದ್ದಾರೆ. ಇದು ನಮ್ಮನ್ನಾಳುವ ಗೋಮುಖ ವ್ಯಾಘ್ರ ಮುಖ್ಯಮಂತ್ರಿಯ ನಿಜ ಬಣ್ಣ.

● ಹುರುಳಿಕುಪ್ಪಿ ವಿನಯ್


ಪುಸ್ತಕ ವಿಮರ್ಶೆ

ಮಡಿವಾಳರ ಕಾವ್ಯ: ಆದೋ ಹನಿಯುದುರುತಿದೆ...



ಲೇಖಕ : ವೀರಣ್ಣ ಮಡಿವಾಳರ
ಪುಟ : 116 ಬೆಲೆ : 50/-
ಪ್ರಕಾಶನ : [illegible] ಪ್ರಕಾಶನ
ಮೊಬೈಲ್ : 9448528663

ವೀರಣ್ಣ ಮಡಿವಾಳರ ಅವರ ಪ್ರಸ್ತುತ ಕವನ ಸಂಕಲನ 'ನೆಲದ ಕರುಣೆಯ ದನಿ' ವರ್ತಮಾನದ ಜೀರುಗುಂಟೆ ಸಮಸ್ಯೆಗಳನ್ನು, ಸಾಮಾಜಿಕ ಹಾಗೂ ವೈಯಕ್ತಿಕ ಬದುಕಿನ ವಿಷಮತೆಗಳನ್ನು ಪ್ರಸ್ತುತ ಪಡಿಸುತ್ತದೆ. ಬವಣೆತರ ಬೇಗೆಗಳ ಮಧ್ಯೆಯೇ ಅರಳುವ ಅವರ ಕಾವ್ಯ-ನವಿಲಮೌನ, ನಾಲಿಗೆ ಸತ್ತು ಬಿದ್ದಿರುವ ಹೆಬ್ಬಾವು, ಪಲ್ಪಿ ದೋಣಿ, ಕಡ್ಡಿಮುರಿದ ಅಪ್ಪನ ಸೈಕಲ್ಲು, ಹಸಿರು ಬೆನ್ನಿನ ಕಪ್ಪೆ, ಸಣ್ಣ ಹೊಟ್ಟೆಯ ಇರುವೆ, ಮರಿ ತೊರೆದ ಗುಬ್ಬಚ್ಚಿ-ಹೀಗೆ ಹಲವಾರು ನುಡಿಚಿತ್ರಗಳ ಗುಂಟೆಯೇ ಹರಿದಾಡುತ್ತದೆ. ನೆರೂಡನ 'ಅಶುದ್ಧ ಕಾವ್ಯ'ವನ್ನು ನೆನಪಿಗೆ ತರುತ್ತದೆ.



'ಇನ್‌ಲಂಡನ್ ಟೌನ್' ಎಂಬ ಕವನದಲ್ಲಿ ಸ್ವರ್ಗದ ಸುಮಧುರ ಹೊನಲಿನಂಥ ಹಕ್ಕಿಯೊಂದು ಗೊತ್ತುಗುರಿಯಿಲ್ಲದ ತಲೆಹಿಡುಕರ ಹಿಂಸೆಗೆ ಈಡಾಗುತ್ತದೆ. ಆ ಪುಟ್ಟ ಪಕ್ಷಿಯ ಬಗೆಗೆ ಮಕ್ಕಳಿಗಿದ್ದ ಕಾಳಜಿ, ಅಳಲು ಕೂಡ ನದೀ ನೀರಲ್ಲಿ ಮುಳುಗಡೆಯಾಗುತ್ತದೆ. ವೀರಣ್ಣ ಅವರ ಕವನಸಂಕಲನ ಕ್ರೌರ್ಯದ ಹಲವು ಮಗ್ಗಲುಗಳನ್ನು ಅನಾವರಣಗೊಳಿಸುತ್ತದೆ. ಹತಾಶೆ, ದುಃಖ, ಬೇಗುದಿಯ ಪದರಗಳು ಇಲ್ಲಿನ ಬಹುಪಾಲು ಕವನಗಳಲ್ಲಿ ಮಡುಗಟ್ಟಿವೆ. ಆಧುನಿಕತೆಯ ದುರಂತ, ಐಭೋಗದ ವ್ಯಸನ, ಪರಂಪರೆಯ ಪಿಡುಗುಗಳು ಇಲ್ಲಿ ಮೆರವಣಿಗೆಯಾದಿಯಲ್ಲಿವೆ. ಸಮತೆ, ಮನುಷ್ಯತ್ವದ ಸುಳಿವೂ ಇಲ್ಲದ ಸಮುದಾಯ-ಸಮುಚ್ಚಯಗಳು, ಇಂತಲ್ಲಿ ಕವಿಯ ಕಾರುಣ್ಯದ ಕಣ್ಣು ನಿರ್ಗತಿಕರ ಶೋಷಿತರ, ನಿರಾಶ್ರಿತರ ಬವಣೆ-ಬದುಕನ್ನು, ನಿರೀಕ್ಷೆ ಕನವರಗಳನ್ನು ಕಾಪಿಡುತ್ತದೆ.

'ನೆಲದ ಕರುಣೆಯ ದನಿ' ಸಮತೋಲನ ಕಳೆದುಕೊಳ್ಳುತ್ತಿರುವ ಭೂಮಿಯ ಅವಸ್ಥಾಂತರಗಳನ್ನು ಎತ್ತಿ ಹಿಡಿಯುತ್ತದೆ. ಧರೆಯ ಸಕಲವೂ ಸೂರೆಯಾಗುತ್ತಿದೆ.

"ಇಡೀ ಭೂಮಿ ಯಾರಿಗೋ ಖರೀದಿಯಾಗಿದೆ. ಜಮೀನುದಾರರು ಸುತ್ತಲೂ ಕಲ್ಲುಕಟ್ಟಿ ಕವಣೆ ಬೀಸುತ್ತಿದ್ದಾರೆ ನಮ್ಮೆಡೆಗೆ" ಎನ್ನುವಲ್ಲಿ ಇಳೆಯ ದೈನೇಸಿ ಸ್ಥಿತಿಯನ್ನು ಚಿತ್ರಿಸುತ್ತಾರೆ. ನೆಲಗಳ್ಳರ, ನವಮಹಾಹತುಶಾಹಿಂಗಳ ದೌರ್ಜನ್ಯವನ್ನು, ಕವಿ ರೂಪಕಗಳಲ್ಲಿ ತೇಲಿಬಿಟ್ಟದ್ದಾರೆ. ಇಲ್ಲಿ ಭುವಿ ಪೊರೆಯುವ ಶಕ್ತಿಯೂ ಹೌದು. ಆದರೀಗ ಕರುಣೆಯ ಜಿನುಗಿಗೆ ಹಾತೊರೆವ ಅಸಹಾಯಕ ನೆಲೆಯೂ ಹೌದು. 'ಯಾರೋ ಹಾರಲು ಕಲಿಸುವ ಮಾಂತ್ರಿಕರ' ಪಿತೂರಿಯಿಂದಾಗಿ ಪ್ರಾಣಕೊಡುವ ಸಂಕುಲಗಳು ಎಲ್ಲ ದಿಕ್ಕುಗೂ ದಿಕ್ಕಾಪಾಲಾಗಿವೆ. ಹಸಿರುಮರದ ಪರಿತಪ ಮರಕ್ಕೇ ಆನಿಕೊಂಡಿರುವ ಹಕ್ಕಿಗೂ ತಿಳಿಯುವುದಿಲ್ಲ. ನಾಗರಿಕತೆ ಹಾರುತ್ತ ದೇಕುತ್ತಿದೆ. ಇಂತಹ ದಿಕ್ಕೆಟ್ಟ ಪರಿಸ್ಥಿತಿಯಲ್ಲೂ ಬದುಕಿನ ಹುಟ್ಟು ಹಾಕುವ 'ಜೀವಗಾನದ ಪಿಸುಗಾನ' ಈ ಕವನಗಳಲ್ಲಿ ಅನುರಣಿಸುತ್ತದೆ.

ಜಾಗತೀಕರಣದ ನಾಗಾಲೋಟದಲ್ಲಿರುವ ಸಮಾಜಗಳು ಪ್ರತಿಗಾಮಿಯಾಗಿ ಅಂಧಶ್ರದ್ಧೆ ಧಾರ್ಮಿಕ ಮೌಢ್ಯಗಳ ಪ್ರಪಂಚದಂಚಿಗೆ ಸಾಗಿವೆ. ಧಾರ್ಮಿಕ ವಿಕಾರಗಳನ್ನು ಪ್ರಶ್ನಿಸುವ ನೆಲೆಗಟ್ಟು ವೀರಣ್ಣರ ಕಾವ್ಯದಲ್ಲಿದೆ. 'ಪಕ್ಕಾ ಖಾಸಗಿ ಮಾತುಕತೆ' ಎನ್ನುವ ಕವನ ಹುಸಿ ಧಾರ್ಮಿಕ ಕಟ್ಟುಪಾಡುಗಳ ನಿರರ್ಥಕತೆಯನ್ನು ವ್ಯಕ್ತಪಡಿಸುತ್ತದೆ. 'ಕಣ್ಣಿನಲ್ಲಿ ವಿಗ್ರಹದ ಅಕರಾಳ ವಿಕರಾಳ ಕುಣಿತ' ಕವಿಗೆ ಈ ತೆರನಾದ ಡಾಂಬಿಕ ನಂಬುಗೆಗಳಿಗಿಂತ ಸಾಗಿಸಬೇಕಾದ ಬದುಕು ಮುಖ್ಯವಾಗುತ್ತದೆ.

"ನಿತ್ರಾಣಗೊಂಡ ಹಸಿದ ದೇಹ
ಸುಡುಗಾಡು ಹುಡುಕುತ್ತಿದ್ದಾಗ
ವಿಗ್ರಹ ಮಾರಿ ಹುರಿದ
ಮಾಂಸ ತಿಂದೆ."

ಚಳಿ ಕಾಯಿಸಲು ಬುದ್ಧನ ವಿಗ್ರಹ ತಾ ಸುಡುತ್ತೇನೆ ಎನ್ನುವ ಝೆನ್ ಗುರುವೊಬ್ಬನ ನೆನಪಾಗುತ್ತದೆ ಇಲ್ಲಿ. 'ಹಡದಿ ಹಾಸುವ ಅಗಸರ ಹಾಡು' ಎನ್ನುವ ಕವನ ಧರ್ಮ ಹಾಗೂ ಸಂಸ್ಕೃತಿಯ ಹೆಸರಲ್ಲಿ ನುಸುಳುವ ಪಿಡುಗುಗಳ ಹಾವಳಿಯನ್ನು ಧ್ವನಿಸುತ್ತದೆ. "ರಂಗುರಂಗಿನ ವೇಷದಲಿ ಮಿರಿಮಿರಿ ಮಿಂಚುವ/ ಮತ್ತೆ ಮತ್ತೆ ನವೀಕರಣಗೊಂಡ ಪಿಡುಗುಗಳೇ" ಎಂದು 'ದೀರ್ಘದಂಡ ಪ್ರಣಾಮ'ಗಳನ್ನು ಹಾಕುವಲ್ಲಿಗೆ ಪಿಡುಗುಗಳ ದಾಂಗುಡಿಗೆ ನಾಟಕೀಯವಾಗಿ ಚುರುಕು ಮುಟ್ಟಿಸುತ್ತಾರೆ ಕವಿ. ಹೀಗೆ ಮತಾಂಧತೆಯನ್ನು, ಪರಂಪರೆಯ ಧೂರ್ತತೆಯನ್ನು, ಸೋರುತ್ತಿರುವ ವ್ಯವಸ್ಥೆಯನ್ನು ಪ್ರತಿರೋಧಿಸುವ ಹಲವಾರು ಕವನಗಳು ಸಂಕಲನದಲ್ಲಿವೆ.

ಸಾವು ಮತ್ತು ಆಧುನಿಕತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆಧುನಿಕತೆಯ ಏಣಿಯ ಮೆಟ್ಟಿಲುಗಳೆಲ್ಲವೂ ಸಾವಿನ ಲಗಾಮಿನಂತೆ ಕಾಣುತ್ತವೆ, "ಕಾರಣವಿರದೆ/ಹೆಣ ಉರುಳಿಸುವ ಹೆದ್ದಾರಿಯಲ್ಲಿ/ ಸಾವನು ನಾಲಗೆಯ ತುದಿಯಲ್ಲಿಟ್ಟುಕೊಂಡು/ ನಡೆಯಬೇಕಿರುವ ವಿಪರ್ಯಾಸ ನಮ್ಮದು", 'ಸಾವೆಂಬ ಸಹಜ ಸುಂದರಿ ಸಿಕ್ಕಿದವರ ಹೊಕ್ಕುತ್ತಿರುವ' ಆಧುನಿಕತೆಯ ಚಳಕ ಗಾರುಡಿಯ ಮುಖ ಹೊತ್ತು ಬಂದಿದೆ: "ಅವಳು ಮಾತ್ರ ಅದ್ಯಾವ ಆಧುನಿಕ ವಿದ್ಯೆ ಕಲಿತಳೊ ಗೊತ್ತಿಲ್ಲ/ನನ್ನೊಂದಿಗೆ ಎಲೆಯಾಗಿದ್ದವಳು/ ಯಾವುದೋ ದೂರದೂರಿನ ಮುಖ ಕಾಣದ ಪಕ್ಷಿಯೊಂದಿಗೆ/ ಸಂಗ ಮಾಡಿ ತಾನೂ ರೆಕ್ಕೆ ಕಟ್ಟಿಕೊಂಡು/ ಹಕ್ಕಿಯಾಗಿ ಹಾರಿಹೋದಳು. ಆಧುನಿಕತೆ ಎನ್ನುವುದು ಅಭಿವೃದ್ಧಿಯ ಕುರುಹು ಎನ್ನುವುದು ಪಶ್ಚಿಮದ ಹುನ್ನಾರ. ಈ ಹುನ್ನಾರದ ಹಿಂದಿರುವ ಮಿಥ್ಯೆಯನ್ನು ಕವಿ ಇಲ್ಲಿ ಒಡೆಯುತ್ತಾರೆ. ಆಧುನಿಕತೆ ಮಿಡಿನಾಗರ ಆಡುತ್ತಿರುವ ಸಮಾಜದಲ್ಲಿ -"ಸಭ್ಯರು ಮಾಡಿದ ಕೊಳೆಯನ್ನೆಲ್ಲ ಮೈದುಂಬಿಕೊಂಡು/ ಓಡುತ್ತಿವೆ ದೊಡ್ಡ ಊರಿನ ಚಿಕ್ಕ ಚಿಕ್ಕ ಗಟಾರುಗಳು ಸ್ಲಂ ಕಡೆಗೆ." ಈ ಕವನಗಳು ನಾಗರಿಕತೆಯ ಪೊಳ್ಳನ್ನು ಬಟಾಬಯಲುಗೊಳಿಸುತ್ತವೆ.

ನಮ್ಮ ಇರುವು ಅಪನಂಬಿಕೆಯ ಜಾಗರ. ಹಾಗಾಗಿಯೇ "ಈ ಹೊತ್ತು ನಂಬಿಕೆಯ ಜಗತ್ತನ್ನು ಅನುಮಾನಿಸುವ ಸಮಯ" ರೂಪಕಗಳ ಪರಿಭಾಷೆಯಲ್ಲಿ ಜಗತ್ತಿನ ಕ್ರೌರ್ಯದ ವಿಸ್ತಾರ ಪಾತ್ರವನ್ನು ಹರವುತ್ತಾರೆ:

"ತಲೆಕೆಳಗಾದ ಮಾವಿನೆಲೆಯ ಮೈತುಂಬ
ಎಂಥದೋ ಗಾಯ
ಚೆಂಡು ಹೂವಿನ ದಳದಳದಲ್ಲಿ ಕಡು ಸಂಕಟ"

ಈ ಜಗದಲ್ಲಿ ತೋಳು ಚಾಚಿದ ಬಳ್ಳಿಯ ಮೃತ್ಯು ಬಂದಪ್ಪುತ್ತದೆ. ದುಗುಡ, ದುಮ್ಮಾನ, ಕಷ್ಟ-ಕಾರ್ಪಣ್ಯಗಳು ಅಕ್ಷಯವಾಗುತ್ತಲೇ ಇವೆ. ಜೊತೆಗೇ ಎದತಾಕುವ ಕಾಠಿಣ್ಯದೆದೆಗಳು. ಅಂತುಸ್ತು ಹಾಗೂ ವಹಿವಾಟಿನ ಗಮ್ಮತ್ತಿನಲ್ಲಿರುವ "ಭೋಗ ಜಗತ್ತಿನ ವಾರಸುದಾರರು"ಗಳ ನಿಷ್ಕರುಣೆ ಮತ್ತು ದಿವ್ಯ ನಿರ್ಲಕ್ಷ್ಯ ಬೆನ್ನ ಹುರಿಯಲ್ಲಿ ನಡುಕ ತರುತ್ತವೆ. ಆಡೆನ್‌ನ ಪದ್ಯದಲ್ಲಿ ಇಕಾರಸ್ ಎಂಬ ಹುಡುಗ ಮೇಣದ ರೆಕ್ಕೆ ಮುರಿದು ಹಸಿರು ಕಡಲಿಗೆ ಬೀಳುವುದನ್ನು ತಣ್ಣಗೆ ಗಮನಿಸುತ್ತಾರೆ ಜನ ಇಲ್ಲಿ -"ವಿಮಾನದಲ್ಲಿ ಹೊರಟವರಿಗೆ/ನೆಲದ ಮೇಲೆ ಬಿದ್ದ ಹೆಣ/ಬೇಸರ ಮರೆಸುವ ಸರಕಿನಂತೆ ಕಾಣುತ್ತವೆ." ಹಾಗೆಯೇ "ಬರಗಾಲದ ಎರೆಹೊಲದ ಒಡಲು ಬರಿದ ಚಿತ್ರ/ ನಿಮಗೆ ದುಗುಡ ಮೂಡಿಸುವುದಿಲ್ಲ ಬಿಡಿ" ಎನ್ನುತ್ತಲೇ ಕವಿ ನಮ್ಮ ಅಂತಃಕರಣ ಕಲಕುತ್ತಾರೆ.

ಸಮತೆಯ ಅಡಿಪಾಯದ ಮೇಲೆ ಆರೋಗ್ಯಪೂರ್ಣ ಸಮಾಜವನ್ನು ನಿಲ್ಲಿಸುವ ಕಡೆಗೆ ಕವಿಯ ತುಡಿತವಿದೆ. 'ಬಂಡಾಯದ ಕನಸಿನ ಹಕ್ಕಿ' ಎತ್ತ ಸಾಗಿದೆ ಎಂದು ವೀರಣ್ಣ ಗುರುತಿಸುತ್ತಾರೆ. "ಕೊಕನ್ನೇ ಕತ್ತಿಯಾಗಿಸಿ ವಚನ ಬಂಡಾಯದ ಕಾವಲು ಕಾದ ಹಕ್ಕಿ/ ಅಲ್ಲಮನ ಬಯಲಲಿ ಅನಾಥ ಬಿದ್ದಿದೆ." ಅವರ ಕಾವ್ಯದಲ್ಲಿ ಬಂಡಾಯ, ಪ್ರತಿರೋಧ ಸೆಲೆ ಅಂತರ್ಗತವಾಗಿ ಹರಿಯುತ್ತಿದೆ. ಹಿಂಸೆಯಲ್ಲಿ ಅದ್ದಿಟ್ಟ ಮನಸ್ಸುಗಳಿಂದ ಅರ್ಥಪೂರ್ಣ ಬಂಡಾಯ ಸಾಧ್ಯವಿಲ್ಲ ಎಂದು ಕವಿ ಮನಗಂಡಿದ್ದಾರೆ.

ಆಡುಭಾಷೆ, ನುಡಿಗಟ್ಟು ರೂಪಕಗಳು ಕಿಕ್ಕಿರಿದಿರುವ ವೀರಣ್ಣರ ಕಾವ್ಯ ಕೆಲವು ಕಡೆ ವಾಚ್ಯ, ಗದ್ಯಮಯವೆನ್ನಿಸುತ್ತದೆ. ಆದರೆ ಸಮಾಜದ ಓರೆಕೋರೆಗಳನ್ನು ಮಥಿಸಲು, ಸಾದರಪಡಿಸಲು ವಾಚ್ಯವಾಗುವುದು ಅನಿವಾರ್ಯತೆಯೇನು ಎಂತಲೂ ಅನ್ನಿಸುತ್ತದೆ.

ನೋವು, ಜಂಜಡ, ದುಗುಡ, ದುಮ್ಮಾನ, ಬವಣೆಗಳ ಸಾಲುಸಾಲು ಚಿತ್ರಣಗಳು ಸಮಾಜ ಹಾಗೂ ಬದುಕಿನ ಬಗ್ಗೆ ತೀವ್ರ ನಿರಾಶೆ ಮೂಡಿಸುತ್ತವೆ ಎನ್ನುವುದೇನೋ ನಿಜ. ಆದರೆ ಈ ದುರ್ಭರ ಸನ್ನಿವೇಶದಲ್ಲಿಯೂ ಕವಿ ಬದುಕಿನ ಬಗ್ಗೆ ಆಶಾವಾದಿ

"ಈ ಉಲ್ಕಾಪಾತದಲಿ ನಕ್ಷತ್ರಗಳುದುರಿ
ಮರುಭೂಮಿಯಲಿ ಬೀಜವಾಗಿರುವಾಗ
ಮಳೆ ಬರುವುದು ಖಾತರಿಯಾಗಿದೆ
ಆದೋ ಹನಿಯುದುರುತಿದೆ"

ಬೆಳಕನ್ನೆಲ್ಲ ಇದಿ ಇಡಿಯಾಗಿ ನುಂಗಿ ಕುಬ್ಜಕಾಯನಾಗುತ್ತಿದ್ದಾನೆ ಮನುಷ್ಯ. ಈ ದುರಂತವನ್ನು ಕೊನೆಗಾಣಿಸುವುದು 'ನೆಲದ ನಕ್ಷತ್ರಗಳಿಂದ ಮಾತ್ರ ಸಾಧ್ಯ' ಎಂಬುದು ಕವಿಯ ಕಾಣ್ಕೆ. ಚಿಂತನೆ-ಪ್ರಧಾನವಾದ ವೀರಣ್ಣರ ಕಾವ್ಯ ಇನ್ನೂ ಹಲವು ಧಾರಣೆಗಳನ್ನು, ದಾರಿಗಳನ್ನು ಒಳಗೊಳ್ಳಲಿ ಎಂದು ಹಾರೈಕೆ.

• ಆರ್. ಪವಿತ್ರ ಪ್ರಿಯಭಾಷಿಣಿ


ಪದ್ಯ ಸಾಗುತಿದೆ ನೋಡಿದಿರಾ

ಅಕ್ಷರಗಳು
ಹೆಜ್ಜೆ ಮೇಲೆ ಹೆಜ್ಜೆ ಊರಿ
ಭಂಗುಭಂಗನೆ ಲಂಘಿಸುತ್ತಾ
ಇದರ ಚಪಲ ಅದಕೆ ಎಗರಿ
ಅದು ಎಡವಿದರೆ ಇದು ಬೆದರಿ
ಎಲ್ಲ ಎಡವಟ್ಟು .

ಒಂದೇ ಸ್ವರದಲಿ ಕಿರುಚಲು ನೋಡಿ
ಸಾ ಪಾ ಸ ಹೊಂದದೆ ತಮ್ಮತಮಗೇ ಗುರುತು ಸಿಗದೆ
ಅರ್ಥದ ಮರದಲಿ
ಮುನಿಸಿ ದೂರ ಕೂತ ಪದಕೂ ಇರಲೆಂದು
ಹಲ್ಲು ಕಿರಿವ ಚಟ ಬೆಳೆದು
ಸಡಗರದಲ್ಲಿ ಗುರುವೇ ಲಘುವಾಗಿ ಢೀ ಕೊಟ್ಟು
ಒಟ್ಟಿಗೆ ಕವುಚಿಕೊಂಡು ಕಿಂಚಿದೂನವಾಗಿ

ಗುರಿಯೂ ಇಲ್ಲದೆ ಗತಿಯೂ ಇಲ್ಲದೆ
ಬಿದ್ದಿವೆ ಪಿಳಿಪಿಳಿ ಉಮ್ಮಳಿಸುತ್ತ
ರನ್ನ ಷಡಕ್ಷರಿ ಪೊನ್ನ ಪಂಪ ಲಕುಮಿಪತಿ ಜನ್ನ
ಸುಡದಿರಿ ಉರಿಗಣ್ಣಲ್ಲಿ
ಕ್ಷಮಿಸಿರಿ ಕಾವ್ಯವನಳಿದೀ ಲಿಪಿ ಸೈನ್ಯವ


• ಸುಮಾ ಎಂಬಾರ್



ಜಾತಿದ್ವೇಷದ ನಂಜು ಕಕ್ಕಿದ ಮೋದಿ

ಇಂಗ್ಲಿಷ್ ಮೂಲ : ಆನಂದ್ ತೇಲ್‌ತುಂಬ್ಡೆ

ಕನ್ನಡಕ್ಕೆ : ಸುರೇಶ್‌ಭಟ್ ಬಾಕ್ರಬೈಲು



ರೇಂದ್ರ ಮೋದಿ ಬರೆದಿರುವ 'ಸಾಮಾಜಿಕ್ ಸತಾ' ಎಂಬ ಪುಸ್ತಕವೊಂದನ್ನು ಏಪ್ರಿಲ್ 25ರಂದು ಗಡೆ ಮಾಡಲಾಯಿತು. ಆ ಸಂದರ್ಭದಲ್ಲಿ ಾಡಿದ ಮೋದಿ ದಲಿತರು ಬುದ್ಧಿಮಾಂದ್ಯ ಮಕ್ಕಳಿಗೆ ನರೆಂದು ಹೇಳಿದರೆನ್ನಲಾಗಿದೆ. ಮೋದಿಯ ಈ ಕಾಂಗ್ರೆಸ್ ವರ್ತುಲಗಳಲ್ಲಿ ಕೋಲಾಹಲಕ್ಕೆ ವಾಯಿತು.

ೋದಿ ಇದಕ್ಕೂ ಮುಂಚೆ ನೀಡಿದ್ದ ಇನ್ನೊಂದು ಯ ಪ್ರಕಾರ ವಾಲ್ಮೀಕಿ ಸಮುದಾಯದವರು ಹೊರುವುದು "ಆಧ್ಯಾತ್ಮಿಕ ಅನುಭವ"ಕ್ಕಾಗಿ ಅಂತೆ. ದ ತೀವ್ರ ಕುಪಿತಗೊಂಡ ಕ್ರಿಯಾವಾದಿ ಗುಂಪುಗಳು ವಿರುದ್ಧ 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದ ದೌರ್ಜನ್ಯ ತಡೆ ಕಾಯ್ದೆ, 1989' (ಅಥವಾ ದೌರ್ಜನ್ಯ ಕಾಯ್ದೆ) ಅಡಿಯಲ್ಲಿ ಪ್ರಕರಣ ಿಸುವ ಸಾಧ್ಯತೆ ಬಗ್ಗೆ ಚರ್ಚಿಸಲಾರಂಭಿಸಿದವು. ಸಾಧ್ಯಾಸಾಧ್ಯತೆ ಕುರಿತ ನಿರ್ಧಾರ ಕಾನೂನು ರಿಗೆ ಬಿಟ್ಟದ್ದು, ಏಕೆಂದರೆ ಮೋದಿ ತನ್ನ ಹೇಳಿಕೆಯ ರ್ಥವೇನೆಂದು ಹೇಳುವುದಂತೂ ಖಚಿತ. ಮಾಂದ್ಯ ಮಕ್ಕಳ ಭಾರೀ ದೊಡ್ಡ ಪೋಷಕನಂತೆ ಹಾಕಿ ಹೇಗೆ ಅಂತಹ ಮಕ್ಕಳ ವಿಷಯದಲ್ಲಿ ಕಾಳಜಿ ವಹಿಸ ಬೇಕಿದೆಯೋ ಹಾಗೆಯೆ ವನ್ನೂ ನೋಡಿ ಕೊಳ್ಳಬೇಕಾಗಿದೆ ಎನ್ನುವುದು ಮಾತುಗಳ ತಾತ್ಪರ್ಯವೆಂದು ಆತ ಬಹುದು. ಹೀಗಾಗಿ ಕಾಯ್ದೆ ಆತನಿಗೆ ಸದೆ ಹೋಗಬಹುದು.

ೋದಿಯ ಹೇಳಿಕೆ ಮೇಲ್ಜಾತಿಗಳ ಾಯಗಳನ್ನು ಯಾವುದೋ ಒಂದು ಲ್ಲಿ ಬಿಂಬಿಸುತ್ತದೆ. ಮೂಲಭೂತವಾಗಿ ದಾರ್ಯದ ಪ್ರದರ್ಶನ ಬ್ರಾಹ್ಮಣವಾದಿ ಜದಲ್ಲಿನ ವರ್ಣಾಶ್ರಮ ಪದ್ಧತಿಯ ತೀರಾ ಅಭಿವ್ಯಕ್ತಿಯಾಗಿದೆ ಎನ್ನುವುದು ಷ್ಟು ಮಂದಿಗೆ ತಿಳಿಯುವುದಿಲ್ಲ. ದಿಯ ಈ ಹೇಳಿಕೆಗೆ ಸಾರ್ವತ್ರಿಕ ನೆ ವ್ಯಕ್ತವಾಗಬೇಕಿದೆ.

ಹ್ಮಣವಾದದ ದುರ್ನಾತ

ಬ್ರಾಹ್ಮಣವಾದದ ಮೂಲ ಸಿದ್ಧಾಂತದ ಪೂರ್ವಜನ್ಮದಲ್ಲಿ ಗಳಿಸಿದ ಪುಣ್ಯದ ಾಣಕ್ಕನುಗುಣವಾಗಿ ದೇವರು ವರನ್ನು ಅಸಮಾನರಾಗಿ ಸೃಷ್ಟಿಸುತ್ತಾನೆ. ಈ ದೈವಾಜ್ಞೆಯನ್ನು ಪಾಲಿಗೆ ಬಂದ ಮೃತವೆಂದು ತಿಳಿದು, ಅದರೊಂದಿಗೆ ಮಾಡಿಕೊಂಡು, ತಮ್ಮ ಧರ್ಮವನ್ನೇ ದರೆ ಮಾತ್ರ ಮುಂದಿನ ಬಾರಿ ಇನ್ನಷ್ಟು ಮ ಜನ್ಮವನ್ನು ಪಡೆಯಲು ಗುವಷ್ಟು ಪುಣ್ಯವನ್ನು ಸಂಪಾದಿಸಬಹು . ಪತಿತರ ಕುರಿತಂತೆ ಉಚ್ಚಜಾತಿಗಳ ತಿ ದಯಾಳು ಮನೋವೃತ್ತಿಯ ುವುದು ಬ್ರಾಹ್ಮಣ ವಾದದ ಇದೇ ಸಿದ್ಧಾಂತ. ದಲಿತರು ನೀಚರು, ತಾವು ಉಚ್ಚರೆಂದು ೊಳ್ಳುತ್ತದೆ; ತಮ್ಮದು ಕುಲೀನ ಜನ್ಮವಾಗಿರುವುದರಿಂದ ರ ಮೇಲೆ ಕರುಣೆ ತೋರು ವುದು ಮತ್ತು ಅವರ ಿತವನ್ನು ಸುಧಾರಿಸುವುದ ಕ್ಕಾಗಿರುವ ಧರ್ಮ ಾಲನೆಗೆ ಅವರಿಗೆ ನೆರವಾಗುವುದು ತಮ್ಮ ್ಯವೆಂದು ಮೇಲ್ಜಾತಿ ಜನಗಳು ಭಾವಿಸುತ್ತಾರೆ. ಇಂತಹ ಮನೋವೃತ್ತಿಯನ್ನು ಎಷ್ಟೊಂದು ಹಗುರವಾಗಿ, ನ್ನು ತಾವು ಅಭಿನಂದಿಸಿಕೊಳ್ಳುವ ರೀತಿಯಲ್ಲಿ ಸಲಾಗುತ್ತದೆಂದರೆ ಇದರಿಂದ ದಲಿತರಿಗೆ ಅತ್ಯಧಿಕ ಾನವಾಗುತ್ತದೆ ಎಂಬುದರ ಲವಲೇಶದಷ್ಟು ಸುಳಿವೂ ಅವರಿಗಿರುವುದಿಲ್ಲ, ಇದು ದಲಿತರನ್ನು ಜಾತಿ ಲ್ಲಿ ನಿಂದಿಸುವುದಕ್ಕಿಂತಲೂ ಹೆಚ್ಚು ಕೆಟ್ಟದಾಗಿದೆ. ದರೆ ಜಾತಿನಿಂದನೆಯನ್ನಾದರೆ ದಲಿತ ದೌರ್ಜನ್ಯ ಯಡಿಯಲ್ಲಿ ಅಪರಾಧವೆಂದು ಪರಿಗಣಿಸಲು ದೆ.

ಾಂಧಿಯ ಹರಿಜನ ಕಲ್ಪನೆಯನ್ನು ಅಂಬೇಡ್ಕರ್ ಿದ್ದು ಇದೇ ಕಾರಣಕ್ಕೆ. ಕಾಂಗ್ರೆಸ್ 'ಹರಿಜನ ಸೇವಕ ಳ ಮುಖಾಂತರ ದಲಿತರನ್ನು ಸೆಳೆದುಕೊಳ್ಳಲೆತ್ನಿಸಿದಾಗ ರನ್ನು ಅನುಕಂಪದ ಮೂಲಕ ಕೊಲ್ಲುವ ಕಾಂಗ್ರೆಸ್ ನೆ" ಎಂದು ಜರಿದು ಅದನ್ನು ತಳ್ಳಿಹಾಕಿದ್ದರು. ಡ್ಕರ್‌ಗೆ ಕೇವಲ ಗಾಂಧಿ ಬಗ್ಗೆ ಮಾತ್ರವಲ್ಲ ಭಕಿ ಸಂತರ ಬಗ್ಗೆಯೂ ಅಸಹನೆ ಇತ್ತು. ಗಾಂಧಿ ದ್ದರೂ ರಾಜಕೀಯ ಲೆಕ್ಕಾಚಾರಗಳಿಂದ ಪ್ರೇರಿತರಾಗಿದ್ದ ಕ್ತಿಪಂಥದ ಸಂತರ ಸ್ವಾನುಕಂಪ ಅಥವಾ ಅವರೆಲ್ಲರೂ ವಸ್ಥೆಯ ಹಿಂದಿನ ಮೂಲ ಸಿದ್ಧಾಂತವನ್ನು ಪ್ರಶ್ನಿಸದೆ ಸೌಮ್ಯ ರೀತಿಯಲ್ಲಿ ಟೀಕಿಸುತ್ತಿದ್ದ ಪರಿ ಅಂಬೇ ಸಹ್ಯವಾಗಿರಲಿಲ್ಲ. 14ನೇ ಶತಮಾನದ ಭಕ್ತಿಪಂಥದ ೋಖಮೇಳನ ವಂಶಸ್ಥರು ತಾವು ಅಥವಾ ಆತನಿಂದ ಪಡೆದವರೆಂದು ಸಾಧಿಸಲೆತ್ನಿಸುತ್ತಿದ್ದ ಮಹಾರ್ ನ್ನು ಅಂಬೇಡ್ಕರ್ ಪದೇಪದೇ ಬಹಿರಂಗವಾಗಿ ದುದರ ಹಿಂದೆ ಇದೇ ತರ್ಕ ಕೆಲಸಮಾಡಿದೆ. ಡ್ಕರ್ ದೃಷ್ಟಿಯಲ್ಲಿ ಭಕ್ತಿಪಂಥದ ಸಂತರು ಕ್ರಾಂತಿಕಾರಿಗಳಲ್ಲ; 'ಎಲ್ಲವೂ ದೈವೇಚ್ಛೆ ಮನುಷ್ಯನ ಕೈಯಲ್ಲೇನೂ ಇಲ್ಲ'ವೆಂಬ ದಾಸ್ಯಮನೋಭಾವ ತೋರಿಸುವವರು, ಸಂಪ್ರದಾಯಶರಣರು. ಆದುದರಿಂದ ಈ ಅಸಹ್ಯಕರ ಸಿದ್ಧಾಂತದೊಂದಿಗೆ ದೂರಸಂಬಂಧಪಟ್ಟ ಯಾವುದೇ ವಿಷಯವಿರಲಿ ಅದು ದಲಿತರಿಗೆ ಅವಮಾನಕಾರಿಯಾಗಿದೆ. ಮೋದಿಯ ಮಾತುಗಳು ದುರ್ನಾತ ಬೀರುತ್ತಿವೆ.

ಪಾರ್ಶ್ವವಾಯುಪೀಡಿತ ಬುದ್ಧಿಗಳೂ, ವ್ಯಾಧಿಗ್ರಸ್ತ ಸಮಾಜವೂ

ದಲಿತರನ್ನು ಬುದ್ಧಿಮಾಂದ್ಯ ರೆಂದು ಕರೆಯುವ ಮೋದಿಗೆ ತನ್ನ ಬೌದ್ಧಿಕ ಸಾಮರ್ಥ್ಯದ ಬಗ್ಗೆ ಮಿತಿಮೀರಿದ ದುರಹಂಕಾರವಿದೆ. ಮೊದಲನೆಯದಾಗಿ ಮೋದಿ ಯಾವ ಮತಧರ್ಮವನ್ನು ಗಟ್ಟಿಯಾಗಿ ನಂಬಿದ್ದಾರೋ ಅದು ಶೂದ್ರ ಸಮುದಾಯಕ್ಕೆ ಸೇರಿದ ಆತನನ್ನು ಮೂಲತಃ ಹೆಡ್ಡನೆಂದು ಪರಿಗಣಿಸುತ್ತದೆ. ಹೀಗಿರುವಾಗ ವಿಶೇಷವಾಗಿ ಇತರರ ಮಾಂದ್ಯತೆ ಕುರಿತು ಉಪದೇಶ ಕೊಡುವಂತಹ ಸ್ಥಿತಿಯಲ್ಲಿ ಆತ ಇರಲಾರರು. ಎರಡನೆಯದಾಗಿ, ಮೋದಿ ನಿಜಕ್ಕೂ ಬುದ್ಧಿವಂತನಿದ್ದರೆ ಈ ಅಸಮರ್ಥತೆ, ಬುದ್ಧಿ ಮಾಂದ್ಯತೆ ಅಥವಾ ಇನ್ನಾವುದೇ ಇರಲಿ ಅದು ದಲಿತರಲ್ಲಿರುವುದಲ್ಲ, ಅದಿರುವುದು ಸಮಾಜದಲ್ಲಿ ಎನ್ನುವುದು ಆತನಿಗೆ ತಿಳಿದಿರಲೇಬೇಕು. ರೋಗಪೀಡಿತವಾಗಿರುವುದು ಹಿಂದೂ ಸಮಾಜವೇ ಹೊರತು ದಲಿತರಲ್ಲ. ಈ ವ್ಯಾಧಿಗ್ರಸ್ತ ವ್ಯವಸ್ಥೆಯನ್ನು ದಲಿತರೂ ತಮ್ಮೊಳಗೆ ಅನುಕರಿಸಿರುವುದರಿಂದ ನಿಸ್ಸಂದಿಗ್ಧವಾಗಿ ಅವರಿಗೂ ಈ ಜಾಡ್ಯದ ಸೋಂಕು ಅಂಟಿದೆ. ಸೋಂಕು ತಗಲಿರುವುದಂತೂ ಖಚಿತ ಏಕೆಂದರೆ ಜಾತಿಪದ್ಧತಿಯ ಸಂಹಾರಕ್ಕಾಗಿ ಅಂಬೇಡ್ಕರ್ ಕಹಳೆ ಮೊಳ ಗಿಸಿದ ಹೊರತಾಗಿಯೂ ಅವರಲ್ಲನೇಕರು ವಿವೇಚನಾರಹಿತ ರಾಗಿ ಜಾತಿವ್ಯವಸ್ಥೆಗೇ ಅಂಟಿಕೊಳ್ಳುತ್ತಾರೆ. ಅದು ಬೇರೆ ವಿಷಯ. ಸಮಾಜ ತನ್ನದೇ ಜನರನ್ನು ಸಮಾನತೆಯ ಆಧಾರದಲ್ಲಿ ಕಾಣಲು ಅಸಮರ್ಥವಾಗಿರುವುದರಿಂದ ಅದನ್ನು ರೋಗಪೀಡಿತವೆಂದು ಪರಿಗಣಿಸುವುದು ಮುಖ್ಯ. ಸಮಾಜ ತನ್ನ ಸುದೀರ್ಘವಾದ ದಾಸ್ಯದ ಇತಿಹಾಸದಿಂದ ಪಾಠ ಕಲಿತುಕೊಂಡಿಲ್ಲ. ಹೀಗಾಗಿ ಅದು ಬುದ್ಧಿಮಾಂದ್ಯತೆಗೊಳಗಾಗಿದೆ. ಸಮಾಜವನ್ನು ಜಾತಿಯ ಆಧಾರದಲ್ಲಿ ವರ್ಗೀಕರಿಸುವ ಸಮೀಪದೃಷ್ಟಿಯ ಚಿಂತನೆಯೇ ಇದಕ್ಕೆ ನೇರ ಕಾರಣ. ಮೋದಿ ಈಗ ಓರ್ವ ಮುತ್ಸದ್ದಿಯಾಗುವುದು ಹೇಗೆನ್ನುವುದನ್ನು ಕಲಿತು ನಮ್ಮ ಸಮಾಜದ ಶಕ್ತಿಯನ್ನು ಕುಂದಿಸುತ್ತಿರುವ ಈ ರೋಗವನ್ನು ಗುಣಪಡಿಸುವುದು ಹೇಗೆಂಬುದರ ಬಗ್ಗೆ ಯೋಚಿಸಬೇಕು.

ಮೀಸಲಾತಿ ಕುರಿತ ಚರ್ಚೆಗಳಲ್ಲಿ ಈ ಗಂಭೀರ ವಿಷಯವನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗುತ್ತಿದೆ. ದಲಿತರು ಅಂಗವಿಕಲರೆಂದು ಯೋಚಿಸುವುದು ಶುದ್ಧ ಬ್ರಾಹ್ಮಣವಾದ. ದಲಿತರಿಗೆ ಮೀಸಲಾತಿಯ ಅವಶ್ಯಕತೆ ಉಂಟಾದುದು ಅವರಲ್ಲಿ ಅರ್ಹತೆ ಅಥವಾ ಕೌಶಲ್ಯಗಳ ಕೊರತೆಯಿದೆ ಎಂಬ ಕಾರಣಕ್ಕಲ್ಲ; ದಲಿತರಿಗೆ ಸಿಗಬೇಕಿರುವುದನ್ನು ಸಮಾಜದಲ್ಲಿರುವ ಪೂರ್ವಗ್ರಹಗಳು ಸಿಗಬಿಡುತ್ತಿಲ್ಲ, ಈ ಉದ್ದೇಶಪೂರ್ವಕವಾಗಿ ಹೇರಲ್ಪಟ್ಟ ಹಿಂದುಳಿದಿರುವಿಕೆಯನ್ನು ಎರಡು ಸಹಸ್ರಮಾನಕ್ಕೂ ಅಧಿಕ ಕಾಲ ಅನುಭವಿಸಿರುವ ಅವರು ಆರಂಭದಲ್ಲಿ ದುರ್ಬಲರಂತೆ ಕಂಡುಬಂದಿರುವುದು ನಿಜ. ಆದರೆ ಇದು ಮೀಸಲಾತಿ ಅಂದರೆ ಒಂದು ವಿಧದ ಸಹಾಯಹಸ್ತ ಎನ್ನುವ ತಪ್ಪು ಅಭಿಪ್ರಾಯವೊಂದಕ್ಕೆ ಎಡೆಮಾಡಿಕೊಟ್ಟಿತು. ಇದರಿಂದಾಗಿ ಗಣನೀಯ ಮಟ್ಟದ ಹಾನಿಯಾಗಿದೆ. ಮೀಸಲಾತಿ ಎಂಬುದು ಸಮಾಜವನ್ನು ಸಭ್ಯವರ್ತನೆಗೆ ಬಲವಂತಪಡಿಸುವ, ಒಂದು ಸರಿದೂಗಿಸುವ ಕ್ರಮವೆಂದು ಪರಿಗಣಿಸಿದ್ದರೆ ಅದು ಸಮಾಜ ತನ್ನ ದೌರ್ಬಲ್ಯದ ಮೇಲೆ ಜಯಸಾಧಿಸುವ ಒಂದು ಅವಲಂಬಿತ ಸಾಧನವಾಗಿರುತ್ತಿತ್ತು; ಅದು ಸಮಾಜದ ಹೊಣೆಗಾರಿಕೆ ಆಗಿರುತ್ತಿತ್ತು.

ಮೋದಿಯ ನೆಚ್ಚಲಾಗದ ಸಾಮರಸತೆ

ಮೋದಿ ಹೇಳಿರುವುದು ಮೂಲತಃ ಜಾತಿಪದ್ಧತಿಗಾಗಿ ಆರೆಸ್ಸೆಸ್ ತಯಾರಿಸಿರುವ ಸಾಮರಸತೆಯ ಪರಿಹಾರ. ಅದರ ಉದ್ದೇಶ ತನ್ನ ಕೋಮುವಾದಿ ಕಾರ್ಯಸೂಚಿಗಾಗಿ 'ಹಿಂದೂಗಳೆಲ್ಲಾ ಒಂದು' ಎಂಬ ಗುರುತಿಸಿಕೊಳ್ಳುವಿಕೆಯನ್ನು ಗಟ್ಟಿಗೊಳಿಸುವುದು. ಅದು ಹಿಂದೂಗಳ ಹಾಗೂ ಅವರ ಧರ್ಮ, ಸಂಸ್ಕೃತಿ ಇತ್ಯಾದಿಗಳ ಶ್ರೇಷ್ಠತೆಯಲ್ಲಿ ನಂಬಿಕೆ ಇರಿಸಿಕೊಂಡು ಅದನ್ನೆಲ್ಲ ಪುನಃ ಗಳಿಸಲೆತ್ನಿಸುತ್ತಿದೆ. "ಹಿಂದೂ"ಗಳನ್ನು ಗುರುತಿಸುವ ಪ್ರಮುಖಾಂಶವಾದ ವರ್ಣ ವ್ಯವಸ್ಥೆಯಲ್ಲಿ ಅದಕ್ಕೆ ಯಾವ ದೋಷವೂ ಕಾಣಿಸದಿರುವುದು ಸ್ವಾಭಾವಿಕವೇ ಆಗಿದೆ. ಅದರ ಪ್ರತಿಪಾದಕರು ಅದನ್ನು ಸಮರ್ಥಿಸಿಕೊಳ್ಳುವಾಗ ಜನರನ್ನು ಗೊಂದಲದಲ್ಲಿ ಕೆಡವುದಕ್ಕಾಗಿ ಎಲ್ಲಾ ಬಗೆಯ ಸೈದ್ಧಾಂತಿಕ ಕಸರತ್ತುಗಳನ್ನು ನಡೆಸುತ್ತಾರೆ. ಅದರ ತಂತ್ರಭಂಡಾರದಲ್ಲಿ ಜಾಣತನದ ಅನೇಕ ಅಮೂಲ್ಯ ಸಂಗ್ರಹಗಳಿವೆ. ಜಾತಿಗಳ ಕುರಿತ ಒಂದು ಮಾದರಿಯನ್ನು ಗೋಲ್ವಲ್ಕರ್‌ನ ಘೋಷವಾಕ್ಯವಾದ "ಸಬ್ ಜಾತಿ ಮಹಾನ್, ಸಬ್ ಜಾತಿ ಸಮಾನ್"ದಿಂದ ಪಡೆಯಲಾಗಿದೆ. ಸಾಮರಸತಾ ಯೋಜನೆಯ ಹಿಂದಿರುವುದು ಇದೇ ಎಂದು ತೋರುತ್ತದೆ. ವಾಸ್ತವದಲ್ಲಿ ಈ ಘೋಷಣೆ ಬರೀ ಆಡಂಬರದ ಶಬ್ದಗಳಿಂದ ಕೂಡಿದೆ ಏಕೆಂದರೆ ನಿಜಕ್ಕೂ ಗೋಲ್ವಲ್ಕರ್ ತನ್ನ ಕರ್ಮಠ ಬ್ರಾಹ್ಮಣ್ಯದ ಸ್ಥಾನದಿಂದ ಲವಲೇಶವೂ ಆಚೀಚೆ ಸರಿದಿಲ್ಲ. ಎಲ್ಲಾ ವರ್ಣಗಳು (ಮತ್ತು ಜಾತಿಗಳು) ಒಂದೇ ವಿರಾಟ್ ಪುರುಷನ ಅಂಗಾಂಗಗಳಾಗಿರುವುದರಿಂದ ಅವೆಲ್ಲವೂ ಸಮಾನವೆಂದು ಅದು ಹೇಳುತ್ತದೆ. ಇದರ ನಿಜಾರ್ಥ ಏನೆಂದರೆ ಎಲ್ಲಾ ಜಾತಿಗಳೂ ತಮತಮಗೆ ವಿಧಿಸಲಾಗಿರುವ ಕಾರ್ಯಭಾರಗಳನ್ನು ತಮ್ಮ ಧರ್ಮವೆಂದು ತಿಳಿದು ಮಾಡಬೇಕು. ವಾಲ್ಮೀಕಿಗಳು ಮಲಹೊರುತ್ತಲೇ ಇರಬೇಕು! ಮೋದಿಗಳು ರಾಜ್ಯಭಾರ ಮಾಡುತ್ತಲೇ ಇರಬೇಕು!!

ನಿಜಕ್ಕೂ ಸಾಮರಸತಾ ಎನ್ನುವುದು ಸಂಘ ಪರಿವಾರದ ರಾಜಕೀಯವಾಗಿ ಉಪಯುಕ್ತ ರಣನೀತಿಯಾಗಿದ್ದು ಅದು 1983ರ ಏಪ್ರಿಲ್ ತಿಂಗಳಲ್ಲಿ ಉದ್ಘಾಟನೆಗೊಂಡಿದೆ. ಆರೆಸ್ಸೆಸ್ ಅಪ್ಪರತನಕ ದಲಿತರನ್ನು ಪ್ರಜ್ಞಾಪೂರ್ವಕವಾಗಿ ತನ್ನ ತೆಕ್ಕೆಗೆ ಸೆಳೆದುಕೊಳ್ಳುವ ವಿಶೇಷ ಅಗತ್ಯವಿದೆಯೆಂದು ಭಾವಿಸಿರಲಿಲ್ಲ. ಸಮ್ಮಿಶ್ರ ಸರಕಾರಗಳ ಯುಗ ಸನ್ನಿಹಿತವಾದ ಸಂದರ್ಭದಲ್ಲಿ ಚುನಾವಣಾ ರಾಜಕೀಯದಲ್ಲಿ ಸ್ಪರ್ಧೆ ಹೆಚ್ಚಿ ಇದರಲ್ಲಿ ದಲಿತರ ಮತಗಳು ಪ್ರಧಾನವಾಗಲಿವೆ ಎಂದಾದಾಗ ಆರೆಸ್ಸೆಸ್‌ಗೆ ಇದರ ಅರಿವಾಯಿತು. ಅಂತಹ ಒಂದು ರಣತಂತ್ರವನ್ನು ಬಿತ್ತಲು ಬೇಕಿದ್ದ ಫಲವತ್ತಾದ ಭೂಮಿಯನ್ನು ಒದಗಿಸಿಕೊಟ್ಟದ್ದೆ ದಲಿತ ಚಳವಳಿಯ ಅವನತಿ ಮತ್ತು ದಲಿತ ರಾಜಕಾರಣದ ದುರ್ದೆಸೆ. ಕೇಂದ್ರದ ಜನತಾದಳ ಸರಕಾರ ಪತನಗೊಂಡಾಗ ಹಳೆಯ ಭಾರತೀಯ ಜನ ಸಂಘ ವಿಸರ್ಜನೆಗೊಂಡು 1980ರಲ್ಲಿ ಭಾರತೀಯ ಜನತಾ ಪಕ್ಷ ಎಂಬ ಹೊಸ ಹೆಸರಿನೊಂದಿಗೆ ತಲೆಯೆತ್ತಿತು. ಈ ಹೊಸ ಪಕ್ಷಕ್ಕೆ ಹೊಸ ಕಾರ್ಯತಂತ್ರಗಳನ್ನು ಪ್ರಯೋಗಿಸುವ ಅವಶ್ಯಕತೆ ಉಂಟಾಯಿತು. ಅಂಬೇಡ್ಕರ್‌ರನ್ನು ಕೇಸರೀಕರಣ ಕ್ಕೊಳಪಡಿಸಿ, ಆರೆಸ್ಸೆಸ್‌ನ ಗುರುಗಳನ್ನು ತೀವ್ರ ಸುಧಾರಣಾವಾದಿಗಳೆಂದು ಬಿಂಬಿಸುವ ಉದ್ದೇಶಕ್ಕಾಗಿ ಹುಟ್ಟುಹಾಕಿದ ವೇದಿಕೆಯಾದ 'ಸಾಮರಸತಾ ಮಂಚ್' ಎಂಬುದು ಈ ರಣತಂತ್ರಗಳ ಒಂದು ಪ್ರಮುಖ ಅಂಗವಾಗಿದೆ. ಕೆಲ ಅರೆಬರೆ ದಲಿತ ಬುದ್ಧಿಜೀವಿಗಳು ಇದನ್ನು ನಂಬಿದರಾದರೂ ಜನರ ನಡುವಿನಲ್ಲಿ ಅಷ್ಟೊಂದು ಯಶಸ್ಸು ಸಾಧಿಸಲಾಗಿಲ್ಲ.

ಸಾಮರಸತಾ ಅಂದರೆ ಸಾಮಾಜಿಕ ಸೌಹಾರ್ದ ಎಂದರ್ಥ. ಹೇಗೆ ಮಾವೋವಾದಿಗಳ ವರ್ಗ ಸಂಘರ್ಷದ ಭಾಷೆಯ ಜಾಗವನ್ನು ಡೆಂಗ್‌ವಾದಿ ಚೀನಾದ ಸಾಮಾಜಿಕ ಸಾಮರಸ್ಯ ಆಕ್ರಮಿಸಿಕೊಂಡಿತೋ ಹಾಗೆ ಸಾಮರಸತಾದ ಪ್ರಕಾರ ವಿವಿಧ ಜಾತಿಗಳು ಪರಸ್ಪರ ಸಂಘರ್ಷಗಳಿಲ್ಲದೆ ಸಹಬಾಳ್ವೆ ನಡೆಸಬೇಕು. ಜಾತಿಜಾತಿಗಳ ನಡುವೆ ಶೋಷಣೆಗಳ ಸಂಬಂಧವಿರುವಾಗ ಅವು ಮನುವಿನ ಸಿದ್ಧಾಂತವನ್ನು ಒಳಗೊಳ್ಳದೆ ಹೇಗೆ ತಾನೆ ಸಂಘರ್ಷರಹಿತವಾಗಿ, ಸೌಹಾರ್ದಯುತವಾಗಿ ಬದುಕಬಲ್ಲವು? ಮೇಲ್ಜಾತಿಗಳ ಹೇಲನ್ನು ತಲೆ ಮೇಲೆ ಹೊತ್ತುಕೊಳ್ಳುವಾಗ ವಾಲ್ಮೀಕಿಗಳಿಗೆ "ಆಧ್ಯಾತ್ಮಿಕ ಅನುಭವ" ಆಗುತ್ತದೆಂದು ಹೇಳುವ ಮೋದಿಯ ಮಾತುಗಳ ಒಳಾರ್ಥ ಇಲ್ಲಿ ನಮಗೆ ಸಿಗುತ್ತದೆ. ಭಾರತ ಸರಕಾರ ಮನುಷ್ಯರ ಮಲವನ್ನು ಮನುಷ್ಯರೇ ತೆಗೆಯುವ ಘೋರ ದೌರ್ಜನ್ಯವನ್ನು ಅಧಿಕೃತವಾಗಿ 1993ರಷ್ಟು ಹಿಂದೆಯೆ ನಿಷೇಧಿಸಿದೆ. ಆದರೆ ಇಂದು "ಆಧ್ಯಾತ್ಮಿಕ ಅನುಭವ"ವೆಂದು ಅದರ ಗುಣಗಾನ ಮಾಡುತ್ತಿರುವುದು ನಾಚಿಕೆಗೇಡಿನ ವಿಷಯ. ಯಾವ ದಲಿತನೂ "ಆಧ್ಯಾತ್ಮ"ದ ಕುರಿತು ಯಾವತ್ತೂ ತಲೆಕೆಡಿಸಿಕೊಂಡವನಲ್ಲ, ಆತನ/ಆಕೆಯ ಆತಂಕ ಏನಿದ್ದರೂ ಅದು ಕೇವಲ ಭೌತಿಕ ಜಗತ್ತಿಗೆ ಸಂಬಂಧಪಟ್ಟದ್ದು. ಈ "ಆಧ್ಯಾತ್ಮಿಕ ಅನುಭವ"ಕ್ಕೆ ಮೋದಿ ಇಷ್ಟೊಂದು ಕಿಮ್ಮತ್ತು ನೀಡುತ್ತಿರುವಂತಿರುವ ಸನ್ನಿವೇಶದಲ್ಲಿ ನಮ್ಮ ದೇಶದಲ್ಲಿರುವ 14 ಲಕ್ಷ ಮಲಹೊರು ವವರ ಪೈಕಿ ಯಾರು ಬೇಕಿದ್ದರೂ ತನ್ನ ಹಾರೆ ಮತ್ತು ಬಕೀಟನ್ನು ಸಂತೋಷದಿಂದ ಮೋದಿಗೆ ಹಸ್ತಾಂತರಿಸಲು ಸಿದ್ಧ. 'ಸಫಾಯಿ ಕರ್ಮಚಾರಿ ಆಂದೋಲನ' ಈ ದೌರ್ಜನ್ಯವನ್ನು 2010ರ ಅಂತ್ಯದೊಳಗಾಗಿ ನಿಲ್ಲಿಸಬೇಕೆಂದು ಕರೆನೀಡಿರುವ ವಿಷಯ ರಾಜ್ಯದ ಮುಖ್ಯಮಂತ್ರಿಯಾಗಿ ಮೋದಿಗೆ ತಿಳಿದಿರಬೇಕು.

ಕಾಂಗ್ರೆಸ್‌ನ ಖೊಟ್ಟಿ ಕಾಳಜಿ

ಕಾಂಗ್ರೆಸ್ ಈ ವಿಷಯಕ್ಕೆ ಉದ್ರೇಕಿತವಾಗಿರುವುದನ್ನು ಕಂಡಾಗ ಕುತೂಹಲ ಮೂಡುತ್ತದೆ. ಅಂದಹಾಗೆ ಕಾಂಗ್ರೆಸ್‌ನ ಮಾರ್ಗದರ್ಶಕ ಸಂತನಾಗಿರುವ ಮಹಾತ್ಮಾ ಗಾಂಧಿಯೆ ಈ ಎರಡು ಕಲ್ಪನೆಗಳ ಜನಕ. ಆಧುನಿಕ ಯುಗದಲ್ಲಿ ದಲಿತರಿಗಾಗಿ ಪ್ರಶಂಸಾಸ್ತೋತ್ರದಂತಿರುವ, ಅನುಗ್ರಹ ಕರುಣೆಸುವಂತಿರುವ ಹಣೆಪಟ್ಟಿಗಳನ್ನು ಸೃಷ್ಟಿಸಿದವರಲ್ಲಿ ಪ್ರಾಯಶಃ ಗಾಂಧಿ ಮೊದಲಿಗನೆನ್ನಬಹುದು. ಗಾಂಧಿ ತಾನು ಅಸ್ಪೃಶ್ಯರೊಂದಿಗೆ ಗುರುತಿಸಿಕೊಂಡು ಅವರನ್ನು ಪ್ರತಿನಿಧಿಸುತ್ತಿದ್ದೇನೆಂದು ಸದಾ ಹೇಳಿಕೊಳ್ಳುತ್ತಿದ್ದರೂ ಅವರನ್ನು "ಸಂಸ್ಕೃತಿಹೀನ" ಮತ್ತು "ದಡ್ಡ" ಎಂಬ ಪದಗಳಿಂದಲೂ ಸಂಭೋದಿಸುವ ಮೂಲಕ ಜನಸಮೂಹ ಮತ್ತು ತನ್ನ ನಡುವಿನ ಅಂತರ ಹಾಗೂ ವ್ಯತ್ಯಾಸಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಹರಿಜನರಿಗಾಗಿ ದುಡಿಯುತ್ತಿದ್ದ ಸವರ್ಣೀಯ ಹಿಂದೂಗಳಿಗೆ ಗಾಂಧಿ ನೀಡಿದ್ದ ಈ ಸಲಹೆಯೊಂದನ್ನು ನೋಡಿ: "ಹರಿಜನರ ಏಳ್ಗೆಗಾಗಿ ಕೆಲಸ ಮಾಡುತ್ತಿರುವವರು...... ಬೌದ್ಧಿಕವಾಗಿ ಮಕ್ಕಳೊಂದಿಗೆ ಹೋಲಿಸಬಹುದಾದ, ತೀರಾ ನಿರಾಡಂಬರ, ಅಮಾಯಕ ಮತ್ತು ಅಜ್ಞಾನಿ ಸ್ತ್ರೀ, ಪುರುಷರೊಂದಿಗೆ ಅತ್ಯಂತ ನಿಕಟಸಂಪರ್ಕ ಸಾಧಿಸಬೇಕು" (ಹರಿಜನ್, ನವಂಬರ್ 7, 1936). ಮೋದಿ ದಲಿತರನ್ನು ಬುದ್ಧಿಮಾಂದ್ಯರೆಂದು ಕರೆಯುವುದಕ್ಕೂ ಇದಕ್ಕೂ ವ್ಯತ್ಯಾಸವೇನಾದರೂ ಇದೆಯೇ?

ಆರೆಸ್ಸೆಸ್‌ನ ಓರ್ವ ಬದ್ಧ ಕಾರ್ಯಕರ್ತನಾಗಿರುವ ಮೋದಿ ದಲಿತರು ಅಂತರ್ಗತವಾಗಿ ಅಧಮರೆಂದು ತಿಳಿಯುವ ಮನುಸ್ಮೃತಿಯ ತತ್ವಗಳನ್ನು ಬಹಿರಂಗವಾಗಿ ಎತ್ತಿಹಿಡಿಯುವುದು ಸ್ವಾಭಾವಿಕವೆ ಆಗಿದೆ. ಕಾಂಗ್ರೆಸ್ ಎಂದೂ ಹಾಗೆ ಮಾಡದು. ಬಿಜೆಪಿ ಕೋಮುವಾದಿ ಮತ್ತು ಜಾತಿವಾದಿಯೆಂದು ದೇಶದ ಪ್ರಗತಿಪರ ಶಕ್ತಿಗಳು ಖಂಡಿಸಿದಾಗ ಕಾಂಗ್ರೆಸ್ ಪುಳಕಿತಗೊಳ್ಳು ತ್ತದೆ. ಆದರೆ ಆಳುವ ವರ್ಗಗಳ ಮುಂಚೂಣಿ ಪಡೆಯಾದ ಕಾಂಗ್ರೆಸ್ ಅದಕ್ಕಿಂತ ಭಿನ್ನವಾಗಿದೆಯೇ? ಕೋಮುವಾದದ ಕುರಿತಂತೆ ಅದರ ದಾಖಲೆ ಬಹುತೇಕ ಮಟ್ಟಿಗೆ ಅನುಮಾನಾಸ್ಪದವಾಗಿದೆ. ದಲಿತರ ಸಮಸ್ಯೆಗಳ ಕುರಿತಂತೆ ಅದರ ವ್ಯವಹಾರಗಳು ಅಸ್ಪಷ್ಟತೆಯಿಂದ ಕೂಡಿವೆ. ದಲಿತರನ್ನು ಅವರ ರಾಜಕೀಯ ಸ್ವಾಯತ್ತತೆಯಿಂದ ವಂಚಿತರನ್ನಾಗಿಸಿದ ಪೂನಾ ಒಪ್ಪಂದದ ದಿನಗಳಿಂದ ಆರಂಭಿಸಿ ದಲಿತ ರಾಜಕೀಯದ ತತ್ವರಹಿತ ಸೇರ್ಪಡೆಗಳ ಮಜಲಿನ ತನಕ ಕಾಂಗ್ರೆಸ್ ವಹಿಸಿರುವ ಪಾತ್ರ ಅದರ ದಲಿತಸ್ನೇಹಿ ಎಂಬ ಸ್ವಕೀಯ ಚಿತ್ರಣಕ್ಕೆ ವಿರುದ್ಧವಾಗಿದೆ. ಪ್ರಾಯಶಃ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಏಕೈಕ ವ್ಯತ್ಯಾಸವಿರುವುದು ಅದರ ರಣನೀತಿಯ ಜಟಿಲತೆಯಲ್ಲಿ.

ಒಂದು ಸ್ವಾರಸ್ಯಕರ ಸಂಗತಿ. ಕೆಲವು ವರ್ಷಗಳ ಹಿಂದೆ (2005ರ ಆಸುಪಾಸಿನಲ್ಲಿ) ಗುಜರಾತ್ ಕಾಂಗ್ರೆಸ್ ಸೋನಿಯಾ ಗಾಂಧಿಯ ಆದೇಶದ ಮೇರೆಗೆ ಪಕ್ಷದ ಕಾರ್ಯಕರ್ತರಿಗಾಗಿ ಒಂದು ತರಬೇತಿ ಕಾರ್ಯಕ್ರಮ ರೂಪಿಸಿತ್ತು. ಗುಜರಾತ್ ಕಾಂಗ್ರೆಸ್ ಸೇವಾದಳದ ಓರ್ವ ನಾಯಕ ಇದಕ್ಕಾಗಿ ಹೊತ್ತಿಗೆಯೊಂದನ್ನು ಸಿದ್ಧಪಡಿಸಿದ್ದರು. ಅದರಲ್ಲಿ ಭಾರತದ ಪುರಾತನ ಸಂಸ್ಕೃತಿಯನ್ನು ಮತ್ತು ಮನುವಿನ ನಿಯಮಗಳನ್ನು ಆಧರಿಸಿದ ಸಾಮಾಜಿಕ ವ್ಯವಸ್ಥೆಯನ್ನು ಕೊಂಡಾಡಲಾಗಿತ್ತು. ಅಷ್ಟು ಮಾತ್ರವಲ್ಲ, ಆ ಸಾಮಾಜಿಕ ವ್ಯವಸ್ಥೆಯ ಪುನರ್‌ಸ್ಥಾಪನೆಯೆ ಕಾಂಗ್ರೆಸ್‌ನ ಗುರಿಯೆಂದೂ ಬರೆಯಲಾಗಿತ್ತು. ದಲಿತ ವಿರೋಧಿ ಹಿಂದೂ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್, ಬಿಜೆಪಿಗಳ ನಡುವೆ ಇನ್ನೂ ಏನಾದರೂ ವ್ಯತ್ಯಾಸ ಗೋಚರಿಸುತ್ತಿದೆಯೇ?

ಜಾತಿದ್ವೇಷದ ನಂಜು ಈ ದೇಶದ ರಾಜಕೀಯ ಜನಸಮುದಾಯದೊಳಗೆ ಭದ್ರವಾಗಿ ತಳವೂರಿದೆ. ಬಿಜೆಪಿ ಅದನ್ನು ಆಗೊಮ್ಮೆ ಈಗೊಮ್ಮೆ ಕಾರುತ್ತಿರುತ್ತದೆ. ಕಾಂಗ್ರೆಸ್ ಯಶಸ್ವಿಯಾಗಿ ಬಚ್ಚಿಡುತ್ತದೆ.

* * * * *

ಕೃಪೆ: ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ಜೂನ್ 5. 2010

ಭೂಪಟದ ಯಾವ ಭಾಗದಲ್ಲಿರುವ ರತಿರೋಗದ ವ್ರಣದಂತ ನಾನು" ಎಂದ ಖ್ಯಾತ ಮರಾಠಿ ಕವಿ ನಾಮದೇವ್ ಢಸಾಳ್ ತಮ್ಮನ್ನು ವರ್ಣಿಸಿಕೊಳ್ಳುತ್ತಾರೆ.

1949 ರಲ್ಲಿ [illegible] ಢಸಾಳ್ [illegible] ಪೂರೈಸಲಿಲ್ಲ. ಬದಲಾಗಿ ಅವರು ಬೆಳೆದದ್ದು ಮತ್ತು ಕಲಿತದ್ದು ಮುಂಬೈನ ಕಾಮಾಟಿಪುರದ ತಲೆಹಿಡುಕರು, ವೇಶ್ಯೆಯರು, ಕಳ್ಳರು, ಗಾಂಜಾ ಮಾರಾಟಗಾರರು, ಕಳ್ಳಭಟ್ಟಿ ವ್ಯಾಪಾರಿಗಳು ಮತ್ತು ಭೂಗತಲೋಕದ ಗೂಂಡಾಗಳಿಂದ.

[illegible] ವಿಮೋಚನೆಗೆ ಉಗ್ರಗಾಮಿ ನಿಲುವು ಅಗತ್ಯ ಎಂಬ [illegible] 1972 ರಲ್ಲಿ ಢಸಾಳರವರು 'ದಲಿತ್ ಪಾಂಥರ್' ಎಂಬ [illegible] 1973 ರಲ್ಲಿ ಬೋದಿಲೇರ್‌ನ 'ಲಫ್ಲರ್ [illegible]' ಅದನ್ನು 'ಪಾಪದ ಹೂವುಗಳು' ಎಂದು [illegible] ಗೋಲಪಿಥ' [illegible] ಪ್ರಕಟಿಸಿ ಎಲ್ಲರ ಗಮನ ಸೆಳೆದರು. ಅವರ [illegible] ವರ್ಗದವರಲ್ಲಿ ಅಸಹ್ಯ ಹುಟ್ಟಿಸಿದರೆ, ಕೆಳವರ್ಗದವರಲ್ಲಿ [illegible] ಮೂಡಿಸಿತು. ಇಲ್ಲಿಯತನಕ ಢಸಾಳ್ ಅವರು ಒಂಭತ್ತು [illegible]ಗಳನ್ನೂ, ಕೆಲ ಕಾದಂಬರಿಗಳನ್ನು ಮತ್ತು ಗದ್ಯ ಸಂಗ್ರಹಗಳನ್ನು [illegible].

[illegible] ಢಸಾಳ್ ಅವರಿಗೆ 1999 ರಲ್ಲಿ ಪದ್ಮಶ್ರೀ [illegible] 2004 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು [illegible] ಪ್ರಶಸ್ತಿಯನ್ನು ನೀಡಿ ಗೌರವಿಸಿತು.

[illegible]


[illegible]

• ಗೌರಿ ಲಂಕೇಶ್

ಪೊಲೀಸು ಕಳ್ಳಿಯಿಂದ ಒಂದು ಪತ್ರ


ನಾಲ್ಕುಸಾವಿರದ ಐನೂರು ತರಹದ ಮುಳ್ಳುಕಳ್ಳಿಗಳಿವೆ
ಕಳ್ಳಿಗಿಡದಲ್ಲೂ ವಿವಿಧ ಜಾತಿ, ಕುಲ, ನೆಲೆ, ಬೆಡಗು;
ಕೆಲವೋ ನವಿಲುಗರಿಯ ಹಾಗೆ ಮೃದು -
ಮಡಚಿ ಎದೆಯೊಳಗೆ ಮುಚ್ಚಿಟ್ಟುಕೊಳ್ಳುವ ಬಯಕೆ ಹುಟ್ಟಿಸುವುವು;
ಮತ್ತೆ ಕೆಲವು ಕೋಟಿ ಮುಳ್ಳಿನ ವಂಶದವು,
ಮುಟ್ಟದಿದ್ದರೂ ಮನಸ್ಸನ್ನು ಚುಚ್ಚಿ
ಆತ್ಮವನ್ನು ಗಾಸಿಗೊಳಿಸುವಂಥವು;
ನಂತರ ಒಂದೇ ಸಮ ಹರಿಯುವ ರಕ್ತಹೊಳೆಯಲ್ಲಿ
ಅದೆಷ್ಟೋ ಸಲ ಒದ್ದೆಯಾಗುವ ಭೂಮಿ.

ಜೈಲರ್ ಮತ್ತು ಕಳ್ಳಿ ಗಿಡ:
ಕಳ್ಳಿ ಗಿಡ ಮತ್ತು ಜೈಲರ್.
ಪರಸ್ಪರ ಹೋಲಿಕೆಯಿಂದ ವಿಚಲಿತನಾಗಿದ್ದೇನೆ.
ತುಂಬ ಸಲ ನೋಡಿರುವೆ; ಸೆರೆಯಾಳಿನ ಸಹವಾಸಕ್ಕೆ ಜೈಲರನ ಮನಸ್ಸೇ ಕ್ರೂರವಾಗುವುದನ್ನು
ಯಾವ ಚೈತ್ರವೂ ಎದೆನೆಲದಲ್ಲಿ ಹೊಸಚಿಗುರು ಉಕ್ಕಿಸದಷ್ಟು ಬರಡಾಗುವುದನ್ನು.
ನೀವು ಈ ಕವಿಯೆಂದುಕೊಂಡವ
ನಮ್ಮ ಹಳೆಯ ಜೈಲರನನ್ನು ಮುಳ್ಳುಕಂಟಿಯೊಂದಿಗೆ
ಹೋಲಿಸುತ್ತಿರುವನಲ್ಲಾ ಎನ್ನಬಹುದು.
ಅದಕ್ಕೇ ಹೇಳುತ್ತಿರುವೆ, ಕೇಳಿ ಗೆಳೆಯರೆ, ಇದಷ್ಟು ಸರಳವಲ್ಲ.
ನಾನು ಸೆರೆಯಾಳು ಮತ್ತು ಕವಿ, ವಿಷಯದಾಳಕ್ಕಿಳಿದು ನೋಡುವವ.
ಘಟನೆ ಮತ್ತು ವ್ಯಕ್ತಿಗಳನ್ನು ಅರಿಯಲು
ಜೈಲರ್ ಮತ್ತು ಕಳ್ಳಿಗಿಡವನ್ನು ಎದುರಾಎದುರು ಹೇಗೆ ನಿಲ್ಲಿಸಲಿ?
ನಿಮ್ಮ ಜೈಲಧಿಕಾರಿ ಅಮಾಯಕ ಮಗು .
ಕಳ್ಳಿಗಿಡದ ಕಾಡಿನಲ್ಲೂ ಅವನೆದೆ ಮೃದುವಾಗಿಯೇ ಇದೆ.
ಅವನು ಜೈಲರನೆಂದು ಎಂದೂ ನನಗನಿಸಿಲ್ಲ.
ಸಮುದ್ರದ ದುಃಖ ಮಾತ್ರ ಅವನ ಮನಸ್ಸನ್ನು ತಟ್ಟಬಲ್ಲುದು;
ಅವನೇ ಸಮುದ್ರವಾಗಿದ್ದಾನೆ, ಸ್ಥಾವರವಾಗಿದ್ದಾನೆ ಮತ್ತು ಆ ಸಮುದ್ರ ದಾಟಲು
ಜೈಲಿನ ಮಬ್ಬು ಮರಳುಗಾಡಿನಲ್ಲಿ ಕುಳಿತ ಸೆರೆಯಾಳುಗಳು
ಮನದ ದೋಣಿಯಲ್ಲಿ ಜಗತ್ತನ್ನೇ ಸುತ್ತುತ್ತಿದ್ದಾರೆ.



ದರ್ಗಾದ ದಾರಿಯಲ್ಲಿ

ಮರಾಠಿ ಮೂಲ : ನಾಮದೇವ್ ಢಸಾಳ್
ಕನ್ನಡಕ್ಕೆ : ಡಾ. ಎಚ್. ಎಸ್. ಅನುಪಮಾ



ಸೂರ್ಯ ಸೋರುತ್ತ ಸೋರುತ್ತ
ರಾತ್ರಿಯ ಅಪ್ಪುಗೆಯೊಳಗೆ
ಉರಿಯುತ್ತ ಹೋದ.
ಫುಟ್ಪಾತಿನ ಮೇಲೆ
ಮುದುರಿದ ಚಿಂದಿಯೊಳಗೆ
ನಾನು ಹುಟ್ಟಿ
ಅನಾಥನಾದೆ.

ಜನ್ಮ ಕೊಟ್ಟವಳು
ಪರಲೋಕದ ತಂದೆಯ ಬಳಿ ನಡೆದುಬಿಟ್ಟಳು
ಬೀದಿಯ ಭೂತಗಳ ಬೆಂಬತ್ತಿ ಆಯಾಸಗೊಂಡಿದ್ದಳು
ತನ್ನ ಸೀರೆಯ ಕತ್ತಲು ತೊಳೆಯಬೇಕೆಂದಿದ್ದಳು..


ನಾನು ಬೆಳೆದೆ
ದಾರಿ ಬದಿಯ ಹೇಲಿನ ನಡುವೆ
ಬಂಧನಗಳೇ ಇಲ್ಲದವನಂತೆ

ದರ್ಗಾದ ದಾರಿಯಲ್ಲಿ
ಕೂಗುತ್ತ ಹೋದೆ,

'ಐದು ಪೈಸಾ ಕೊಡ್ರಿ,
ಐದು ಶಾಪ ಹಾಕ್ರಿ.'

ಅಲ್ಲಾಹು ಅಕ್ಬರ್

ಕಣ್ಣಿಗೆ ಕವಿದ ಕತ್ತಲ ಗುಬ್ಬಗಳು ಹಾರಿಹೋಗುತ್ತಿವೆ
ಅನಾಥ ಪೋಲಿ ಹುಡುಗರ ಕಾಲು ಸ್ಮಶಾನದಲ್ಲಿ ಕಾಣುತ್ತಿವೆ
ನಮ್ಮೊಳಗಿನ ಷಿಯಾ ಸುನ್ನಿ ದರ್ಗಾಗಳನ್ನು ಜಾಲಾಡಿ
ಪತಿ ಗೋರಿಯ ಮೇಲೂ ಕಣ್ಣೀರು ಹರಿಸುವ
ಅಲ್ಲಾಹು ಅಕ್ಬರ್..



ಬಡತನವೆಂಬ ಮುದ್ದುಮಗು

ನಮ್ಮೆಲ್ಲರ ನೋವು ಸಂಕಟಗಳಿಗೆ ಹುಟ್ಟಿದ್ದು
ಬಡತನವೆಂಬ ಈ ಮುದ್ದುಮಗು.
ಸೋದರರೆ, ಭರ್ಜರಿ ಔತಣ ಹಾಕಿ ಹೆಸರಿಡಲಿಲ್ಲವೆಂದು
ತಿರಸ್ಕಾರದ ಮಾತು ಆಡಬೇಡಿ-

ಹುಮಳೆಯಂಗಿ ತೊಟ್ಟ ಮೋಸದ ಈ ಮಗು ನೋಡಿ, ಎಷ್ಟು ಚಂದ,
ಅರಳುವ ಮೊದಲೇ ಮುದುಡಿಬಿಡಬಹುದು
ಹೀನದೃಷ್ಟಿ ಬೀಳದಿರಲಿ, ಹಣೆಯ ಮೇಲಿಡಿ ಒಂದು ರಕ್ತಬೊಟ್ಟು.
ನಿಮ್ಮ ಬೆವರನ್ನು ಅಗ್ಗಕ್ಕೆ ಮಾರಿಬಿಡಿ, ಅದು ಬೆಚ್ಚಗೆ ಕೈಮೇಲೆ
ಆಡಬಹುದು
ನಿಮ್ಮ ಕಣ್ಣು ಅದರ ಬೆಳಕಾಗದಿರಬಹುದು, ತೋಳತೊಟ್ಟಿಲಲ್ಲಿ
ತೂಗದಿರಬಹುದು,
ಅದರೇನಂತೆ ಸೋದರರೆ, ನೀವು ಹಾಡಬಹುದು:
'ಬಿದ್ದೂ.. ಎದ್ದೂ.. ಬಿದ್ದೂ.. ಎದ್ದೂ..
ಇದ್ದದ್ದನ್ನೇ ಎತ್ತಿ ಬೆಳೆಸುವ!?
ಅದರ ಕೊಳಕು ನಗದಿಗೆ ನೀವು ಹೆದರಬಾರದು.
ಹೊಟ್ಟೆ ಉಬ್ಬಿದೆಯೆ? ಬಹುಶಃ ನೋವಿರಬಹುದು.
ಭೇದಿಯೆ? ಸತ್ವಗಳ ಕೊರತೆಗೆ ರಿಕೆಟ್ಸ್ ಬಂದಿರಬಹುದು.
ತುಂಬ ಅಳುತ್ತಿದೆಯೆ? ಅರಚಲಿ, ಕೂಗಿಕೂಗಿ ಗಟ್ಟಿಯಾಗಬಹುದು.

'ಓ ಆಕಳೆ! ಬೇಗ ಕೊಟ್ಟಿಗೆಗೆ ಬಾ
ಮಗುವಿನ ಬಟ್ಟಲಲ್ಲಿ ಹಾಲು ತುಂಬು!
ಹಚಾ ಥೂ ನಾಯಿ! ನಾಯಿ ಥರಾ ಆಚೆ ತೊಲಗು!
ಹಾಲಕೆನೆ ಅಂದರೆ ಮಗೂಗೆ ಸೊಗಸು!

ಓ ಪುಟ್ಟಮಗಳೇ, ನನ್ನ ಮುದ್ದೇ, ಚಿನ್ನದ ತುಂಡೇ,
ಸಿಹಿ ಜೇನೇ, ನಿನ್ನ ಕಾಲು ತೋಳೆಲ್ಲ ಅಪ್ಪಟ ಬೆಳ್ಳಿ ಕಣೇ!
ಹೊರಗೆ ಹೋಗದಿರು ಬಂಗಾರಿ, ಹುಶಾರು,
ಹುಡುಗರು ನಿನ್ನ ಹಿಡಿದು ಹೊಡೆದುಬಿಟ್ಟಾರು!?

ಸೋದರರೆ, ಜಗದೆಲ್ಲ ಪ್ರೀತಿಯೊಂದಿಗೆ ಈ ಕೂಸನ್ನೆತ್ತಿಕೊಳ್ಳಿ,
ಗಮನಿಸುತ್ತಿರಿ, ನಿಮ್ಮ ಅಂಗಿಯ ಮೇಲದು ಉಚ್ಚೆ
ಹೊಯ್ಯಬಹುದು.

ನಮ್ಮೆಲ್ಲ ವೇದನೆಗಳಿಗೆ ಹುಟ್ಟಿದ್ದು ಈ ಮಗು,
ಬಡತನವೆಂಬ ಮುದ್ದುಮಗು.

...ತ್ಯಾನಂದ ಬಿಡುಗಡೆಯಾಗಿ ಬೆಂಕಿ ಕಾಸ್ತ ಕುಂತಿದ್ದನಂತೆ!

...ೋೀಡ ಕವಿದು ತುಂತುರು ಮಳೆ ಆರಂಭವಾಯ್ತು. ...ಯ ಗಾಳಿ ಬೀಸತೊಡಗಿತು. ಕಾಳಮಾವ, ಸೀರ ...ದ್ದ ಮಾಸಲು ದುಪಟಿಗಳನ್ನು ಬಳಸಿ ಗೂಟಿ ...ದರು. ಜುಮ್ಮಿ ಸೆರಗೊದ್ದುಕೊಳ್ಳುತ್ತ ...ೋಡು, ನ್ಯನ್ನೆ ಮನ್ನೆ ಸ್ಯಕಿಯಾಗಿ ಗವ ಗವಾ ...ತ್ತ. ಈಗಾಗ್ಲೆ ಬೆಂಕಿ ಕಾಸನ ಅನ್ನುಸ್ತ ಅದೆ" ಎಂದಳು.

...ಯ ಲು ಸೀ ಮೆ ಕಟ್ಟೆಪುರಾಣ

▶ಬಿ. ಚಂದ್ರೇಗೌಡ

...ೇನು ಬೆಂಕಿ ಕಾಸದಿರ್ಲಿ ಕಣೇ, ಆ ನಿತ್ಯಾನಂದ ...ರ ಬಂದೆಟಿಗೆ ಬೆಂಕಿ ಕಾಸ್ತ ಕುಂತಿದ್ದನಂತೆ" ಎಂದ

...ವುನ್ಯಾಕ್ ಬೆಂಕಿ ಕಾಸ್ತಯಿದ್ದನ್ಲ?"

...ವುನೂ ಸಳಿ ಅಂತ ಬೆಂಕಿ ಕಾಸ್ತಾಯಿಲ್ಲ ಕಣೇ. ...ೂ ಪಾಪ ಪಯಾರ ಆಗ್ಲಿ ಅಂತ ಸುತ್ತ ಬೆಂಕಿ ...ದು ಮದ್ಯ ಕುಂತಿದ್ದನಂತೆ."

...ಲ್ಲಾ ಕಂಡ್ಯ, ಮಾಡಿರೋ ಪಾಪಕ್ಕೆ ಸಿಕ್ಸೆ ...ಬೇಕು ಅಂದ್ರೆ ಬೆಂಕಿ ಮ್ಯಾಲೆ ನ್ಯಡಿಲಿ, ಇಲ್ಲ ...ಕರಪೂರ ಹಚಗಂಡು ನುಂಗಲಿ. ಅದುಬುಟ್ಟು ...ಕಿ ಹಾಯ್ಕಂಡು, ನಚ್ಗೆ ಮಾಡಿ ಕಂಡ್ರೆ ಏನುಬತ್ತೂ ..." ಎಂದ ಕಾಳಮಾವ.

...ವುನು ಹುಟ್ಟುಕಳ್ಳ ಕಣಮಾವ. ಕೇಸು ಕೋರ್ಟಿಗೆ ...ಟಿಗೆ ನಾನು ಗಂಡಸೇ ಅಲ್ಲ ಅಂದಿದ್ದ."

...ರಬವುದು ಕಂಡ್ಯ. ಆನನಮಗ ತಲೆ ಬುಟ್ಟಿರದಾಗ್ಲಿ ...ದಾಗ್ಲಿ, ನ್ಯಡಿಯುದನ್ಯಲ್ಲ ನೋಡಿದ್ರೆ ನವ್ಮ ...ನ್ನಡ್ತಿಯಂಗೆ ಕಾಣ್ತನೆ. ಕೋರ್ಟಿಗೆ ಕರಕಂಡೋಗಿ ...ಚ ನೋಡಿದ್ರೆ ಯಾವುದೂ ಗೊತ್ತಾಗದು" ಎಂದು ...ನಕ್ಕ.

..., ನೀನ್ಯಾವ ಸೀಮೆ ಮಾತಾಡ್ತಿಯೋ. ಕೋರ್ಟಿಗೆ ... ಕೈಯಾಕಿ ನೋಡಕ್ಯಾದತೇ? ಅಂಗೆ ಬಟ್ಟೆ ಬಿಚ್ಚಿ ...ರೆ. ಬವ್ಪಶಃ ಈ ನನ್ನಮಗ ಅಂಗ್ಯಲ್ಲ ನೋಡಲಾರ್ರು ...ತಿಳಕಂಡು ಅಂಗೇಳಿರತನೆ."

...ರಬವುದು ಬುಡು. ಮಗೆನಳ್ಳಿಲು ಇಂಗೆ ಆಗಿತ್ತು" ...ಸೀರ.

"ಮಗೆನಳ್ಳಿಲೇನಾಗಿತ್ತೋ ಮಾವ?"

"ಉಗ್ರಿನೆ ಕೇಳು ಹೇಳ್ತನೆ."

"ಏ ಮಗೆನಳ್ಳಿ ಪುಡಸಾಮಿ ಮಗಳ ಮದಿವಾಗಿದ್ದೋನು ಸೋಬನ ಮಾಡಿ ಕಳಕ್ಕೆ ಬಂದ. ಬಂದೋನು ಹುಡುಗಿಯ 'ನಿನಿಗೆ ಮೊದ್ಲು ನೋಡಿದ ಗಂಡು ಇಲ್ಯಲ್ಲ ಬಂದು ಒಂದು ದಿನ ಇದ್ದೊದನಂತೆ' ಅಂದ. ಪಾಪ ಆ ಹುಡುಗಿ 'ಊ ಇದ್ದೊದ' ಅಂತು."

"ಅದ್ಯಾಕಂಗೇಳಕ್ಕೋಯ್ತು?"

"ಮುಚ್ಚುಮರೆ ಇಲ್ದ ಹುಡುಗಿ. ಅವ್ರುನು ಕೇಳಿದ್ದಕ್ಯಲ್ಲ ಉತ್ತರ ಕೊಡ್ತು. ಅದ್ಕೆ ಆ ನನಮಗ 'ಇಲ್ಲಿದ್ದೊದ ಅಂದ್ರೆ ನಿನಿಗೂ ಏನಾರ ಮಾಡರತನೆ' ಅಂತ ಜಗಳ ತಗದ. ಸೋಬನ ಮಾಡಿಕಳಕೆ ಅಂತ ಬಂದು ಜಗಳ ತಗದದ್ದ ನೋಡಿ 'ಏನ್ಲ ಮಗ ಅದು, ಯಾಕ್ಲ ಅಂಗಾಡ್ತಿ' ಅಂದ್ರು ಜನ. ಅದಕವುನು ಮನಿಂದ ಈಚಿಗೆ ಬಂದು 'ಈ ಹುಡುಗಿ ಹೆಣ್ಣೇ ಅಲ್ಲ' ಅಂದ."

"ಆಗೊಲೋ, ಅದ್ಯಾಕಂಗಂದ"

"ಅಲ್ಲಿಂದ ತಪ್ಪಿಸಿಗಂಡೋಗಿ ಇನ್ನೊಂದು ಮದಿವಾಗನ ಅಂತ ಅಂಗಂದ. ಜನ ಬುಡಬೇಕಲ್ಲ. ಹಿಡಿದು ಕುಂಡ್ರಿಸಿಗಂಡು ನ್ಯಾಯ ಮಾಡಕ್ಕೆ ಶಿವರಾಮೇಗೌಡನ್ನ ಕರಿಸಿದ್ರು."

"ಸರಿಯಾದೋನ್ನೆ ಕರಿಸ್ಯವುರೆ ಬುಡು" ಎಂದ ಕಾಳಮಾವ.

"ನಿಜಕಣ ಮಾವ. ಶಿವರಾಮ ಬಂದೋನು, ತೋಳಿನ ಜುಬ್ಬ ಏರಿಸಿಕೊಂಡು 'ಯಾರಾದ್ರು ವಂಶೀಕರ ಮನೆ ಇಬ್ಬರೆಂಗಸರು ಹೋಗಿ ಆ ಹುಡುಗಿ ಸೀರೆ ಎತ್ತಿ ಚಕಪ್ ಮಾಡಿಕಂಡು ಬಂದೇಳಿ' ಅಂದ."

"ಅದೇಳಕ್ಕೆ ವಂಶೀಕರ ಮನೆ ಹೆಂಗಸರೇ ಬೇಕೆ. ಯಾವಳಾರ ಹೇಳತಿದ್ದಪ್ಪ"

"ಇವುನದೊಂದು ಪದ ಯಾವಾಗ್ಲು ಹೇಳ್ತನೆ ಕಣೆ. ಅವುನೋಂಶೀಕಾಗಿದ್ರೆ ತಾನೆಯಾ. ಅದಿರ್ಲಿ, ಯಾವಾಗ ಶಿವರಾಮೇಗೌಡ ಅಂಗಂದನೊ ಆಗ ಹುಡುಗಿ ಅಣ್ಣತಮ್ಮದಿರಿಗೆ ರೇಗತ್ತಿಬುಡ್ತು. ಹೋಗಿದ್ದಲು ಆ ಹುಡುಗನಿಗೆ ಸರಿಯಾಗಿ ನೇದುಬುಟ್ರು. ಶಿವರಾಮೇಗೌಡ ಕಾರತ್ತಿಗಂಡು ಪರಾರಿಯಾದ. ನ್ಯಾಯ ಬರಖಾಸ್ತಾಯ್ತು ಅತ್ಲಾಗೆ."

"ಈಗ ಚನ್ನಾಗಿದ್ದರೆ?"

"ಏ, ಆ ಹುಡುಗಿಗೆ ಬ್ಯಾರೆ ಮದಿವಾಯ್ತು, ಬೆಂಗಳೂರಲ್ಲಿ ಸುಖವಾಗ್ಯವುಳೆ. ಈ ಬಡ್ಡೆತ್ತುದ್ದು ಇಲ್ಲೆ ಎಲ್ಲೊ ತಿರುಗ್ತಯಿರಬೇಕು. ಅಗೊ ಅಂಗೆ ಈ ನಿತ್ಯಾನಂದ ನಾನು ಗಂಡಸಲ್ಲ ಅಂದಿದ್ದ. ಅದ್ಕೆ ಅವ್ರುನ ಲಾಯಿರಿ ಅಂಗ್ಯಲ್ಲ ಹೇಳಬ್ಯಾಡ, ನಾನು ಸ್ವಾಮೀಜಿನೂ ಅಲ್ಲ, ಸನ್ಯಾಸಿನೂ ಅಲ್ಲ, ಹೆಂಗಸರ ಜ್ವತೆ ಆರಾಮಾಗಿರೊ ನಿತ್ಯಾನಂದ ಅನ್ನು ಅಂತ ಹೇಳಿ ಕೊಟ್ನಂತೆ. ಅವುನು ಅಂಗೆ ಹೇಳಿ ಬಿಡುಗಡೆಯಾಗಿ ಬಂದ್ರು ಆಸ್ರಮದತ್ರ ಬೆಂಕಿ ಕಾಸ್ತ ಕುಂತಿದ್ದನಂತೆ."

"ಅಂಗರೆ ನುಣಿಚಿಗಂಡ ಅನ್ನ" ಎಂದ ಕಾಳಮಾವ.

"ನುಣಿಚಿಗತ್ತನೆ ದೊಡಪ್ಪ, ನೋಡವುಟ್" ಎಂದುಕೊಂಡು ವಾಟಿಸ್ನೆ ಬಂದ.

"ಈ ಹಾಲಪ್ಪನ ಕತಿಯೇನೂ ಅಂತ" ಎಂಧ ಸೀರ.

"ಹಾಲಪ್ಪ ನಮ್ಮ ಪಟೇಲ್ರಂಗೆ. ಅಯ್ಯೋ ಅವಳದೂ ನಂದೂ ಹಳೇ ಸಮುಂದ. ನಮ್ಮಿಬ್ಬರನೂ ವಳಿಕೆ ಬುಟ್ಟು ಗಂಡ ಬಾಗಲ ಕಾಯೋನು. ಹಣಕಾಸಿನ ವಿಸಿಯದಲ್ಲಿ ಜಗಳ ಬಂದದೇ. ಬಗೆಹರಿಸಿಗತ್ತಿವಿ ಅಂತ ನಗಾಡಿಬುಟ್ಟ.



ನಿತ್ಯಾನಂದನಂಗೆ ಯಾವಾಗ್ಲು ನಗಾಡಿಕಂಡಿದ್ರೆ ಅವ್ರುನೂ ಆರಾಮವಾಗಿ ಬೆಂಕಿ ಕಾಸಬವುದಿತ್ತು, ದಡ್ಡ ಅಪರಾಧವ ಅನಾಮತ್ತು ಮ್ಯೆಲ್ಯತ್ತಿಕಂಡು ಕುಸ್ಕೋಗಿ ಬುಟ್ಟವುನೆ. ಇನ್ನ ಅವುನನ್ನ ಚಂದ್ರಗುತ್ತಿ ರೇಣಕಾದೇವಿನೇ ಕಾಪಾಡಬೇಕು. ಎಡೂರಪ್ಪನ ಕೈಲಂತೂ ಯಾರ್ನೂ ಬಚಾವ ಮಾಡಕ್ಯಾಗದಿಲ್ಲ."

"ಅಂಗಂತಿಯಾ?"

"ಅಂಗನ್ನದೇನೂ, ಸಾಬೀತಾಗೋಯ್ತಲ್ಲ ಹೇಳು. ನೆರೆ ಸಂತ್ರಸ್ತರಿಗೆ ಮನೆ ಕಟ್ಟಿಸಿಕೊಡಕ್ಯಾಗದಿಲ್ಲ ಅಂದವುನೆ."

"ಅಂಗಂದವುನೇನ್ಲ?" ಎಂದು ಕಾಳಮಾವ ಅಚ್ಚರಿಗೊಂಡ.

"ಅಂಗಂತ ಡ್ಯೆರೆಕ್ಟಾಗಿ ಹೇಳಿಲ್ಲ ದ್ವಡಪ್ಪ ಹೊಳೆದಾರಿಗೆ ಸಿಕ್ಕಿ ಇನ್ನು ಬದುಕಿರೋರಿಗೆ ಆಸರೆ ಮನೆ ಕಟ್ಟಿ ಕೊಡಬೇಕಾಗಿದೆ, ಅದಕ್ಯಾಗಿ ಭೂಮಿ ಕೊಳ್ಳಬೇಕು, ಸರ್ವೆ ಮಾಡಬೇಕು, ರೆವಿನ್ಯೂ ಜಮೀನನ್ನು ನಿವೇಶನವಾಗಿ ಪರಿವರ್ತಿಸಬೇಕು, ನಿಜವಾದ ಅರ್ಹ ಫಲಾನುಭವಿಗಳನ್ನು ಹುಡುಕಬೇಕು, ಮನೆ ಕಟ್ಟೊ ಸಾಮಗ್ರಿಗಳನ್ನು ತರಬೇಕು, ಎಲ್ಲಕ್ಕಿಂತ ಮುಖ್ಯವಾಗಿ ಈಗ ಲೇಬರ್ ಪ್ರಾಬ್ಲಂಮಿದೆ, ಆದ್ದರಿಂದ ಇವೆಲ್ಲವನ್ನು ಸುಸೂತ್ರವಾಗಿ ಬಗೆಹರಿಸಿಕೊಂಡು, ಮುಂದಿನ ಜೂನ್ ತಿಂಗಳಿಗೆ ಕೆಲಸ ಹಿಡಿತಿವಿ, ಅದಕ್ಕೂ ಮೊದ್ಲು ಈ ಮಳಿಗಾಲ ಕಳೆದ ಮೇಲೆ ಯಾವಾಗ್ಲಾದ್ರು ಬಿಡುವು ಮಾಡಿಕೊಂಡು ಗುದ್ಲಿ ಪೂಜೆ ಮಾಡ್ತಿನಿ ಅಂದವುನೆ."


"ಅಂಗಾದ್ರೆ ಅವುರ ಕತೆ ಮುಗಿತು ಬುಡು. ಅವುರತ್ಲಗೆ ಇವುನಿತ್ಲಗೆ ಅನ್ನಂಗಾಯ್ತು, ಅಲ್ಲಾ ಇಂಥೋರನ್ಯಲ್ಲ ನೆಚ್ಚಗಂಡ್ರೆ ಯಂಗೇ ಅಂತ?"

"ಮನೆ ಕಟ್ಟಕ್ಕೆ ದುಡ್ಡಿಲವ್ವೊ, ಅಥವ ತಿನ್ನಕಂಡಿದ್ದನೊ ಯಂಗೆ?"

"ಅದ್ನು ಹೇಳಕ್ಕೆ ಬರದಿಲ್ಲ ದ್ವಡಪ್ಪ. ಆ ಕಾಂಗ್ರೆಸ್ ಪಾರ್ಟಿ ಬ್ಯಾಂಡಿಕೂಟ್ಸ್ ಪತ್ತೆ ಹಚ್ಚಿ ಹೇಳಬೇಕು. ನಮ್ಮ ಚುಂಚನಗಿರಿ ಸ್ವಾಮಿಗಳು 'ಹತ್ತು ಕೋಟಿ ಕೊಟ್ಟಿದ್ನಲ್ಲ, ಲ್ಯಕ್ಕ ಕೊಡೊ ಎಡೂರ' ಅಂತ ವಿರೋಧ ಪಕ್ಷದೋರು ಕೇಳಿದಂಗೆ ಗುಟುರಾಕ್ತಯಿದ್ರೆ, ಕಾಂಗ್ರೆಸ್ ಬಡ್ಡೆತ್ತವು ತಮತಮ್ಮಲ್ಲೆ ಜಗಳ ಆಡ್ತ ಕುಂತವೆ. ಅಂಥೋರ್ನ ಬಿಜೆಪಿಗಳು ಲ್ಯಕ್ಕ ಕೇಳ್ತ ಅವೆ."

"ಬಿಜೆಪಿಗಳಿಗೆ ಕಾಂಗ್ರೆಸ್‌ನೋರ ಲ್ಯಕ್ಕ ಕೇಳೊ ಹಕ್ಕಿಲ್ಲ ಕಣೊ ವಾಟಿಸ್ನೆ, ರಾಂಮಂದ್ರ ಕಟ್ಟಿತಿವಿ ಅಂತ ಇಡೀ ದೇಶ ತಿರುಗಿ ಚಂದಾ ವಸೂಲು ಮಾಡಿದ್ರು. ಇಟಗೆ ತಂದಾಗ ಕಾಣಕೆ ಈಸಗಂಡ್ರು. ಜ್ಯೋತಿ ತಂದಾಗ ಕಾಸೀಸಗಂಡ್ರು. ಅದ್ಯಲ್ಲ ಏಟಾಯ್ತು ಏನಾಯ್ತು ಅಂತ ಕಾಂಗ್ರೆಸ್‌ನವ್ರು ಕೇಳಿದ್ದವೆ?" ಎಂದ ಉಗ್ರಿ.

"ಕೇಳಿದ್ರೆ ಅದ್ಯಲ್ಲ ಅದ್ವಾನಿತ ಅದೆ ಅಂದ್ರೇನೀಸ ಗಂಡಿಯೋ? ಅದ್ವಾನಿ ಕೇಳಿದ್ರೆ ಜನರ ಭಕ್ತಿಯ ಕಾಣಿಕೆ ವಿಷಯ ಕೇಳಬಾರ್ದು ಅಂದ್ರೆ ಏನೀಸಗಂಡೀ?!" ●



ನಶ್ವರ


ಭೂಕಂಪ, ಪ್ಲೇಗು, ಬೆಂಕಿ, ಕ್ಷಾಮ ಮುಂತಾದವು ಮನುಷ್ಯನ ಕೆಲವು ಹುಸಿ ಕಲ್ಪನೆಗಳನ್ನು ನಡುಗಿಸುತ್ತವೆ. ...ಮ ನಿತ್ಯನೂತನವಾದದ್ದು, ಕಾವ್ಯ ಅಮರವಾದದ್ದು, ಜಗತ್ತು ಸ್ಥಿರವಾದದ್ದು, a thing of beauty is ...joy for ever.... ಇತ್ಯಾದಿಯೆಲ್ಲ ನಮ್ಮ ಕಾಲ ಕೆಳಗಿನ ಭೂಮಿ ಅಚಲ ಎನ್ನುವ ಊಹೆಯಾದರೂ ...ದ್ಧವಾಗುವವರೆಗೆ ಸರಿ. ಭೂಮಿಯ ಒಳಗಿನ ಪದರಗಳು ನಿತ್ಯ ಸರಿದಾಡುತ್ತಾ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ...ುತ್ತವೆ; ಹೊಂದಾಣಿಕೆ ನಿಂತೊಡನೆ ಭೂಮಿ ತನ್ನ ಗುಣವನ್ನೇ ಕಳೆದುಕೊಳ್ಳುತ್ತದೆ. ಸೂರ್ಯನ ಸುತ್ತ ...ರ್ಷಕ್ಕೊಮ್ಮೆ ಪ್ರದಕ್ಷಿಣೆ ಮಾಡುವ ಭೂಮಿಯೇ ತನ್ನ ಅಕ್ಷದ ಮೇಲೆ ಸುತ್ತಿ ದಿನ, ರಾತ್ರಿ ಪಡೆಯುತ್ತದೆ. ...ವು ನಿಂತಿರುವುದೆಂದು ಭ್ರಮಿಸಿದ್ದೆಲ್ಲ ಚಲಿಸುತ್ತಿರುತ್ತದೆ, ಬದಲಾಗುತ್ತಿರುತ್ತದೆ. ಕೋಟ್ಯಂತರ ವರ್ಷದ ಹಿಂದೆ ... ಪ್ರಾಣಿ, ಮನುಷ್ಯರಿಂದ ತುಂಬಿದ್ದ ಜಾಗ ಮರುಭೂಮಿಯಾಗುತ್ತದೆ; ಮರುಭೂಮಿಯನ್ನು ಅಗೆದರೆ ...ಮ್ಮೆ ಅಲ್ಲಿದ್ದ ನಾಗರಿಕತೆಯ ಗುರುತಾಗಿ ತೈಲ ಉಕ್ಕುತ್ತದೆ. ಈ ಎಲ್ಲ ದ್ವಂದ್ವಗಳ ನಡುವೆ ನಾವು ಸುಂದರ ...ಲ್ಪ, ಚಿತ್ರ, ಕಟ್ಟಡ ಕಟ್ಟಿ, ಅಮರವಾಗಿಸಲು ನೋಡುತ್ತೇವೆ. ಮೊನ್ನೆ ಬಿಜಾಪುರದ ಗೋಲ್‌ಗುಂಬಜ್‌ನಲ್ಲಿ ಬಿರುಕು ಕಾಣಿಸಿಕೊಂಡ ಸುದ್ದಿ ಕೇಳಿ ಬೆಚ್ಚಿದೆವು. ಈಜಿಪ್ಟ್‌ನ ಸ್ಫಿಂಕ್ಸ್ ವಿಗ್ರಹಗಳು ವರ್ಷೇವರ್ಷೇ ವಿರೂಪಗೊಳ್ಳುತ್ತಿರುವುದನ್ನು ನೋಡಿ ಖಿನ್ನರಾಗುತ್ತೇವೆ. ಗೋಲ್‌ಗುಂಬಜ್ ಸುಮಾರು ನಾನೂರು ವರ್ಷದಷ್ಟು ಹಳೆಯದು; ಸ್ಫಿಂಕ್ಸ್‌ಗಳು ಎರಡು ಸಾವಿರ ವರ್ಷದಷ್ಟು. ಭೂಮಿಯ ಸ್ಪಂದನದಲ್ಲಿ ಈ ವರ್ಷಗಳೆಲ್ಲ ಕ್ಷಣಗಳಂತೆ. ಸೆಕೆಂಡ್‌ಗಳನ್ನು ಪ್ರಾಚೀನ ಎಂದು ಹೇಳಿಕೊಳ್ಳುವ ಮಾನವ ಶೇಕ್ಸ್‌ಪಿಯರ್‌ನಲ್ಲಿ (ಗೋಲ್‌ಗುಂಬಜ್‌ನಂತೆಯೇ) ಬಿರುಕು ಬಿಡತೊಡಗಿದ್ದರೆ ದಿಗ್ಭ್ರಮೆಗೊಳ್ಳುತ್ತಾನೆ. ಯಾಕೆಂದರೆ ಈ ಜಗತ್ತು ಎಷ್ಟು ಹಂಗಾಮಿಯೋ ಅಷ್ಟೇ ಅಮರತ್ವದ ಆಸೆಯುಳ್ಳದ್ದು-ಮೊದಲನೆಯದು ಕಟು ವಾಸ್ತವ, ಎರಡನೆಯದು ಕಟು ಕಲ್ಪನೆ....

ಪಾರ್ಥೇನಿಯಂ

ನಮ್ಮ ಸರ್ಕಾರಗಳಿಗೆ ಲೆಕ್ಕಾಚಾರವಾಗಲಿ, ಒಳನೋಟವಾಗಲಿ ಇರುವುದಿಲ್ಲ; ಕುರುಡರಂತೆ ವರ್ತಿಸುತ್ತವೆ. ಮೊನ್ನೆ ನನ್ನ ಮಿತ್ರರೊಬ್ಬರು ಬೆಂಗಳೂರನ್ನು ಕೊರೆಯುತ್ತಿರುವ ಕೆಲವು ರೋಗಗಳ ಬಗ್ಗೆ, ಸುಲಭ ಪರಿಹಾರ ಸಾಧ್ಯವಾಗದ ದೋಷಗಳ ಬಗ್ಗೆ ಮಾತಾಡುತ್ತಿದ್ದರು. ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿ ಕಾಂಗ್ರೆಸ್ ಹುಲ್ಲಿನ ಕಾಟ ಜಾಸ್ತಿ; ಈ ಹುಲ್ಲು ಬೆಳೆದು ಹೂಬಿಡುವಾಗಲಂತೂ ಅನೇಕ ಕುಟುಂಬಗಳಿಗೆ ಕೆಮ್ಮು, ಉಬ್ಬುಸ ಹತ್ತಿ ಊರು ಬಿಡುವಂತೆ ಆಗುತ್ತದೆ. ಮನೆಗಳನ್ನು ಕಟ್ಟದಿರುವ ಜಾಗಗಳು, ಬಯಲುಗಳು, ನಿರ್ಲಕ್ಷಿತ ಪ್ರದೇಶಗಳು, ಸೋಮಾರಿಗಳ ಕಾಂಪೌಂಡುಗಳು ಈ ಹುಲ್ಲಿಗೆ ನೆಚ್ಚಿನ ಜಾಗಗಳು. ಈ ಹುಲ್ಲನ್ನು ತೆಗೆಯುವುದಕ್ಕೆ ಗುಂಡೂರಾವ್ ಪ್ರಯತ್ನಿಸಿದರು; ಎರಡು ದಿನ ಹಾರಾಡಿ ಸುಮ್ಮನಾದರು. ನಮ್ಮ ಮೂರ್ಖರಾದ ಕೆಲವು ವಿಜ್ಞಾನಿಗಳು ಮೆಕ್ಸಿಕೊ ಹುಳ ಬಿಟ್ಟರು; ಆ ಹುಳ ಎಲ್ಲ ಸಸ್ಯಗಳಿಗೂ ಬಾಯಿ ಹಾಕಿತು-ಕಾಂಗ್ರೆಸ್ ಹುಲ್ಲು ತಪ್ಪಿಸಿಕೊಂಡಿತು.

ಇಡೀ ಪಟ್ಟಣ ಕಸ ಮುಸುರೆ, ಕಾಂಗ್ರೆಸ್ ಹುಲ್ಲು ಇತ್ಯಾದಿಯಿಂದ ಮುಕ್ತವಾಗುವುದು ಹೇಗೆಂದು ಒಮ್ಮೆ ಈ ಅಂಕಣದಲ್ಲಿ ಬರೆದಿದ್ದೇನೆ. ಇದನ್ನು ತೋರಿಸಿಕೊಟ್ಟವನು, ಈತ ತನ್ನ ಪಟ್ಟಣವನ್ನು ವಾಸಕ್ಕೆ ಯೋಗ್ಯವಾಗಿ ಮಾಡಿದವನು ಬ್ರೆಜಿಲ್ ದೇಶದ ಪಟ್ಟಣದ ಮೇಯರ್ ಒಬ್ಬ. ಈತನ ಪಟ್ಟಣದಲ್ಲಿ ಕಸ ಮುಸುರೆ, ಪಾರ್ಥೇನಿಯಂ, ಭಿಕ್ಷುಕರು, ಬೀದಿನಾಯಿಗಳು, ನಿರುದ್ಯೋಗಿಗಳು, ಕೊಳಚೆ ಪ್ರದೇಶಗಳು ಇಲ್ಲ; ಈತ ಹೇಗೆ ಇದನ್ನೆಲ್ಲ ಸಾಧ್ಯಗೊಳಿಸಿದ ಎಂದು ಅಮೆರಿಕಾದ ಅತ್ಯಾಧುನಿಕ ನಗರಗಳ ಮೇಯರ್‌ಗಳು, ಕಾರ್ಪೊರೇಷನ್ ಸದಸ್ಯರು ಬಂದು ನೋಡಿ ಕಲಿತುಹೋಗಿದ್ದಾರೆ. ಈತ ತನ್ನ ಪಟ್ಟಣವನ್ನು ಶುದ್ಧಗೊಳಿಸಲು ಆರಂಭಿಸಿದ್ದು ಹೀಗೆ-ಯಾರು ಕಸ ಮುಸುರೆಯನ್ನು ತಂದುಕೊಟ್ಟರೂ ಅಷ್ಟೇ ತೂಕದ ತರಕಾರಿ, ಹಣ್ಣು ಕೊಡಲು ವ್ಯವಸ್ಥೆ ಮಾಡಿದ; ಕಸ ತೆಗೆಯಲು ಲಕ್ಷಾಂತರದಷ್ಟು ಖರ್ಚಾಗುತ್ತಿದ್ದ ಹಣದಿಂದಲೇ ಸುಲಭವಾಗಿ ತರಕಾರಿ ನೀಡಿ ಕಸವನ್ನು ಒಂದುಕಡೆ ಸೇರಿಸುವಂತಾಯಿತು. ತರಕಾರಿ ಬೆಳೆಯುವುದು ಲಾಭದಾಯಕವಾಯಿತು....


-ಅಕ್ಟೋಬರ್ 27, 1993



ಭಾಜಪ ಮೌಲ್ವಿಗಳು!

ಒಬ್ಬ ಮೌಲ್ವಿ ಇದ್ದರಂತೆ. ಇಸ್ಲಾಂ ಧರ್ಮ ಅಂದರೆ ಅವರಿಗೆ ಪಂಚಪ್ರಾಣ ಅಂತೆ. ಇತರೆ ಧರ್ಮಗಳು ಅಂದರೆ ಒಂದು ರೀತಿಯ ಅಲರ್ಜಿ ಅವರನ್ನು ಆವರಿಸುತ್ತಿತ್ತಂತೆ. ಬ್ರಾಹ್ಮಣರನ್ನು ಕಂಡರಂತೂ ಉರಿದುಬೀಳುತ್ತಿದ್ದರಂತೆ. ಅವರನ್ನು ಹೀಯಾಳಿಸದೆ ಇದ್ದರೆ ತಿಂದ ಮಾಂಸ ಅರಗುತ್ತಲೇ ಇರಲಿಲ್ಲವಂತೆ. ಇಂತಹ ಮೌಲ್ವಿ ಸಾಹೇಬರು ಒಂದು ದಿವಸ ಬ್ರಾಹ್ಮಣರ ಮಡಿ ವಿಚಾರ ಪ್ರಸ್ತಾಪಿಸಿದರಂತೆ. "ಕ್ಯಾಗಲೀಜಾ ಈ ಬೊಮ್ಮನಾ.... ಆಜ್ ನಹಾತೊ

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಕಲ್‌ತಕ್ ನಹಾತಾಚ್‌ನೈ' ಎಂದು ಮಾಮೂಲಿ ರಾಗ ಹಾಡಿ ಮುಖ ಸಿಂಡರಿಸಿಕೊಂಡರಂತೆ. ಅಲ್ಲಿದ್ದವರು ಯಾರೋ "ಮುಸಲ್ಮಾನರು ಹೇಗೆ ಮೌಲ್ವಿ ಸಾಹೇಬರೆ" ಎಂದು ಕೇಳಿದ್ದಕ್ಕೆ ಮೌಲ್ವಿ ಸಾಹೇಬರು ಎದೆ ಉಬ್ಬಿಸಿ ಹೆಮ್ಮೆಯಿಂದ "ಹಮ್ ಮುಸಲ್ಮಾನಾ... ಜುಮ್ಮಾ ಸೆ ಜುಮ್ಮಾ, ಜುಮ್ಮಾ ಸೆ ಜುಮ್ಮಾ ನಹಾತೆ ಹೈ" ಎಂದು ಸಾರಿದರಂತೆ!

ಭಾಜಪ ಮುಖಂಡರು ಆಡ್ತಿರೋ ನಾಟಕ ನೋಡಿ ಇದು ನೆನಪಾಯಿತು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಮುಖಂಡರ ಕಾರ್ಯವೈಖರಿ ವರ್ಣಿಸಲು ಅಸದಳವಾದುದು. ಹಿಂದಿನ ಕಾಲದ ರಾಜರ ಆಸ್ಥಾನದಲ್ಲಿನ ವಂಧಿಮಾಗಧರ ಶೈಲಿಯಲ್ಲಿ ಹೇಳುವುದಾದರೆ-

'ಯುದ್ಧ ಸಾರುವ ಮುನ್ನವೇ
ಶರಣಾಗುವ ಉತ್ತರ ಕುಮಾರರು'
'ಸಮರ್ಥ ಅಭ್ಯರ್ಥಿಯ
ಕಾಲೆಳೆಯುವ ಶಕುನಿ ಮಹಾಶಯರು'
'ಅನ್ಯಾಯದ ವಿರುದ್ಧ ಪತ್ರಿಕಾಗೋಷ್ಠಿಯಲ್ಲಿ
ಆರ್ಭಟಿಸುವ ಭಾಷಣ ಭಲ್ಲೂಕಗಳು'

ಇಂತಹ ಪ್ರತಿಪಕ್ಷ ಇದ್ದಲ್ಲಿ ದುರಾಡಳಿತ ಅಬಾಧಿತ!

ಭಾಜಪಕ್ಕೆ ಇಷ್ಟೇ ಸಾಕಿತ್ತು, ಆದರೆ ಕಾಂಗ್ರೆಸ್ ನಾಯಕ ಮಣಿಗಳಿಗೆ ಅನುಮಾನ- ನಮ್ಮ ನಿಷ್ಕ್ರಿಯತೆಯನ್ನು ಕಂಡೂ ಜನ ಮತ ನೀಡಿದರೆ ಏನು ಗತಿ.. ಅನ್ಯಾಯವಾಗಿ ಭಾಜಪದ ಸರ್ಕಾರ ಬಿದ್ದೋಗುತ್ತಲ್ಲ, ರಾಜ್ಯದ ಲೂಟಿಗೆ ವಿದಾಯ ಹೇಳಬೇಕಾಗುತ್ತಲ್ಲ ಅಂತಾವ. ಅದಕ್ಕೇನ ಮಾಡಿದರು ಅವರು ಅಂದರೆ.....

ನೆರೆ ಸಂತ್ರಸ್ತರಿಗಾಗಿ ಹಣ ಸಂಗ್ರಹ ಮಾಡಿತ್ತಲ್ಲ ಕಾಂಗ್ರೆಸ್ಸು ಅದನ್ನು ಯಾವ ರೀತಿಯಾಗಿ ವಿನಿಯೋಗಿಸಿದರಪ್ಪ ಎಂದರೆ... ಕಾರ್ಯಕರ್ತರ ಟೀಪಾರ್ಟಿ, ವಿಮಾನ ಟಿಕೆಟ್ಟು ಎಲ್ಲಾವುದಕ್ಕೂ ಈ ಹಣವೇ ಆಪ್ಯಾಯಮಾನವಾಗಿ ತೋರಿತಂತೆ. ಇಷ್ಟೇ ಅಲ್ಲ, ಅವರ ಮುಂದಾಲೋಚನೆ ನೋಡಿ ಯಾರಾದರೂ ಅಹುದು ಅಹುದು ಎಂದು ಮೆಚ್ಚಲೇಬೇಕು. ಅದಾವುದು ಎಂದರೆ ನೆರೆ, ಬರ ಒಂದು ವರ್ಷ ಬಂದ ನಂತರ ಸುಮ್ಮನಾಗುವುದಿಲ್ಲವಲ್ಲ, ಬರುತ್ತಲೇ ಇರುತ್ತವೆ. ಆಗ ಅವರಿಗೆ ಪರಿಹಾರ ಒದಗಿಸ ಬೇಡವೆ ಎಂದೆಲ್ಲ ಆಲೋಚಿಸಿ ಈಗ ಸಂಗ್ರಹಿಸಿದ್ದ ಹಣವನ್ನು ಫಿಕ್ಸೆಡ್ ಡಿಪಾಸಿಟ್‌ನಲ್ಲಿ ಇಟ್ಟಿದ್ದರಂತೆ!

ಇದನ್ನೆಲ್ಲ ಬಯಲು ಮಾಡಿದರು. ಯಾರು ಅಂದರೆ ಭಾಜಪ ಅಲ್ಲ, ಕಾಂಗ್ರೆಸ್ ಪಕ್ಷ!

ಹಂಡೆಹಾಲು ಕುಡಿದ ಹಾಗಾಯಿತು ಭಾಜಪಗೆ. ಇದು 'ಅಕ್ಷಮ್ಯ ಅಪರಾಧ' ಎಂದು ಸಾರಿತು.

ನೆರೆ ಸಂತ್ರಸ್ತರ ನಿಧಿ ಹೀಗೆ 'ಪಾಪದಕೃತ್ಯ'ವಾಗಿ ಪರಿವರ್ತನೆಗೊಂಡಿತ್ತು.

ಕಾಂಗ್ರೆಸ್ ಸಂಗ್ರಹಿಸಿದ್ದ ಸುಮಾರು ನಾಲ್ಕು ಕೋಟಿ ರೂಪಾಯಿ ಈ ಪರಿಯಾಯ್ತು, ಭಾಜಪ ನೆರೆಸಂತ್ರಸ್ತರ ಸಂಕಷ್ಟ ಪರಿಹರಿಸಿದ್ದು ಹೇಗ್ಪೆ?

ನೆರೆ ಬಂದು ವರ್ಷ ಆಯಿತು. ಕಾಮಗಾರಿ ಪ್ರಾರಂಭವೇ ಆಗಿಲ್ಲ, ಆಗಿದ್ದ ಕಡೆಯೂ ಆಮೆ ವೇಗ ಅದಕ್ಕೆ. ಅಂದರೆ ಪರಿಹಾರ ದೊರಕಿಲ್ಲ; ಪುನರ್ವಸತಿ ಕಲ್ಪಿಸಿಲ್ಲ!

ಯಾಕೆ ಹೀಗೆ?

ಹಣ ಇಲ್ಲ!

ಹೀಗಂದರೇನು ಅರ್ಥ? ಸನ್ಮಾನ್ಯ ಯಡ್ಯೂರಪ್ಪನವರೇ ಸಾರ್ವಜನಿಕರಿಂದ ನಾನೂರು ಕೋಟಿ ರೂಪಾಯಿ ಸಂಗ್ರಹವಾಗಿದೆ ಎಂದು ಬೀಗಿದ್ದರಲ್ಲಾ... ಕೇಂದ್ರ ಸರ್ಕಾರದಿಂದ ಒಂದು ಸಾವಿರದ ಆರು ನೂರು ಕೋಟಿ ರೂಪಾಯಿ ಬಂದಿತ್ತಲ್ಲಾ.. ಅದೆಲ್ಲ ಏನಾಯಿತು?

ಹಣ ದುರುಪಯೋಗ ಆಗಿದೆ ಎಂದು ಮಹಾಜನತೆ ಚಿಂತಿಸಬೇಕಿಲ್ಲವಂತೆ! ಪ್ರತಿಯೊಂದು ಪೈಸೆಗೂ ಯಡ್ಯೂರಪ್ಪನವರು ಲೆಕ್ಕ ಕೊಡುತ್ತಾರಂತೆ!

ಯಾವಾಗ ಎಲ್ಲಿ ಕೊಡುತ್ತಾರೆ?

ವಿಧಾನಸಭೆಯಲ್ಲಿ!

ಅದನ್ನು ಶ್ವೇತಪತ್ರ ಅನ್ನಿ, ಇನ್ನಾವುದಾದರೂ ಹೆಸರಿನಿಂದ ಕರೆಯಿರಿ ಲೆಕ್ಕ ಕೊಡುವುದಂತೂ ಖಾತರಿ ಅಂದಿದ್ದಾರೆ ಯಡ್ಯೂರಪ್ಪನವರು. ಅಂದಮೇಲೆ ಇದು 'ಶ್ವೇತ ಪತ್ರ' ಅಲ್ಲ 'ಶ್ಯಾಮಲ ಪತ್ರ'ವೇ ಇರಬೇಕು!

ಯಡ್ಯೂರಪ್ಪನವರು ಜಾಣರು. ಅವರಿಗೆ ಗೊತ್ತು, ವಿಧಾನಸಭೆಯಲ್ಲಿ ಇದನ್ನು ಕುರಿತ ಚರ್ಚೆ ನಡೆಯುತ್ತೆ. ಆದರೆ ತೀವ್ರತೆ ಇರಲ್ಲ, ಯಾಕೆಂದರೆ ವಿಪಕ್ಷದವರೂ ತಿಂದಿದ್ದಾರೆ! ಅವರು ಒಂದು ತೊಲ ಹೇಸಿಗೆ ತಿಂದಿದ್ದರೆ ಇವರು ಮಣಗಟ್ಟಲೆ ನುಂಗಿದ್ದಾರೆ ನಿಜ. ಆದರೂ ಹೇಸಿಗೆ ಹೇಸಿಗೆ ತಾನೆ!!

ಆನೆ ನಡೆದದ್ದೇ ದಾರಿ

ಏನು ಜನ ಅಂತೀರಿ.... ಎಲ್ಲೋ ಆರು ತಿಂಗಳಿಗೆ ಹುಟ್ಟಿದವರಿರಬೇಕು. ದಿನಗಟ್ಟಲೆ ಏನೂ ಅವರನ್ನು



ಕಾಯಿಸಿಲ್ಲ, ಒಂದೆರಡು ಗಂಟೆ ತಡವಾಗಿರಬೇಕು ಅಷ್ಟೇಯ. ಅಷ್ಟಕ್ಕೆ ಕೌನ್ಸಿಲಿಂಗ್‌ಗೆ ತಮ್ಮ ಮಕ್ಕಳ ಜೊತೆ ಬಂದಿದ್ದ ಪೋಷಕರು ಆಕ್ರೋಶಗೊಳ್ಳುವುದೇನು... ಘೋಷಣೆಗಳನ್ನ ಅರಚುವುದೇನು..... ಬೆಳಗ್ಗೆಯಿಂದ ಹೊಟ್ಟೆಗೆ ಏನೂ ಕಾಣಿಸದೆ ಕ್ಯೂನಲ್ಲಿ ನಿಂತಿದ್ರಂತೆ... ತಿಂದುಕೊಂಡು ಬರಬೇಕಾಗಿತ್ತು, ಬ್ಯಾಡ ಅಂದಿದ್ದೋರ್‍ಯಾರು ಅಂತಾವ. ನಿಂತಿದ್ದೊ ಅಂದ್ರೇನಿಲ್ಲ ಬೇಕಾಯ್ತದೆ. ಕೆಲಸ ಆಗಬೇಕೋ ಬ್ಯಾಡವೊ? ಹದಿನಾರೋ ಹದಿನೇಳೋ ವರ್ಷನೆ ಕಾಯ್ದಿದ್ದರಂತೆ ತಮ್ಮ ಮಕ್ಕಳಿಗೆ ಒಳ್ಳೆ ಕೋರ್ಸು ಸಿಗಲಿ ಅಂತಾವ. ಇನ್ನೊಂದೆರಡು ಗಂಟೇಲೇನು ಸೂರೇಗೋದು ಅಂತೀನಿ. ಅದೂಅಲ್ಲದೆ ಅವರೇನು ಬೇಕುಬೇಕೂಂತ ತಡ ಮಾಡಿರ್ಲಿಲ್ಲ, ಕೆಲಸದ ಒತ್ತಡ ಹಂಗಿತ್ತು. ನೀವೇ ಹೇಳಿ. ವಿವಿಧ ವಿಭಾಗಗಳಲ್ಲಿ ಮೊದಲ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸೋದು ಲಾಗಾಯ್ತಿನಿಂದಲೂ ಹಿಂದಿರೋ ಪದ್ಧತಿ. ಪಾಪ ಸನ್ಮಾನ ಮಾಡ್ತಾರೆ ಅಂತ ಅವರು ಅವರ ಪೋಷಕರು ಏನೇನೋ ಕನಸು ಕಾಣ್ತಾ ಬಂದಿರ್ತಾರೆ. ಅವರ ಆಸೆಗೆ ತಣ್ಣೀರು ಎರಚಬೇಕಾ? ನೀವೇ ಹೇಳಿ. ಇದು ಒಂದು. ಓದಿದ ಮೇಲೆ ಕೆಲಸ ಅಂತ ಒಂದು ಬ್ಯಾಡವಾ? ಕೆಲವು ಕಾಲೇಜುಗಳಲ್ಲಿ ಕ್ಯಾಂಪಸ್ ಇಂಟರ್‌ವ್ಯೂನೇ ಇರಲ್ಲ, ಬಡ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆ ಆಗುತ್ತೆ ಅಲ್ವಾ. ಹಿಂಗಾಗಬಾರದು ಅಂತಾವ ಘನ ಸರ್ಕಾರ ಉದ್ಯೋಗ ಕೇಂದ್ರ ಸ್ಥಾಪಿಸಲು ಮುಂದಾಯಿತು. ಇದು ಬೇಕೋ ಬ್ಯಾಡವೋ? ನಮ್ಮ ಮಕ್ಕಳು ಓದಿ ಕೆಲಸ ಇಲ್ಲದೆ ಅಲೀಬೇಕಾ? ನೀವೇ ಹೇಳಿ. ಇದನ್ನೆಲ್ಲ ಮಾಡಬೇಕಾದ್ರೆ ಟೀಮಾಯ್ತದಲ್ಲಾ...

ಹಂಗಂತ ಕೌನ್ಸಿಲಿಂಗ್‌ನೇನೂ ತಡವಾಗಿ ಪ್ರಾರಂಭಿಸಿರಲಿಲ್ಲ. ಠಾಕುಠೀಕು 9 ಗಂಟೆಗೇ ಶುರು ಮಾಡಿದ್ರು. ಸನ್ಮಾನ, ಉದ್ಘಾಟನೆ ಇದೆಯಲ್ಲ ಅಂತ 12 ಗಂಟೆಗೆ ನಿಲ್ಲಿಸಿದರು. ಹಾಳಾಗಲಿ ಸರಿಯಾಗಿ ಹನ್ನೆರಡು ಗಂಟೆಗೇ ಕಾರ್ಯಕ್ರಮ ಪ್ರಾರಂಭಿಸೋಣ ಅಂದರೆ... ಅವತ್ತು 10.30 ರಿಂದ 12 ಗಂಟೆವರೆಗೆ ರಾಹುಕಾಲ ಬೇರೆ ಬಂದು ಕುಂತದೆ. ಉನ್ನತ ಶಿಕ್ಷಣ ಸಚಿವರು ಯಾವ ಶುಭ ಕಾರ್ಯವನ್ನೂ ರಾಹುಕಾಲದಲ್ಲಿ ಮಾಡುವುದಿಲ್ಲ! ಮನೆಬಿಟ್ಟು ಹೊರಡುವುದಿಲ್ಲ! ಅದು ಮುಗೀತಿದ್ದಂಗೆ ಕಾರು ಹತ್ತಿ ಬಂದರು. ಬೆಂಗಳೂರಲ್ಲಿ ವಾಹನದ ದಟ್ಟಣೆ ಕಂಡೇ ಇದ್ದೀರಿ. ಬರೋಕೆ ವಸಿ ತಡ ಆಗದೆ. ಬಂದ ತಕ್ಷಣ ಕಾರ್ಯಕ್ರಮ ಪ್ರಾರಂಭಿಸೇಬಿಟ್ಟರು ಮಾನ್ಯರು. ಜನಕ್ಕೆ ಅಷ್ಟೂ ತಾಳ್ಮೆಬ್ಯಾಡವಾ. 'ಭಾಷಣ ನಿಲ್ಲಿಸಿ, ಕೌನ್ಸಿಲಿಂಗ್ ನಡೆಸಿ' ಅಂತ ಘೋಷಣೆ ಕೂಗಿದ್ರು ಅಂದರೇನು ಹೇಳಾನ....

ಜನ ಏನೋ ಭಾಷಣ ನಿಲ್ಲಿಸಿ ಅಂತಿದ್ರು ನಿಜ. ಸಮಾರಂಭಕ್ಕೆ ಅಂತಾನೆ ಮಂತ್ರಿಗಳು ಬಂದಿದ್ರು; ಗಣ್ಯ ರಾಜಕೀಯ ವ್ಯಕ್ತಿಗಳು ಬಂದಿದ್ದರು; ಉನ್ನತ ಅಧಿಕಾರಿ ಗಳು ಬಂದಿದ್ರು. ಅವರೆಲ್ಲರಿಗೂ ಮಾತನಾಡೋಕೆ ಅವಕಾಶ ನೀಡಬೇಕೋ ಬ್ಯಾಡವೋ? ಸರ್ಕಾರದ ಸಾಧನೆಗಳ ಮನವರಿಕೆ ಮಾಡಿಕೊಡೋದು ನ್ಯಾಯವೋ ಅಲ್ಲವೋ ನೀವೇ ಹೇಳಿ.

ಹೋಗಿ ಹೋಗಿ ಇವತ್ತೇ ಈ ಸಮಾರಂಭ ನಡೆಸಬೇಕಿತ್ತ ಬೇರೆ ದಿವಸ ಮಾಡಿದ್ದರೆ ಆಗುತ್ತಿರಲಿಲ್ಲವಾ ಅಂತಾವೆ ಹಾಳಾದೋವು. ಘಳಿಗೆ ಅಂತ ಕೂಡಿ ಬರಬೇಕಲ್ರಪ್ಪ ಅಂದರೂ ಕೇಳೊಲ್ಲರು. ಹಿಂದೂ ಪಂಚಾಂಗದ ಅರಿವಿಲ್ಲದ ಮುಂಡೇವು 12 ಗಂಟೆಗೆ ಸರಿಯಾಗಿ ಪ್ರಾರಂಭಿಸಬೇಕಾಗಿತ್ತು ಅಂತಾವೆ. ಅರೆ, ರಾಹುಕಾಲದಲ್ಲಿ ಮಂತ್ರಿಗಳು ಮನೆಯಿಂದ ಹೆಂಗ್ರಿ ಹೊರಡ್ತಾರೆ ಅಂದ್ರೂ ಕೂಗಾಡ್ತಾವೆ.

ಅಲ್ಲ ಅವು ಹಿಂಗೆಲ್ಲ ಕೂಗಾಡ್ತವೆ ಅಂತ ಭಾಷಣಾನೇನೂ ಕಡಿಮೆ ಮಾಡ್ಲಿಲ್ಲ, ಆನೆ ನಡೆದದ್ದೇ ದಾರಿ ಅನ್ನೋದ ಅರೀದೇವು....

●

ಲೋಕಾಯುಕ್ತವನ್ನು ಬಲಪಡಿಸಲು ಸರಕಾರಕ್ಕೆ ಒತ್ತಾಯ

ನಮ್ಮ ಪ್ರಸ್ತುತ ಸಂವಿಧಾನಬದ್ಧವಾದಂಥ ಪ್ರಜಾಪ್ರಭುತ್ವದಲ್ಲಿ ಲೋಕಪಾಲ ಮತ್ತು ಲೋಕಾಯುಕ್ತಗಳು ಬಹಳ ಮುಖ್ಯ ಪಾತ್ರವನ್ನು ನಿರ್ವಹಿಸುವಂತೆ ನಿಯೋಜಿಸಲಾಗಿದೆ. ಆದರೆ ಕೇಂದ್ರಕ್ಕೆ ಸಂಬಂಧಿಸಿದ ಲೋಕಪಾಲವು ನಿಜವಾಗಿ 63 ವರ್ಷಗಳಲ್ಲಿಯೂ ಅಸ್ತಿತ್ವಕ್ಕೆ ಬಂದಿಲ್ಲ, ಅದಕ್ಕೆ ಒಂದೇ ಒಂದು ಕಾರಣ ಲೋಕಪಾಲದ ವ್ಯಾಪ್ತಿಯಿಂದ ಪ್ರಧಾನ ಮಂತ್ರಿಯವರನ್ನು ಹೊರಗೆ ಇರಿಸಬೇಕೆಂಬ ಕೇಂದ್ರ ಸರಕಾರದ ನಿಲುವು. ಕೆಲವು ರಾಜ್ಯಗಳಲ್ಲಿ ಲೋಕಾಯುಕ್ತಗಳು ಇವೆ. ಆದರೆ ಅವುಗಳ ವ್ಯಾಪ್ತಿಯಿಂದ ರಾಜ್ಯಗಳ ಮುಖ್ಯಮಂತ್ರಿಗಳನ್ನು ಹೊರಗೆ ಇಡಲಾಗಿದೆ. ಅಂದರೆ ಕೇಂದ್ರ ಸರಕಾರವು ನಿಜವಾದ ಅರ್ಥದಲ್ಲಿ ಲೋಕಪಾಲ ಎಂಬ ಸಂಸ್ಥೆಯ ವ್ಯಾಪ್ತಿಯಿಂದ ಸಂಪೂರ್ಣ ಅಬಾಧಿತವಾಗಿದೆ ಹಾಗೂ ರಾಜ್ಯ ಸರಕಾರಗಳೂ ಆಯಾ ರಾಜ್ಯಗಳ ಲೋಕಾಯುಕ್ತರಿಂದ ಅಬಾಧಿತವಾಗಿವೆ. ಈ ಕೊರತೆಯನ್ನು ನೀಗಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲವೆಂದರೆ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಒಳ ನುಸುಳಿ ಕೆಲಸ ಮಾಡಲು ಸಾಕಷ್ಟು ಅವಕಾಶವನ್ನು ನಮ್ಮ ದೇಶವನ್ನು ಆಳಿರುವ ಪಕ್ಷಗಳು ಉದ್ದೇಶಪೂರ್ವಕವಾಗಿಯೇ ಉಳಿಸಿಕೊಂಡಿವೆ.

ಈ ಕೊರತೆಯು ಕಳೆದ 63 ವರ್ಷಗಳಲ್ಲಿ ಸಾಕಷ್ಟು ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಮ್ಮನ್ನು ಆಳಿರುವ ಎಲ್ಲ ಕೇಂದ್ರ ಮತ್ತು ರಾಜ್ಯ ಸರಕಾರಗಳ ಕಣ್ಣುಮುಚ್ಚಾಲೆಯಿಂದ ನಡೆದಿವೆ ಎನ್ನುವುದು ಸ್ಪಷ್ಟವಾಗುತ್ತಿದೆ. ಸರಕಾರದ ಉನ್ನತ ಅಧಿಕಾರಿಗಳು ಆವರ ಬಲೆಗೆ ಬಿದ್ದು ಪ್ರಾಥಮಿಕ ತನಿಖೆಯಿಂದ ಪೂರ್ಣ ನ್ಯಾಯಾಂಗ ವಿಚಾರಣೆಗೆ ಗುರಿಪಡಿಸಲು ಸಾಕಷ್ಟು ಪುರಾವೆಗಳು ದೊರೆತ ಸಂದರ್ಭಗಳಲ್ಲಿ ಸಹ ಸರಕಾರದ ಕೃಪಾಕಟಾಕ್ಷದಿಂದ ಭ್ರಷ್ಟ ಅಧಿಕಾರಿಗಳು ತಪ್ಪಿಸಿಕೊಂಡಿರುವಂಥಾ ಉದಾಹರಣೆಗಳು ಸಾಕಷ್ಟಿವೆ. ಈ ಮುಖ್ಯ ಪ್ರಶ್ನೆಯನ್ನು ಒಂದು ವೇಳೆ ಬದಿಗಿರಿಸಿದರೂ ಸಹ ಇದ್ದ ವ್ಯವಸ್ಥೆಯಲ್ಲಿಯೇ ರಾಜ್ಯಗಳ ಲೋಕಾಯುಕ್ತಗಳು ಉತ್ತಮ ಕಾರ್ಯ ನಿರ್ವಹಿಸಿವೆ ಎನ್ನುವುದು ಗಮನಾರ್ಹವಾಗಿದೆ.

ಹೊಗಳಿಕೆ ತೆಗಳಿಕೆ

ನನ್ನ ಸ್ವಅನುಭವದಿಂದ ಹೇಳಬಹುದಾದ ಒಂದು ಉದಾಹರಣೆಯನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಸರಕಾರಿ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗುವಂತೆ ಹಾಗೂ ಅದರ ಕಾರ್ಯವ್ಯಾಪ್ತಿಯ ಮೇಲೆ ಅಕ್ರಮವಾಗಿ ಒಳ ನುಸುಳಿ ಆತಂಕ ಉಂಟುಮಾಡುವಂತೆ ವರ್ತಿಸುತ್ತಿದ್ದ ಖಾಸಗಿ ರಸ್ತೆ ಸಂಸ್ಥೆಗಳಿಗೆ ಕಾಂಟ್ರಾಕ್ಟ್ ಕಾನೂನನ್ನು ದುರ್ಬಳಕೆ ಮಾಡಿ ಸಾರಿಗೆ ಇಲಾಖೆಯ ಅಧಿಕಾರಿಗಳು ದೊಡ್ಡ ಪ್ರಮಾಣದಲ್ಲಿ ಪರವಾನಗಿ ನೀಡುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು, ಕರ್ನಾಟಕ ರಸ್ತೆ ಸಾರಿಗೆ ಇಲಾಖೆಯ ಕಾರ್ಮಿಕ ಮತ್ತು ನೌಕರರ AITUC ಸಂಘಟನೆಯ ಅಧ್ಯಕ್ಷ ಎಂಬ ನೆಲೆಯಲ್ಲಿ ಪ್ರಸ್ತಾಪಿತ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಲೋಕಾಯುಕ್ತರಿಗೆ ನಾನೊಮ್ಮೆ ಮನವಿ ಸಲ್ಲಿಸಿದ್ದೆ. ಆ ಮನವಿಯನ್ನು ಸ್ವೀಕರಿಸಿ ಖಾಸಗಿಯವರಿಗೆ ಈ ರೀತಿ ಅವಕಾಶ ನೀಡುವುದನ್ನು 15 ದಿನಗಳೊಳಗೆ ತಡೆಗಟ್ಟದಿದ್ದರೆ ಅದಕ್ಕೆ ಕಾರಣರಾದ ಸಾರಿಗೆ ಇಲಾಖೆಯ ಅಧಿಕಾರಿಗಳ ಮೇಲೆ ಕೋರ್ಟಿನಿಂದನೆ ಕ್ರಮವನ್ನು ಜರುಗಿಸಬೇಕೆಂಬ ಆದೇಶವನ್ನು ಲೋಕಾಯುಕ್ತರು ನೀಡಿದ್ದು ಒಂದು ಶ್ಲಾಘನೀಯ ಉದಾಹರಣೆ.

ಅಲ್ಲದೆ ಲೋಕಾಯುಕ್ತರ ಇತ್ತೀಚೆಗಿನ ಕಾರ್ಯವಿಧಾನಗಳು ಅತ್ಯಂತ ಪ್ರಶಂಸನೀಯವಾಗಿವೆ. ನ್ಯಾಮೂರ್ತಿ UL ಭಟ್ ಅವರಿಗೆ ಗಣಿಗಾರಿಕೆಗೆ ಸಂಬಂಧಿಸಿದ ಅಕ್ರಮಗಳ ತನಿಖೆಯನ್ನು ರಾಜ್ಯ ಸರಕಾರ ಒಪ್ಪಿಸಿತ್ತು, ಮುಖ್ಯ ಮಂತ್ರಿಗಳಿಗೆ ಸಂಬಂಧಿಸಿದ್ದ ಆರೋಪಗಳ ತನಿಖೆಯನ್ನು CBI ಗೆ ಒಪ್ಪಿಸಬೇಕೆಂಬ ನ್ಯಾ.ಮೂ.ಗಳ ಆದೇಶವನ್ನು ಕೇಂದ್ರ ಸರಕಾರ ಜಾರಿಗೆ ತರುವುದರ ಬದಲು ನ್ಯಾ.ಮೂ.ಗಳೇ ರಾಜಿನಾಮೆ ನೀಡುವ ಪರಿಸ್ಥಿತಿ ನಿರ್ಮಾಣ ಮಾಡಿದ್ದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಆ ವಿಷಯವೀಗ ನ್ಯಾಮೂರ್ತಿ ಸಂತೋಷ್ ಹೆಗ್ಡೆಯವರ ಲೋಕಾಯುಕ್ತದ ಮುಂದಿದ್ದು ಅವರು ಗಣಿಗಾರಿಕೆಯ ಬಗ್ಗೆ ತನಿಖೆ ಮುಂದುವರಿಸಿ ವರದಿಯನ್ನು ಪೂರ್ಣಗೊಳಿಸಿ ಸರಕಾರಕ್ಕೆ ರವಾನಿಸಿದ್ದಾರೆ ಎಂದು ವರದಿಯಾಗಿದೆ. ಆದರೆ ಗಣಿ ದೊರೆಗಳ ಪ್ರಭಾವದಿಂದಲೋ ಮಾಜೀ ಅಥವಾ ಹಾಲೀ ಮು.ಮಂತ್ರಿಗಳ ಕೈವಾಡದಿಂದಲೋ ಗಣಿ ಹಗರಣದ ವರದಿಯನ್ನು ಸರಕಾರವು ಇನ್ನೂ ವಿಚಾರಣೆಗೆ ಒಪ್ಪಿಸಲಿಲ್ಲ ಎಂಬುದು ಆತಂಕಕ್ಕೆ ಕಾರಣವಾಗಿದೆ.

ಹಾಗೆಯೇ ಅರಣ್ಯನಾಶದ ಬಗ್ಗೆ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಡೆದಿರುವಂಥಾ ಭೂಹಗರಣಗಳ ಬಗ್ಗೆ ನಡೆಸಿರುವ ತನಿಖೆಗಳು ಎಲ್ಲಿಗೆ ತಲುಪಿವೆ ಮತ್ತು ಅವುಗಳ ಫಲಿತಾಂಶವೇನು ಎಂಬ ಸುದ್ದಿ ಕೂಡಾ ಹೊರಗೆ ಬಾರದಂತೆ ತಡೆ ಹಿಡಿಯಲಾಗಿದೆ ಎಂಬುದು ಸಂಶಯಕ್ಕೆ ಎಡೆಯಾಗಿದೆ.

ಇಂತಹ ಸಂದರ್ಭದಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯು ಚುರುಕಾಗಿದೆ ಹಾಗೂ ಜನರ ಸೊತ್ತುಗಳ ಅಪಹರಣಗಳ ವಿರುದ್ಧ ಕ್ರಮ ಜರುಗಿಸಲು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಆಯೋಗಗಳು ತಯಾರಾಗಿವೆ ಎಂಬ ಭರವಸೆ ಜನರಿಗೆ ಬೇಕಾಗಿದೆ. ಅದಕ್ಕೆ ಪೂರಕವಾಗಿ ಉತ್ತಮ ಕೆಲಸ ನಿರ್ವಹಿಸುತ್ತಿರುವ ಹಾಗೂ ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರರಾಗಿರುವ ನ್ಯಾ.ಮೂರ್ತಿ ಸಂತೋಷ್ ಹೆಗ್ಡೆಯವರ ಮುಂದಾಳುತನದಲ್ಲಿರುವ ಲೋಕಾಯುಕ್ತವು ಸಲ್ಲಿಸಿರುವ ವರದಿಗಳೆಲ್ಲವೂ ಬಹಿರಂಗಗೊಳ್ಳಬೇಕು ಮತ್ತು ಅಂಗೀಕೃತವಾಗಬೇಕು ಹಾಗೂ ಮುಂದಿನ ಕ್ರಮ ಜರುಗಿಸಲು ಸರಕಾರ ಕ್ರಮ ಕೈಗೊಳ್ಳಬೇಕು.

ಪ್ರಸ್ತುತ ಲೋಕಾಯುಕ್ತವು ಇನ್ನಷ್ಟು ಹೆಚ್ಚು ಕಾಲ ಅಧಿಕಾರದಲ್ಲಿ ಮುಂದುವರಿದು ಭ್ರಷ್ಟಾಚಾರದ ನಿರ್ಮೂಲನೆಗೆ ಭದ್ರವಾದ ಬುನಾದಿಯನ್ನು ನಿರ್ಮಿಸಬೇಕೆಂಬ ಸಾರ್ವಜನಿಕರ ಅಪೇಕ್ಷೆಯನ್ನು ಅವರ ಚಟುವಟಿಕೆಗಳನ್ನು ಕಂಡು ತಿಳಿದಿರುವ ನಾನು ಹಾರೈಸುತ್ತೇನೆ.

ಲೋಕಾಯುಕ್ತರನ್ನು ಬಲಪಡಿಸುವ ದೃಷ್ಟಿಯಿಂದ ಅವರ ವರದಿಗಳಲ್ಲಿ ತಪ್ಪಿತಸ್ಥರೆಂದು ಉಲ್ಲೇಖಿಸಲಾಗಿರುವ ಅಧಿಕಾರಿಗಳನ್ನು ಅಮಾನತಿನಲ್ಲಿಟ್ಟು ಆಪಾದಿತರನ್ನಾಗಿ ವಿಚಾರಣೆಗೆ ಒಳಪಡಿಸುವ ಕ್ರಮವನ್ನು ಕಾನೂನು ತಿದ್ದುಪಡಿ ಮಾಡುವ ಮೂಲಕ ಸರಕಾರ ಜಾರಿಗೆ ತರಬೇಕು. ಅಲ್ಲದೆ ಆಪಾದಿತರನ್ನು ಲೋಕಾಯುಕ್ತದ ನ್ಯಾಯಾಲಯದಲ್ಲಿಯೇ ವಿಚಾರಣೆ ನಡೆಸಿ ಪ್ರಾಥಮಿಕ ತೀರ್ಪು ನೀಡುವ ಅಧಿಕಾರವನ್ನು ಲೋಕಾಯುಕ್ತಕ್ಕೆ ನೀಡಬೇಕು. ಈ ಕ್ರಮಗಳನ್ನು ಮುಂದಿನ ವಿಧಾನಮಂಡಲದ ಅಧಿವೇಶನದಲ್ಲಿಯೇ ಅಂಗೀಕರಿಸಿ ಜಾರಿಗೊಳಿಸಬೇಕೆಂದು ಒತ್ತಾಯಿಸುತ್ತೇನೆ.

- ಬಿ.ವಿ.ಕಕ್ಕಿಲಾಯ, ಮಂಗಳೂರು

ನಿರ್ದೇಶಕರ ಸಂಘದಲ್ಲಿ ಯುವಪಡೆ


...ನಾಗಾಭರಣ ಅವರ 'ಕೃಪೆ'ಯಿಂದಾಗಿ ಕರ್ನಾಟಕ ಚಿತ್ರ ನಿರ್ದೇಶಕರ ಸಂಘಕ್ಕೆ ಹೊಸ ಉತ್ಸಾಹಿ ಯುವ ... ಆಯ್ಕೆಯಾಗಿದೆ.


ನಾಗಾಭರಣ ಮಾಡಿದ್ದು ಇಷ್ಟೇ....

ಶಿವಮೊಗ್ಗದಲ್ಲಿ ಚಲನಚಿತ್ರ ಪ್ರಶಸ್ತಿ ಪ್ರದಾನ ...ರಂಭಕ್ಕೆ ಎಲ್ಲಾ ನಿರ್ದೇಶಕರನ್ನು ಯಾಕೆ ಕರೆದುಕೊಂಡು ...ಗಬೇಕು; ನಿರ್ದೇಶಕರ ಸಂಘದ ಪದಾಧಿಕಾರಿಗಳನ್ನು ಆಹ್ವಾನಿಸಿ ...ಸಾಕು" ಎಂದು ಆಗಿನ ಚೇಂಬರ್ ... ಜಯಮಾಲಾಗೆ ಭರಣ ಕಿವಿ ... ಹೇಳಿದ್ದರಂತೆ. ಆ ಕಿವಿಮಾತು ...ತೀ ಏನೋ ಯುವ ನಿರ್ದೇಶಕ ... ಗೊತ್ತಾಯಿತು. ಅವರೆಲ್ಲಾ ಒಟ್ಟು ...ಭರಣ ವಿರುದ್ಧ ಬಂಡಾಯವೆದ್ದರು. ಅಲ್ಲ, ಈ ವಿಷಯ ಚೇಂಬರ್ ... ಬಿಸಿಬಿಸಿ ಚರ್ಚೆಗೊಳಗಾಯಿತು. ... ನಿರ್ದೇಶಕನೊಬ್ಬ ಚೇಂಬರ್‌ನಲ್ಲಿ ...ಕೊಂಡು ಸ್ಪೀಕರ್ ಆನ್ ಮಾಡಿ ಮೊಬೈಲ್‌ನಲ್ಲಿ ...ಮಾಡಿ ಭರಣರನ್ನು ಬಯಲು ಮಾಡಿದರು. ಆ ...ಲ್ಲಿ ನಾಗಾಭರಣರನ್ನು ಸಿನಿಮಾ ಅಕಾಡೆಮಿ ಸ್ಥಾನದಿಂದ ...ಸಲು ಕೂಡಾ ಈ ಉತ್ಸಾಹಿ ... ನಿರ್ದೇ ಶಕರು ಮುಂದಾಗಿತ್ತು. ...ಗೆ ಎಲ್ಲರೂ ಸೇರಿ ಅದನ್ನು ಅಲ್ಲಿಗೆ ...ಹಾಕಿದರು.

...ಘಟನೆಯಂನ್ನು ಏನೋ ...ಹಾಕಿದರು ನಿಜ. ಆದರೆ ಯುವ ...ಶಕರ ಒಳಗೆ ಕುದಿಯುತ್ತಿದ್ದ ...ನೆಯನ್ನು ಮಾತ್ರ ತಣಿಸಲು ...ಂದಲೂ ಸಾಧ್ಯವಾಗಲಿಲ್ಲ, ಅದರ ... ನಿರ್ದೇಶಕರ ಸಂಘದ ಚುನಾವಣೆಯ ಈ ...ಂಶ.

...ಳೆದ ಹಲವಾರು ದಶಕಗಳಿಂದ ನಿರ್ದೇಶಕರ ...ದಲ್ಲಿ ಗಟ್ಟಿಯಾಗಿ ಮೊಕ್ಕಾಂ ಹೂಡಿದ್ದ ಹಿರಿಯ ...ಶಕರಾದ ರಾಜೇಂದ್ರ ಸಿಂಗ್‌ಬಾಬು, ಜೋಸೈಮನ್, ...ಭರಣ, ಕೊಡ್ಲು ರಾಮಕೃಷ್ಣ ನಂಜುಂಡೇಗೌಡ, ನಾಗತಿಹಳ್ಳಿ ಚಂದ್ರಶೇಖರ್, ರಘು.... ಮೊದಲಾದವರನ್ನೆಲ್ಲ ತಮ್ಮ ಸ್ಥಾನಗಳಿಂದ ಪದಚ್ಯುತಿಗೊಳಿಸಬೇಕೆಂದು ಯುವ ನಿರ್ದೇಶಕರು ನಿರ್ಧರಿಸಿದರು. ಅದರಂತೆ ಯುವಕರಾದ ಎಂ.ಎಸ್.ರಮೇಶ್, ಪ್ರೇಮ್, ನಾಗ್‌ಕಿಶೋರ್, ಪ್ರೀತಂ ಗುಬ್ಬಿ, ಯೋಗೇಶ್ ಹುಣಸೂರು, ನಾಗೇಂದ್ರ ಪ್ರಸಾದ್... ಮೊದಲಾದ ಯುವ ನಿರ್ದೇಶಕರ ದಂಡೇ ಚುನಾವಣೆಯಲ್ಲಿ ನಿಂತು ಜಯಗಳಿಸಿತು. ಈಗ ಎಂ.ಎಸ್.ರಮೇಶ್ ಅಧ್ಯಕ್ಷತೆಯಲ್ಲಿ ಉತ್ಸಾಹಿ ಯುವಕರ ತಂಡ ನಿರ್ದೇಶಕರ ಸಂಘದ ಎಲ್ಲ ಸ್ಥಾನಗಳನ್ನು ಅಲಂಕರಿಸಿದೆ.


ನಾಗಾಭರಣ



ಸಿಂಗಬಾಬು

ಇದೆಲ್ಲ ಸಾಧ್ಯವಾದುದು ನಾಗಾಭರಣ ಮೇಲಿನ ಸಿಟ್ಟಿನಿಂದ ಮಾತ್ರ. ಸರ್ಕಾರದ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಎಲ್ಲ ನಿರ್ದೇಶಕರು ಬೇಡ, ಬರೀ ನಿರ್ದೇಶಕ ಸಂಘದ ಪದಾಧಿಕಾರಿಗಳಿದ್ದರೆ ಸಾಕು ಎಂದು ಭರಣ ಹೇಳಿದ್ದೇ ಈ ಯುವ ಪಡೆಗೆ ನಿರ್ದೇಶಕರ ಸಂಘವನ್ನೇ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬ ಹಠ ಬೆಳೆಸಿತು. ನಿರ್ದೇಶಕರ ಸಂಘಕ್ಕೆ ಆಪರೇಷನ್ ಮಾಡಲು ಈ ಯುವಕರು ಅಂದೇ ನಿರ್ಧರಿಸಿದರು. ಹೀಗೆ ನಾಗಾಭರಣ ಅವರ ಒಂದು ಲೂಸ್‌ಟಾಕ್ ಇಡೀ ಯುವ ನಿರ್ದೇಶಕರಲ್ಲಿ ಉತ್ಸಾಹ ಮತ್ತು ರೋಷವನ್ನು ಸೃಷ್ಟಿಸಿತು. ಹಳಬರು ಮಾಡಿದ್ದೆಲ್ಲ ಸರಿ, ಹೊಸಬರಿಗೆ ಏನೂ ಗೊತ್ತಿಲ್ಲವೆಂಬ ಉದ್ಧಟತನಕ್ಕೆ ಯುವಕರು ಸರಿಯಾದ ಪಾಠ ಕಲಿಸಿದ್ದಾರೆ.


ಹೊಸ ಉತ್ಸಾಹ ಮತ್ತು ವಿಭಿನ್ನ ದೃಷ್ಟಿಕೋನವುಳ್ಳ ಈ ಯುವ ನಿರ್ದೇಶಕರ ದಂಡು ಅಧಿಕಾರದ ಗದ್ದುಗೆಯೇರಿದ್ದು ನಿಜಕ್ಕೂ ಅತ್ಯಂತ ಸ್ವಾಗತಾರ್ಹ ಬೆಳವಣಿಗೆ. ಯಾಕೆಂದರೆ ಎಲ್ಲಾ ಕ್ಷೇತ್ರಗಳಲ್ಲೂ ಇಂದು ಯುವಕರದೇ ಪ್ರಾಬಲ್ಯ. ಹಾಗೇ ನೋಡಿದರೆ ಈ ಯುವಕರೇ ಗಾಂಧಿನಗರದಲ್ಲಿ ಕೂಡಾ ಕಳೆದ ಹಲವಾರು ವರ್ಷಗಳಿಂದ ಸುದ್ದಿ ಮಾಡುತ್ತಾ ಬಂದಿದ್ದಾರೆಯೇ ವಿನಃ ಹಳೇ ತಲೆಮಾರಿನ ನಿರ್ದೇಶಕರಲ್ಲ. ಆಗಿನ ನಿರ್ದೇಶಕರು ಈಗಿನ ಬದಲಾದ ಕಾಲಘಟ್ಟಕ್ಕನುಗುಣವಾಗಿ ತಮ್ಮನ್ನು ತಾವು ಬದಲಾಯಿಸಿಕೊಳ್ಳದ್ದರಿಂದ ಅವರೀಗ ನಿಷ್ಕ್ರಿಯ ಎನಿಸುತ್ತಿದ್ದಾರೆ.

ಯುವಕರ ತಂಡ ಸದ್ದುಗದ್ದಲವಿಲ್ಲದೆ ಒಂದು ಕ್ರಾಂತಿಯ ಮೂಲಕ ಹಳಬರನ್ನೆಲ್ಲಾ ಮೂಲೆಗುಂಪು ಮಾಡಿ ಪ್ರಾಬಲ್ಯ ಮೆರೆದಿರುವುದು ಮೆಚ್ಚೋಣ. ಆದರೆ ಅದೇ ಸಂದರ್ಭದಲ್ಲಿ ಈ ಯುವ ನಿರ್ದೇಶಕರು ರಾಜೇಂದ್ರಸಿಂಗ್ ಬಾಬು ಆಗಲಿ, ನಾಗಾಭರಣ ಆಗಲಿ ಅಥವಾ ಇನ್ನಿತರ ಯಾವುದೇ ಹಿರಿಯ ನಿರ್ದೇಶಕರಾಗಲಿ ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆಯನ್ನು ಮರೆಯಬಾರದು.

ಸಿಂಗ್‌ಬಾಬು ನಿರ್ದೇಶನದ ನಾಗರಹೊಳೆ, ಚಕ್ರವ್ಯೂಹ, ಬಂಧನ, ಮುತ್ತಿನ ಹಾರ, ಮುಂಗಾರಿನ ಮಿಂಚು.... ಮೊದಲಾದ ಚಿತ್ರಗಳು ರಾಷ್ಟ್ರಮಟ್ಟದಲ್ಲೇ ಖ್ಯಾತಿಗಳಿಸಿದವು ಎಂಬುದನ್ನು ಈ ಯುವಕರು ನೆನಪಿಸಿಕೊಳ್ಳಬೇಕು. ಹಾಗೆಯೇ ಭರಣ ನಿರ್ದೇಶನದ ಜನುಮದ ಜೋಡಿ, ಚಿನ್ನಾರಿ ಮುತ್ತ, ನಾಗಮಂಡಲ, ಮೈಸೂರು ಮಲ್ಲಿಗೆ, ಶಿಶುನಾಳ ಷರೀಫ.... ಹಾಗೂ ಇನ್ನು ಅನೇಕ ಚಿತ್ರಗಳು ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ಕನ್ನಡಕ್ಕೆ ಕೀರ್ತಿ ತಂದ ಚಿತ್ರಗಳೆಂಬುದನ್ನು ಮರೆಯಬಾರದು.


ರಮೇಶ್


ಕಿಟ್ಟಿ


ಪ್ರೇಮ್

ಆದರೆ ಇಂದು ಅತ್ಯುತ್ಸಾಹದಲ್ಲಿ ನಿರ್ದೇಶಕರ ಸಂಘದ ಆಯಕಟ್ಟಿನ ಸ್ಥಾನಗಳನ್ನು ಅಲಂಕರಿಸಿರುವ ಈ ಯುವ ನಿರ್ದೇಶಕರುಗಳು ಇನ್ನೂ ಅಂತಹ ದೊಡ್ಡ ಸಾಧನೆಗಳೇನನ್ನೂ ಮಾಡಿಲ್ಲವೆಂಬುದನ್ನು ಅವರು ಅರಿತುಕೊಳ್ಳಬೇಕು. ಇನ್ನು ತಮಾಷೆಯ ವಿಷಯವೆಂದರೆ ಒಂದು ಚಿತ್ರ ನಿರ್ದೇಶಿಸಿದವರೆಲ್ಲಾ ಸಂಘದ ಪದಾಧಿಕಾರಿಗಳ ಸ್ಥಾನವನ್ನು ಅಲಂಕರಿಸಿದ್ದಾರೆ. ಅದು ಪ್ರಜಾಪ್ರಭುತ್ವದಲ್ಲಿ ತಪ್ಪಲ್ಲ; ಆದರೆ ಅವರು ತಮ್ಮ ಕ್ರಿಯಾಶೀಲತೆಯಿಂದ ಈ ಸಮಾಜದಲ್ಲಿ ಹೆಚ್ಚು ಗುರುತಿಸಿಕೊಂಡರೆ ಮಾತ್ರ ಅದಕ್ಕೆ ತೂಕವಿರುತ್ತದೆ.

ಅದೇನೇ ಇರಲಿ, ಹೊಸ ತಂಡಕ್ಕೆ ಶುಭಾಷಯ ಇದ್ದೇ ಇರುತ್ತದೆ. ಹಿಂದಿನ ಅಧ್ಯಕ್ಷರ ಕಾಲಾವಧಿಯಲ್ಲಿ ನಡೆದ ಅನೇಕ ಹಣಕಾಸಿನ ದುರ್ವ್ಯವಹಾರವನ್ನು ಈ ಯುವಕರ ತಂಡ ಬಯಲಿಗೆಳೆಯಬೇಕು. ಯಾಕೆಂದರೆ ಯಾವುದೇ ಕಾರಣಕ್ಕೆ ಅಂತಹ ಹಗರಣಗಳು ಮುಚ್ಚಿಹೋಗಬಾರದು. ಆಗ ಮಾತ್ರ ಉದ್ಯಮದಲ್ಲಿ ನಿರ್ದೇಶಕರ ಸ್ಥಾನ ಹೆಚ್ಚು ವಿಶ್ವಾಸಾರ್ಹವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಲು ಸಾಧ್ಯ.

ನಿರ್ದೇಶಕರ ಸಂಘಕ್ಕೆ ಹೊಸ ಜೀವ ಕೊಟ್ಟಿರುವ ಈ ಯುವಕರು ದಿನದಿಂದ ದಿನಕ್ಕೆ ಸೊರಗಿಹೋಗುತ್ತಿರುವ ಕನ್ನಡ ಚಲನಚಿತ್ರರಂಗಕ್ಕೆ ಕೂಡಾ ಹೊಸ ಜೀವವನ್ನು ನೀಡುವ ಜವಾಬ್ದಾರಿ ಹೊರಬೇಕಾಗಿದೆ. ಹೊಸ ಪದಾಧಿಕಾರಿಗಳು ಅಧಿಕಾರದ ಸ್ವೀಕಾರದ ಮೊದಲು ಒಂದು ಸಣ್ಣ ಶಪಥವನ್ನು ಮಾಡಬೇಕು. ಅದೇನೆಂದರೆ "ಏನೇ ಆದರೂ ಒಂದು ವರ್ಷದೊಳಗೆ ನಾನೊಂದು ಶತದಿನೋತ್ಸವ ಆಚರಿಸುವ ಚಿತ್ರವೊಂದನ್ನು ನೀಡುತ್ತೇನೆ" ಎಂದು. ಬಹುಶಃ ರಮೇಶ್ ಮತ್ತು ಅವರ ತಂಡದ ಸದಸ್ಯರು ಈ ರೀತಿ ಒಬ್ಬೊಬ್ಬರು 'ಸೆಂಚುರಿ' ಬಾರಿಸಿದರೆ ಮಾತ್ರ ಉದ್ಯಮ ಚೇತರಿಸಿಕೊಳ್ಳಬಹುದು. ಆಗ ಮಾತ್ರ ಹಿರಿಯರನ್ನು ಪದಚ್ಯುತಿಗೊಳಿಸಿ, ಅಧಿಕಾರ ಹಿಡಿದುದು ಸಾರ್ಥಕವೆನಿಸುತ್ತದೆ. •

...ಚಂದ್ರಮನನ್ನು ಬಿಟ್ಟ ಪ್ರೇಮ್

'ನೆನಪಿರಲಿ' ಪ್ರೇಮ್‌ನ ಅಧಃಪತನಕ್ಕೆ ಸ್ವತಃ ಆತನೇ ಕಾರಣನಾಗು...ವುದು ಪದೇಪದೇ ರುಜುವಾತಾಗುತ್ತಿದೆ.

...ಬಾಯಿ ನೆಟ್ಟಗೆ ಇಟ್ಟುಕೊಂಡಿದ್ದರೆ ಇದೇ ಜೂನ್ 18ರಂದು ...ನ 'ಪ್ರೇಮ ಚಂದ್ರಮ' ಚಿತ್ರ ಸೆಟ್ಟೇರಬೇಕಿತ್ತು. ಆದರೆ ತನ್ನ ... ಬುದ್ಧಿಯಿಂದ ಪಾಲಿಗೆ ಬಂದ ಅವಕಾಶವನ್ನು ಎಡಗಾಲಲ್ಲಿ ...ವುದರಿಂದ ಪ್ರೇಮ್ ಈಗ ಮನೆಯಲ್ಲೇ ಕುಳಿತು ಕವಡೆ ...ನಂತಾಗಿದೆ.

ಈ ಹಿಂದೆ ದರ್ಶನ್‌ನ 'ಸ್ನೇಹಾನಾ ಪ್ರೀತಿನಾ' ಮತ್ತು 'ಅರ್ಜುನ್' ...ರಡು ಚಿತ್ರಗಳನ್ನು ನಿರ್ದೇಶಿಸಿದ್ದ ಶಾಹುರಾಜ್‌ಶಿಂಧೆ 'ಪ್ರೇಮ ...ಮ' ಎನ್ನುವ ಸಬ್ಜೆಕ್ಟ್‌ಅನ್ನು ಸಿದ್ಧಮಾಡಿಕೊಂಡು, ಆ ಚಿತ್ರದ ...ಕನಾಗಿ ಪ್ರೇಮ್‌ನೇ ನಟಿಸಬೇಕೆಂದು ಹಂಬಲಿಸಿ ... ಮನೆ ಹುಡುಕಿಕೊಂಡು ಹೋಗಿ ಆತನನ್ನು ...ದ್ದರು. ಈ ಚಿತ್ರದಲ್ಲಿ ನಟಿಸಲು ಪ್ರೇಮ್‌ಗೆ ...ಂಟೂವರೆ ಲಕ್ಷ ರೂಪಾಯಿ ಸಂಭಾವನೆಯೂ ... ಆಗಿತ್ತು, ಹತ್ತು ಲಕ್ಷ ರೂಪಾಯಿಯ ಅಡ್ವಾನ್ಸ್ ...ಕೂಡಾ ಪ್ರೇಮ್ ಕೈಗೆ ಸಂದಾಯವಾಗಿತ್ತು.

...ದರೆ ಮುಹೂರ್ತದ ದಿನ ಹತ್ತಿರಾಗುತ್ತಿದ್ದಂತೆ ...ನ ರೊಳ್ಳೆಗಳೂ ಜಾಸ್ತಿಯಾದವು. ಚಿತ್ರದ ಆರಂಭಿಕ ...ರಂಭದ ಆಹ್ವಾನ ಪತ್ರಿಕೆಯಲ್ಲಿ ಅಂಗಿ ಬಿಚ್ಚಿಕೊಂಡಿದ್ದ ...ಟೋವನ್ನು ಹಾಕಿಸಿ ತನ್ನಿಷ್ಟದಂತೇ ಆಗಬೇಕೆಂದು ... ರಚ್ಚೆ ಹಿಡಿದು ಕೂತನಂತೆ. ನಿರ್ದೇಶಕ ಸುನಿಲ್ ... ತೆಗೆಸಿದ್ದೇ ಪ್ರೇಮ್‌ನ ಮೊದಲ ಮುನಿಸಿಗೆ ...ವಾಗಿದೆ. ನಂತರ ಚಿತ್ರಕ್ಕೆ ಆಯ್ಕೆ ಮಾಡಿದ ಯಾವ ...ಕಿಯರನ್ನೂ ಈತ ಒಪ್ಪಲಿಲ್ಲವಂತೆ. ಮೊದಲನೆಯ ...ನಿಖಿತಾಳನ್ನು 'ಥೂ...' ಎಂದು ತಿರಸ್ಕರಿಸಿದ ಪ್ರೇಮ್, ...ಲೆ ಗೌರಿ ಮಂಜಾಲ್‌ಳನ್ನೂ ಒಲ್ಲೆ ಎಂದಿದ್ದಾನೆ. ಹೋಗಲಿ, ...ಳನ್ನಾದರೂ ಹೀರೋಯಿನ್ ಮಾಡಬಹುದಾ? ಎಂದರೆ 'ಆಕೆ ... ಮಾಡು ಎಂದರೆ ನನಗೆ ಈ ಸಿನಿಮಾನೇ ಬೇಡ' ಎಂದು ... ಗಂಟಿಕ್ಕಿಕೊಂಡನಂತೆ.

...ಹೀಗೆ ಪ್ರತಿಯೊಂದರಲ್ಲೂ ಮೂಗು ತೂರಿಸುತ್ತಾ ನಖರಾ ಎಬ್ಬಿಸುತ್ತಿದ್ದ ... ಕಡೆಗೆ 'ಬೇಕಾದರೆ ನಿಮ್ಮ ಅಡ್ವಾನ್ಸ್ ದುಡ್ಡು ವಾಪಾಸು ...ನಿ. ನನಗೂ ನಿಮ್ಮ ಸಿನಿಮಾಕ್ಕೂ ಸರಿ ಬರ್ತಿಲ್ಲ...' ಎಂದು ...ಹೂರ್ತಕ್ಕೆ ಎರಡು ದಿನವಿದ್ದಂತೆ 'ಪ್ರೇಮ ಚಂದ್ರಮ'ನಿಗೆ ಟಾಟಾ ...ದ್ದಾನೆ.

ಪ್ರೇಮ್ ಈಗ ಚಿತ್ರದಿಂದ ಹೊರಬಂದು ತಾನು ಪಡೆದ ಅಡ್ವಾನ್ಸ್ ...ನ್ನೇನೋ ವಾಪಸು ಕೊಡುತ್ತಾನೆ. ಆದರೆ, ಈ ಹೊತ್ತಿಗಾಗಲೇ ಈ ಚಿತ್ರದ ಫೋಟೋ ಶೂಟು, ಇನ್ವಿಟೇಷನ್ನು, ಅದೂ ಇದೂ ಅಂತಾ ಎರಡು ಮೂರು ಲಕ್ಷ ರೂಪಾಯಿ ನಿರ್ಮಾಪಕರಿಗೆ ಕೈಬಿಟ್ಟು ಹೋಗಿದೆ. ಈ ನಷ್ಟವನ್ನು ಯಾರು ತುಂಬಿಸಿಕೊಡುತ್ತಾರೆ ಅನ್ನೋದೇ ನಿರ್ದೇಶಕ ಶಿಂಧೆಯ ಅಳಲು.

ನಿಗದಿಯಾದ ಮುಹೂರ್ತದಲ್ಲೇ 'ಪ್ರೇಮ ಚಂದ್ರಮ'ನನ್ನು ಮುಂದುವರೆಸಲು ಉದ್ದೇಶಿಸಿರುವ ನಿರ್ದೇಶಕ ಶಿಂಧೆ ಮತ್ತು ನಿರ್ಮಾಪಕರಾದ ಗಣೇಶ್, ಕೃಷ್ಣ ಮತ್ತು ಜಗದೀಶ್‌ರ ತಂಡ ಈಗ ಪ್ರೇಮ್ ಕೈಕೊಟ್ಟ ಸ್ಥಾನಕ್ಕೆ 'ಸವಾರಿ' ಖ್ಯಾತಿಯ ರಘು ಮುಖರ್ಜಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಜೊತೆಗೆ 'ಹಾಗೆ ಸುಮ್ಮನೆ' ಕಿರಣ್ ಮತ್ತು ನಾಯಕಿಯಾಗಿ ರೇಖಾರನ್ನು ನಿಕ್ಕಿ ಮಾಡಿದ್ದಾರೆ. ಚಿತ್ರ ಆರಂಭವಾಗಿದೆ...








'ಪಲ್ಲಕ್ಕಿ'ಯಿಂದ ಜಾರಿಬಿದ್ದ ಪ್ರೇಮ್!

ಕನ್ನಡ ಚಿತ್ರರಂಗದಲ್ಲಿರುವ ಬೆರಳೆಣಿಕೆಯ ಸುಂದರ ನಟರಲ್ಲಿ ಪ್ರೇಮ್ ಕೂಡಾ ಒಬ್ಬ. ಒಂದು ಕಾಲಕ್ಕೆ ಪ್ರೇಮ್ ಹೊಟ್ಟೆಪಾಡಿಗಾಗಿ ಸಂಪಂಗಿರಾಮನಗರದಲ್ಲಿ ಮಗ್ಗದ ಕೆಲಸ ಮಾಡಿಕೊಂಡಿದ್ದ ಹುಡುಗ. ನಟನಾಗುವ ಸೆಳೆತಕ್ಕೆ ಬಿದ್ದು 'ಇಪ್ಟಾ' ಎಂಬ ರಂಗ ತಂಡವನ್ನು ಸೇರಿ, ನಟನೆಯನ್ನು ಕಲಿತು, ಒಂದಷ್ಟು ನಾಟಕಗಳಲ್ಲೂ ಅಭಿನಯಿಸಿದ್ದ. ನಂತರ 'ಪ್ರಾಣ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ, 'ನೆನಪಿರಲಿ'ಯಿಂದ ಪ್ರೇಕ್ಷಕರಿಗೆ ಪರಿಚಯವಾಗಿ, ತನ್ನ ಸುಂದರ ಮುಖದಿಂದ ಅಪಾರ ಮಹಿಳಾ ಅಭಿಮಾನಿಗಳನ್ನು ಪಡೆದ. ಆದರೆ ಈ ಪ್ರೇಮ್ ಎಂಬ ಮುದ್ದು ಮುಖದ ನಟ 'ನೆನಪಿರಲಿ' ಚಿತ್ರದ ಸಾಧಾರಣ ಯಶಸ್ಸಿನ 'ಜೊತೆಜೊತೆಯಲಿ' ಸಾಗಿ 'ಪಲ್ಲಕ್ಕಿ' ಏರಿದ್ದೇ ಬಂತು, ಆನಂತರ ಸಿಕ್ಕಿದ್ದೆಲ್ಲ ಭರ್ಜರಿ ಸೋಲುಗಳೇ.

ಪ್ರೇಮ್ ನಟಿಸಿದ 'ಸವಿಸವಿ ನೆನಪು', 'ಹೊಂಗನಸು', 'ಗೌತಮ್' ಮತ್ತು 'ಗುಣವಂತ' ಚಿತ್ರಗಳು ಕೆಟ್ಟ ರೀತಿಯಲ್ಲಿ ನೆಲಕಚ್ಚಿದ್ದವು. 'ಇರಲಾರದೇ ಇರುವೆ ಬಿಟ್ಕೊಂಡರು' ಎಂಬಂತೆ 'ನಾನು ಇನ್ನು ಮುಂದೆ ರಿಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ' ಎಂಬ ಕ್ರಾಂತಿಕಾರಿ ಘೋಷಣೆಯನ್ನು ಮೊಳಗಿಸಿದ ಈತ ಕೆಲವೇ ದಿನಗಳಲ್ಲಿ ಆ ಮಾತನ್ನು ವಾಪಾಸು ಪಡೆದ. ಈ ಕಾರಣಕ್ಕೇ ಎಲ್ಲರಿಂದ ನಗೆಪಾಟಲಿಗೀಡಾದ. ರಕ್ಷಣಾ ವೇದಿಕೆಯ ಹಾರಾಟಗಳಲ್ಲೂ ಮುಖ ತೂರಿಸುವ ಪ್ರೇಮ್‌ಗೆ ಸುಮ್ಮನೇ ಸುದ್ದಿಮಾಡಲು ಬಾಯಿಗೆ ಬಂದಂಗೆ ಮಾತಾಡೋ ವೀಕ್‌ನೆಸ್ಸೂ ಇದೆ.



ಜೊತೆಗಾರ ಸಿನಿಮಾ ಸಮಯದಲ್ಲೂ ಹೀಗೇ ವರಾತ ತೆಗೆದ ಪ್ರೇಮ್ 'ಸಿನಿಮಾದ ಐಟಂಸಾಂಗ್‌ಗೆ ರಾಖೀ ಸಾವಂತೇ ಬೇಕು' ಎಂದು ಬಾಯಿಬಡಿದುಕೊಂಡು ನಿರ್ಮಾಪಕ ಅಶ್ವಿನಿ ರಾಮ್‌ಪ್ರಸಾದ್ ಜೊತೆಗೆ ರಗಳೆ ಮಾಡಿದ್ದ, ಮತ್ತೊಮ್ಮೆ 'ಗುಣವಂತ' ಚಿತ್ರದಲ್ಲಿ ಮಾಡಿದ್ದು ನನ್ನ ಅಪರಾಧ ಎಂದು ತನ್ನ ಚಿತ್ರದ ಬಗ್ಗೆ ತಾನೇ ಅವಹೇಳನದ ಮಾತಾಡಿದ್ದ.

ಪ್ರೇಮ್ ಸಿನಿಮಾ ಮೂಲಕ ಹೆಸರು ಮಾಡಿದ್ದಕ್ಕಿಂತ ಕಿತಾಪತಿಯಿಂದಲೇ ಹೆಚ್ಚು ಪ್ರಸಿದ್ಧಿ ಪಡೆದ ನಟ. ಪ್ರೇಮ್‌ನ ದುರಾದೃಷ್ಟವೋ ಏನೋ, ಈತ ನಟಿಸಿರುವ 'ಸಿಹಿಮುತ್ತು' ಮತ್ತು 'ಜನುಮ ಜನುಮದಲ್ಲೂ' ಅರ್ಧಕ್ಕೇ ನಿಂತಿವೆ. ಇನ್ನು 'ಜೊತೆಗಾರ' ಬಿಡುಗಡೆಯ ದಿನವೇ ರದ್ದಾಗಿ ಒಂದು ವರ್ಷದಿಂದ ಡಬ್ಬಾಸೇರಿ ಬೆಚ್ಚಗೆ ಮಲಗಿದ್ದಾನೆ. ಹೀಗಿರುವಾಗ ಗಾಂಧಿನಗರದ ಕಿಡಿಗೇಡಿಗಳು ಈತನಿಗೆ 'ಐರನ್ ಲೆಗ್ಗು' ಎಂಬ ಹಣೆಪಟ್ಟಿ ಬೇರೆ ಹಚ್ಚಿದ್ದಾರೆ.

ಇಂಥ ಸಂದರ್ಭದಲ್ಲಿ ಪ್ರೇಮ್ ತನ್ನ ಪಾಲಿಗೆ ಬಂದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು, ತನ್ನ ಮೇಲಿನ ಕಳಂಕದಿಂದ ಪಾರಾಗಿ, ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಲ್ಲುವ ಪ್ರಯತ್ನ ಮಾಡುವುದನ್ನು ಬಿಟ್ಟು, ಚಿಲ್ಲರೆ ಗಲಾಟೆ ಮಾಡಿಕೊಂಡು, ತನ್ನ ಪ್ರತಿಭೆಯನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾನೆ.

ಸದ್ಯ ಕೆಲಸವಿಲ್ಲದೆ ಖಾಲಿ ಕೂತಿರುವ ಈ ಪ್ರೇಮ ಚಂದ್ರಮನಿಗೆ ನೆಟ್ಟಗಿರಲು ಅದ್ಯಾವ ಪುಣ್ಯಾಪುರುಷನ ಉಪದೇಶ ಬೇಕೋ? ಗೊತ್ತಿಲ್ಲ.

• ಅರುಣ್‌ಜಿ.
arunodayagc@gmail.com

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 30 -06-2010 RNI No. KARKAN2005/14648

ಬಿಕ್ಕಾರಿ ಬಾಸ್



ದರ್ಶನ ಪ್ರಲಾಪ ಯಾದವ ಪುರಾಣ

"ಇದು ನಟ ದರ್ಶನ್‌ನ ವ್ಯಾವಹಾರಿಕ ಬುದ್ಧಿಯ ಪರಮಾವಧಿಯಾ? ಅಥವಾ ನಿರ್ಮಾಪಕ ರಮೇಶ್ ಯಾದವ್ ಬರ್ಬಾದ್ ಆದ ಸೂಚನೆಯಾ? ಗೊತ್ತಿಲ್ಲ.

ಈಗ ದರ್ಶನ್ ಕ್ರೇಜೀ ಧರೆಗಿಳಿದಿರುವಾಗ ಆತ ನಟಿಸಿರುವ 'ಬಾಸ್' ಚಿತ್ರದ ಬಗ್ಗೆ ಯಾರೆಂದರೆ ಯಾರಿಗೂ ನಿರೀಕ್ಷೆಗಳಿಲ್ಲ. ಆದರೂ ದರ್ಶನ್ ಕಾರಣಕ್ಕಾಗಿ 'ಬಾಸ್' ಆಗಾಗ ಸುದ್ದಿಗೆ ಬರುತ್ತಿರುತ್ತದೆ.

ಮೂರು ವರ್ಷಗಳ ಹಿಂದೆ ದರ್ಶನ್‌ಗೆ ಸಿಕ್ಕಾಪಟ್ಟೆ ಮಾರ್ಕೆಟ್ ಇದ್ದಾಗ ಅವರ ಕಾಲ್‌ಶೀಟ್ ಪಡೆದ ರಮೇಶ್ ಯಾದವ್ 'ಬಾಸ್' ಚಿತ್ರವನ್ನು ಆರಂಭಿಸಿದ್ದರು. ಒಂದೇ ಸಮನೆ ಎರಡು ವರ್ಷಗಳಿಂದ ಈ ಚಿತ್ರದ ಕೆಲಸ ನಡೆಯುತ್ತಲೇ ಇದೆ. ಆದರೂ ಇನ್ನೂ ಬಿಡುಗಡೆಯಾಗುವ ಯಾವ ಲಕ್ಷಣವೂ ಕಾಣುತ್ತಿಲ್ಲ. ನಿರ್ಮಾಪಕ ರಮೇಶ್ ಯಾದವ್ ಒಂದಿಷ್ಟು ಸಾಲದ ಸುಳಿಯಲ್ಲಿ ಸಿಲುಕಿರುವುದರಿಂದ ಅವರ ನಿರ್ಮಾಣದ ಚಿತ್ರಗಳಿಗೂ ಭ್ರೂಣರೋಗ ಬಡಿದಂತೆ ಕಾಣುತ್ತಿದೆ.

ಈಗ್ಗೆ ಒಂದು ವರ್ಷದ ಮುಂಚೆ 'ರಮೇಶ್ ಯಾದವ್ ಸಂಭಾವನೆಯನ್ನು ಪಾವತಿ ಮಾಡಿಲ್ಲ' ಎಂಬ ಕಾರಣಕ್ಕೆ ದರ್ಶನ್ ಸಿನಿಮಾದ ಡಬ್ಬಿಂಗ್ ಮಾಡದೇ ಆಟಾಡಿಸಿಬಿಟ್ಟಿದ್ದ. ಈಗ ಬಂದಿರುವ ಸುದ್ದಿಯ ಪ್ರಕಾರ ರಮೇಶ್ ಯಾದವ್ ಇಪ್ಪತ್ತು ಲಕ್ಷ ರೂಪಾಯಿ ಬಾಕಿ ದುಡ್ಡು ಇನ್ನೂ ಕೊಡದೇ ಇರುವ ಕಾರಣ ದರ್ಶನ್ ಚಿತ್ರೀಕರಣಗೊಂಡ ಎರಡು ಮೂರು ಹಾಡುಗಳ ನೆಗೆಟೀವ್ ಡಬ್ಬಗಳನ್ನು ಹೊತ್ತೊಯ್ದು ತಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದಾರಂತೆ. ಈ ಕಾರಣಕ್ಕೇ ಸಿನಿಮಾ ಇನ್ನೂ ಬಿಡುಗಡೆಯಾಗಿಲ್ಲ ಎಂಬ ಗಾಳಿಸುದ್ದಿ ಹಬ್ಬಿದೆ. ಇದು ನಿಜವೋ ಸುಳ್ಳೋ? ಆದರೆ ರಮೇಶ್ ಯಾದವ್ ಮಾತ್ರ 'ನನ್ನ ನಿರ್ಮಾಣದ ಚಿತ್ರದ ನೆಗೆಟೀವ್ ಡಬ್ಬಗಳನ್ನು ದರ್ಶನ್ ಸೀಜ್ ಮಾಡಲು ಹೇಗೆ ಸಾಧ್ಯ? ಅದೆಲ್ಲಾ ಸುಳ್ಳು. ಸಿನಿಮಾ ಅಂದ್ಮೇಲೆ ಪರಸ್ಪರ ಮಿಸ್ ಅಂಡರ್‌ಸ್ಟಾಂಡಿಂಗ್ ಇದ್ದೇ ಇರುತ್ತೆ. ಹೀರೋ-ಪ್ರೊಡ್ಯೂಸರ್‌ಗಳ ನಡುವೆ ಸಣ್ಣಮಟ್ಟ ಜಗಳ ಮಾಮೂಲು... ನನ್ನ ಸಮಸ್ಯೆಗಳನ್ನೆಲ್ಲಾ ಇನ್ನು ಹತ್ತು ದಿನಗಳ ಒಳಗಾಗಿ ಪತ್ರಿಕಾಗೋಷ್ಠಿ ನಡೆಸಿ ಹೇಳ್ತೀನಿ' ಎಂದೆಲ್ಲಾ ಬಡಬಡಿಸುತ್ತಿದ್ದಾರೆ.

ಯಾವುದೇ ನಿರ್ಮಾಪಕ ಹೀರೋ ಒಬ್ಬನ ಕಾಲ್‌ಶೀಟ್‌ಗಾಗಿ ಅಗ್ರಿಮೆಂಟ್ ಮಾಡಿಸಿಕೊಂಡು, ಅದನ್ನು ಸಂಪೂರ್ಣ ತೀರಿಸಬೇಕಾದದ್ದು ಜವಾಬ್ದಾರಿ. ಆದರೆ ಕೆಲವೊಮ್ಮೆ ಚಿತ್ರಕ್ಕಾಗಿ ದುಡ್ಡು ಸುರಿದ ನಿರ್ಮಾಪಕ ತೀರಾ ಕಷ್ಟದಲ್ಲಿದ್ದಾಗ ಮಾನವೀಯ ದೃಷ್ಟಿಯಿಂದಲಾದರೂ ಸಂಭಾವನೆಯಲ್ಲಿ ಕಡಿತ ಮಾಡಿಕೊಂಡೋ ಅಥವಾ ಹಣ ಸಂದಾಯಕ್ಕೆ ಒಂದಿಷ್ಟು ಕಾಲಾವಕಾಶವನ್ನಾದರೂ ಕೊಡಬೇಕು. ಹಾಗೆ ನೋಡಿದರೆ, ದರ್ಶನ್ ಮತ್ತು ಯಾದವ್ ನಡುವಿನ ದೋಸ್ತಿ ಕೂಡಾ ಹೊಸದೇನಲ್ಲ. ಹಿಂದೆ ದರ್ಶನ್ ನಾಯಕನಾಗಿ ನಟಿಸಿದ್ದ 'ದಾಸ' ಎಂಬ ಚಿತ್ರವನ್ನು ಇದೇ ರಮೇಶ್ ಯಾದವ್ ನಿರ್ಮಿಸಿದ್ದರು. ಅದು ಹಿಟ್ ಆಗಿ ಒಳ್ಳೇ ಗಳಿಕೆಯನ್ನೂ ಮಾಡಿತ್ತು. ಈ ಹಳೇ ಸ್ನೇಹಕ್ಕಾದರೂ ದರ್ಶನ್ ಯಾದವ್‌ಗೆ ಒಂದಿಷ್ಟು ವಿನಾಯ್ತಿ ಕೊಡಬಹುದಿತ್ತು.

ದರ್ಶನ ಪ್ರಲಾಪ

ದುಡ್ಡಿನ ವಿಚಾರದಲ್ಲಿ ದರ್ಶನ್‌ನನ್ನು ಒಪ್ಪಿಸುವುದು ಅಸಾಧ್ಯ. ಹಿಂದೆ ನೂರಿನ್ನೂರು ರೂಪಾಯಿಗೆ ಕ್ಯಾಮೆರಾ ಅಸಿಸ್ಟೆಂಟ್ ಕೆಲಸ ಮಾಡುತ್ತಿದ್ದ, ಬಸ್‌ಚಾರ್ಜಿಗೂ ಕಾಸಿಲ್ಲದೆ ಬೆಂಗಳೂರಿನಿಂದ ಮೈಸೂರಿಗೆ ಟ್ರೈನ್‌ನಲ್ಲೇ ಅಪ್ ಅಂಡ್ ಡೌನ್ ಮಾಡುತ್ತಿದ್ದ ಹಸುಗಳ ಸಗಣಿ ಬಾಚುತ್ತಿದ್ದ ದರ್ಶನ್ ತನ್ನ ಹಿಂದಿನ ಕಷ್ಟದ ದಿನಗಳನ್ನೆಲ್ಲಾ ಮರೆತಂತೆ ಕಾಣುತ್ತಿದೆ. ಯಾಕೆಂದರೆ ದರ್ಶನ್ ಇತ್ತೀಚಿನ ದಿನಗಳಲ್ಲಿ ಅನ್ನದಾತ ನಿರ್ಮಾಪಕನಿಗೆ ಹೊರೆಯಾಗಿ ಪರಿಣಮಿಸಿದ್ದಾನೆ. ದರ್ಶನ್‌ನನ್ನು ಹಾಕಿಕೊಂಡ ನಿರ್ಮಾಪಕನಿಗೆ ಆತನಿಗೆ ಕೊಡುವ ಕೋಟಿ ರೂಪಾಯಿ ಸಂಭಾವನೆಯನ್ನು ಹೊರತುಪಡಿಸಿ ದಿನವೊಂದಕ್ಕೆ ಹದಿನೆಂಟರಿಂದ ಇಪ್ಪತ್ತು ಸಾವಿರ ರೂಪಾಯಿಯ ಎಕ್ಸ್‌ಟ್ರಾ ಖರ್ಚು ತಗುಲುತ್ತದೆ. ಈತನ ಕಾರ್‌ಡ್ರೈವರ್ ಬಾಟಾ, ಮೇಕಪ್ ಅಸಿಸ್ಟೆಂಟು, ಪರ್ಸನಲ್ ಕಾಸ್ಟೂಮರ್ರು, ಊಟೋಪಚಾರ... ಹೀಗೆ ಸಾವಿರಾರು ರೂಪಾಯಿಯನ್ನು ನಿರ್ಮಾಪಕ ನೀರಿನಂತೆ ವ್ಯಯಿಸಲೇ ಬೇಕು.

ಇನ್ನು ಪೇಮೆಂಟ್ ವಿಚಾರದಲ್ಲೂ ಅಷ್ಟೇ: ಒಂದೋ ಸೈಟು, ಜಮೀನಿನ ರೂಪದಲ್ಲಿ ಸಂಭಾವನೆ ಪಡೆಯುವ ದರ್ಶನ್ ಯಾವ ಕಾರಣಕ್ಕೂ ಚೆಕ್ ಪಡೆಯುವುದಿಲ್ಲ. ಈತನದ್ದೇನಿದ್ದರೂ ಕ್ಯಾಷ್ ವ್ಯವಹಾರ ಮಾತ್ರ. 'ಯೋಧ' ಚಿತ್ರಕ್ಕೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಚೆಕ್ ಕಳಿಸಿದ್ದಕ್ಕೆ ದರ್ಶನ್ ಅದನ್ನು ವಾಪಸು ಕಳಿಸಿ ನಗದುರೂಪದಲ್ಲೇ ಪಡೆದಿದ್ದ. ಹಣ ಸಂದಾಯವಾಗುವುದು ಒಂಚೂರು ಏರುಪೇರಾದರೂ ಶೂಟಿಂಗ್ ಕಟ್!

ಕೋಟಿಗಟ್ಟಲೆ ಸಂಭಾವನೆಯನ್ನು ನೀಡುವ ನಿರ್ಮಾಪಕರಿಗೆ ಅದೆಂಥ ಹಣೆಬರ ನೋಡಿ? ಇತ್ತೀಚೆಗೆ ತನ್ನದೇ 'ತೂಗುದೀಪ ಸಿನಿ ಯೂನಿಟ್' ಆರಂಭಿಸಿರುವ ದರ್ಶನ್, ತಾನು ನಟಿಸುವ ಚಿತ್ರಗಳಿಗೆ ತನ್ನದೇ ಚಿತ್ರೀಕರಣ ಘಟಕವನ್ನೇ ಉಪಯೋಗಿಸಬೇಕು ಎಂಬ ಷರತ್ತನ್ನೂ ಹಾಕುತ್ತಾನಂತೆ.

ಒಮ್ಮೊಮ್ಮೆ ದರ್ಶನ್ ಚಿತ್ರರಂಗದಲ್ಲಿ ಸಾಧಿಸಲು ಬಂದಿದ್ದಾನೋ ಅಥವಾ ಕಾಸು ಮಾಡುವುದೇ ಈತನ ಪರಮೋದ್ದೇಶವೋ ಅನ್ನಿಸುವ ಮಟ್ಟಿಗೆ ಈತ ಹಣದ ಹೆಗಲೇರಿ ಕುಳಿತಿದ್ದಾನೆ. ಚಿತ್ರರಂಗದಲ್ಲಿ ವ್ಯವಹಾರ ಚತುರತೆ, ಲೆಕ್ಕಾಚಾರ ಇರಲೇಕು. ಆದರೆ ದರ್ಶನ್ ವಿಚಾರದಲ್ಲಿ ಇದು ಅತಿಯಾಗಿದೆ. ಎಷ್ಟಾದರೂ ಈತ ಕಾಸಿಗಾಗಿ ಕಾಚಾದಲ್ಲೂ ನಟಿಸುವ ಕಲಾವಿದನಲ್ಲವೇ?

ಯಾದವ ಪುರಾಣಂ

ಯಾರದೇ ಚಿತ್ರ ಹಿಟ್ ಆಗಲಿ ಅವರ ಕೈಗೊಂದಿಷ್ಟು ಅಡ್ವಾನ್ಸ್ ನೀಡಿ ಬುಕ್ ಮಾಡುವುದು ಯಾದವ್ ಸಂಪ್ರದಾಯ. 'ಮುಂಗಾರು ಮಳೆ' ಹಿಟ್ ಆಗುತ್ತಿದ್ದಂತೇ ಇಮ್ಮಿಡಿಯೆಟ್ ಆಗಿ ಕಾಮಿಡಿ ಗಣೇಶನ ಕಾಲ್‌ಶೀಟನ್ನು ತೀರಾ ಅಗ್ಗದ ಬೆಲೆಗೆ ಪಡೆದು 'ಕೃಷ್ಣ' ಚಿತ್ರವನ್ನು ನಿರ್ಮಿಸಿದ್ದವರು ಯಾದವ್.

ಅದೇ ರೀತಿ ವರ್ಷದ ಹಿಂದೆ ರಮೇಶ್ ಯಾದವ್ 'ಕಿಚ್ಚ' ಸುದೀಪ್ ಕೈಗೆ ಇಪ್ಪತ್ತು ಲಕ್ಷ ಅಡ್ವಾನ್ಸ್ ನೀಡಿದ್ದರು. ಈ ವಿಚಾರದಲ್ಲಿ ಸುದೀಪ್ ಮತ್ತು ರಮೇಶ್ ಯಾದವ್ ನಡುವೆಯೂ ಹಣಕಾಸಿನ ವಿಚಾರದಲ್ಲಿ ಸಿಕ್ಕಾಪಟ್ಟೆ ಕಿತ್ತಾಟವಾಗಿತ್ತು. "ನಾನು ಕೊಟ್ಟ ಅಡ್ವಾನ್ಸ್ ಪಡೆದ ಸುದೀಪ್ ನನಗೆ ಡೇಟ್ಸ್ ಕೊಡದೇ ಒಂದು ವರ್ಷದಿಂದ ಸತಾಯಿಸುತ್ತಾ ಬಂದಿದ್ದಾರೆ. ಆ ಇಪ್ಪತ್ತು ಲಕ್ಷವನ್ನು ಹಿಂದಕ್ಕೆ ಕೊಡಿಸಿ" ಎಂದು ಸುದೀಪ್ ಮೇಲೆ ಗೂಬೆ ಕೂರಿಸಿ ಯಾದವ್ ಚೇಂಬರ್ ಮೆಟ್ಟಿಲನ್ನೂ ಹತ್ತಿದ್ದರು. ಸುದೀಪ್ ಕೂಡಾ ಆಗ ರಮೇಶ್ ಯಾದವ್ ವಿರುದ್ಧ ಎಗರಿಬಿದ್ದಿದ್ದರು. "ಅಡ್ವಾನ್ಸ್ ಕೊಟ್ಟಿದ್ದು ನಿಜ. ಆದರೆ ಕತೆ ಹೇಳಿದ್ದಾರಾ? ನಿರ್ದೇಶಕರನ್ನು ಕರೆದುಕೊಂಡು ಬಂದಿದ್ದಾರಾ? ಅಥವಾ ನನ್ನ ಬಳಿ ಫೋನ್‌ನಲ್ಲಿ ಯಾವತ್ತಾದರೂ ಇದರ ಬಗ್ಗೆ ಚರ್ಚೆ ಮಾಡಿದ್ದಾರಾ? ನನಗೊಪ್ಪುವ, ಇಷ್ಟವಾಗುವ ಕತೆ ತಂದರೆ ನಾನು ಈಗಲೂ ಡೇಟ್ಸ್ ಕೊಡಲು ತಯಾರಿದ್ದೇನೆ. ಅದು ಬಿಟ್ಟು ಅಡ್ವಾನ್ಸ್‌ಗೆ ಬಡ್ಡಿ ಸೇರಿಸಿ ಹಣ ನೀಡಿ ಎಂದರೆ, ನಾನೇನು ಬಡ್ಡಿ ವ್ಯಾಪಾರೀನಾ?" ಎಂದು ರಮೇಶ್ ಯಾದವ್‌ರನ್ನು ಎಕ್ಕಳಿದಿದ್ದರು. ಕಡೆಗೆ ಇವರಿಬ್ಬರ ವ್ಯಾಜ್ಯ ಛೇಂಬರ್‌ನಲ್ಲಿ ಬಗೆಹರಿದಿತ್ತು.

ಗಣೇಶ್ ನಟಿಸಿದ್ದ 'ಕೃಷ್ಣ'ದ ನಂತರ ರಮೇಶ್ ಯಾದವ್ ಯಾವ ಚಿತ್ರಕ್ಕೆ ಕೈಯಿಟ್ಟರೂ ಏಳಿಗೆಯೇ ಆಗುತ್ತಿಲ್ಲ. 'ಅಕ್ಕ-ತಂಗಿ' ಎಂಬ ಸದಭಿರುಚಿಯ ಸಿನಿಮಾ ಮಾಡಿದರೂ ಯಾದವ್‌ಗೆ ಹಣಕಾಸಿನ ವಿಚಾರದಲ್ಲಿ ಲಾಭವಾಗಲಿಲ್ಲ. ಪ್ರಜ್ವಲ್ ದೇವರಾಜ್ ನಟಿಸಿದ 'ಕೆಂಚ' ಚಿತ್ರ ಕೂಡಾ ಇದೇ ರೀತಿ ವರ್ಷಗಟ್ಟಲೆ ಚಿತ್ರೀಕರಣಗೊಂಡಿತ್ತು. ಆದರೆ ರಮೇಶ್ ಯಾದವ್ ಆ ಚಿತ್ರಕ್ಕೆ ಹೂಡಿದ ಬಂಡ ವಾಳಕ್ಕೆ ಎದುರಾಗಿ ಪುಡಿಗಾಸೂ ವಾಪಸು ಬರಲಿಲ್ಲ. ಇನ್ನು ದಿನೇಶ್ ಬಾಬು ನಿರ್ದೇಶನದಲ್ಲಿ 'ನೆನಪಿರಲಿ'ಪ್ರೇಂ ನಟಿಸಿರುವ 'ಜನುಮ ಜನುಮದಲ್ಲೂ' ಚಿತ್ರ ಮುಕ್ತಾಯವಾಗಲು ಇನ್ನೊಂದು ಜನ್ಮವೇ ಬೇಕು. ಇದೆಲ್ಲದರ ಜೊತೆಗೆ ರಮೇಶ್ ಯಾದವ್ ಈ ಎಲ್ಲ ಸಿನಿಮಾಗಳಿಗಾಗಿ ಐಡಿಬಿಐ ಬ್ಯಾಂಕ್‌ನಲ್ಲಿ ಹೇರಳವಾದ ಸಾಲ ಪಡೆದಿರುವುದರಿಂದ ಅದೆಲ್ಲ ಚುಕ್ತಾ ಆಗುವವರೆಗೂ ಬ್ಯಾಂಕ್‌ನವರು ಎನ್‌ಓಸಿ ಕೊಡುವುದಿಲ್ಲ.

ಕಮರ್ಷಿಯಲ್ ಸಿನಿಮಾಗಳನ್ನು ನಿರ್ಮಿಸಲು ರಮೇಶ್ ಯಾದವ್ ಇಷ್ಟೆಲ್ಲಾ ಏದುಸಿರುಬಿಡುತ್ತಿದ್ದಾರೆ. ಆದರೆ ಇವರ ಪ್ರೊಡಕ್ಷನ್‌ನಲ್ಲಿ ಬರಗೂರರ ಸಿನಿಮಾಗಳು ಮಾತ್ರ ತುಂಬಾ ಬೇಗ ತಯಾರಾಗಿಬಿಡುತ್ತವೆ. ಈಗಾಗಲೇ 'ಶಾಂತಿ', 'ಶಬರಿ' ಚಿತ್ರಗಳನ್ನು ನಿರ್ಮಿಸಿ ರುವ ಯಾದವ್, ಆ ಚಿತ್ರಗಳಿಗೆ ಸರ್ಕಾರಿ ಸಬ್ಸಿಡಿ ಮತ್ತು ಸುಮಾರಾದ ಟೀವಿ ರೈಟ್ಸ್ ಕೂಡಾ ಸಿಗುವುದರಿಂದ ಹಿಂದು ಮುಂದು ನೋಡದೆ ಸುತ್ತಿಬಿಡುತ್ತಾರೆ.

ಆದರೆ ಇತ್ತೀಚಿನ ದಿನಗಳಲ್ಲಿ ರಮೇಶ್ ಯಾದವ್‌ಗೆ ತೊಡಕಾಗುತ್ತಿರುವುದೇ ಸ್ಟಾರ್ ನಟರ ಚಿತ್ರಗಳಲ್ಲಿ. ಯಾವಾಗಲೋ ಪಡೆದ ಕಾಲ್‌ಶೀಟಲ್ಲಿ ಸಿನಿಮಾ ಮುಗಿಸುವ ಹೊತ್ತಿಗೇ ಆ ನಟರ ಮಾರ್ಕೆಟ್ಟೇ ಬಿದ್ದುಹೋಗಿರುತ್ತದೆ. ಪ್ರಜ್ವಲ್‌ನ 'ಕೆಂಚ' ಮತ್ತು ದರ್ಶನ್‌ನ 'ಬಾಸ್'ನಲ್ಲಿ ಯಾದವ್‌ಗೆ ಆಗಿರುವುದೂ ಇದೇ.

ಒಟ್ಟಾರೆ ನೋಡಿದರೆ, ದರ್ಶನ್‌ನಂಥ ಛಾಲೆಂಜಿಂಗ್ ಸ್ಟಾರ್‌ನ ಸಿನಿಮಾ ಬಿಡುಗಡೆಯ ಭಾಗ್ಯವನ್ನೇ ಕಾಣದೇ ಹೀಗೆ ಹಳಸಿ ನಾರುತ್ತಿದೆ. ರಮೇಶ್ ಯಾದವ್ ಮತ್ತು ದರ್ಶನ್ ಮಧ್ಯೆ ನಡೆಯುತ್ತಿರುವ ಯದ್ವಾತದ್ವಾ ಗುದ್ದಾಟದ ಸದ್ದು ಜೋರಾಗೇ ಅಪ್ಪಳಿಸುತ್ತಿದೆ. 'ಬಾಸ್' ಬೋರ್ಡಿಗಿಲ್ಲದ ಬಿಕಾರಿಯಂತೆ ಭಾಸವಾಗುತ್ತಿದ್ದಾನೆ..!

● ಅರುಣ್‌ಕುಮಾರ್ ಜಿ.
arunodayagc@gmail.com



ಮೇಘವೇ...



"ಪರಭಾಷೆಯ ನಟ ಅಥವಾ ನಟಿ ಕನ್ನಡ ಚಿತ್ರವೊಂದರಲ್ಲಿ ನಟಿಸಿದರೆ ನಮ್ಮ ಉದ್ಯಮ ಮತ್ತು ಮಾಧ್ಯಮದವರು ಅದನ್ನು ದೊಡ್ಡ ವಿಷಯವನ್ನಾಗಿ ಮಾಡುತ್ತಾರೆ. ಆದರೆ ಅದೇ ನಮ್ಮ ನಾಯಕ ಅಥವಾ ನಾಯಕಿ ಪರಭಾಷಾ ಚಿತ್ರವೊಂದರಲ್ಲಿ ನಟಿಸಿದರೆ ಅದನ್ನು ಇವರೇ ಟೀಕಿಸುತ್ತಾರೆ. ಇದ್ಯಾವ ನ್ಯಾಯ? ವಾಸ್ತವವಾಗಿ ಪರಭಾಷಾ ಚಿತ್ರಗಳಲ್ಲಿ ನಟಿಸುವ ನಮ್ಮ ಕಲಾವಿದರನ್ನು ಉದ್ಯಮ ಮತ್ತು ಮಾಧ್ಯಮದವರು ಪ್ರಶಂಸಿಸಬೇಕು" ಹೀಗೆಂತ ಒಂದು ವಾದವನ್ನು ನಮ್ಮ ಮುಂದಿಟ್ಟವರು ಸುಂದರರಾಜ್ ಮತ್ತು ಪ್ರಮೀಳಾ ಜೋಷಾಯ್.

ಈ ತಾರಾ ದಂಪತಿಗಳು ಮುಂದಿಟ್ಟ ವಾದ ಒಂದು ರೀತಿಯಲ್ಲಿ ಸರಿಯೆನಿಸಿತು. "ಸುಮಾರು ಮುನ್ನೂರೈವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ನಂತರ ಈಗ ತನ್ನ ಇಳಿವಯಸ್ಸಿನಲ್ಲಿ ಮಮ್ಮುಟ್ಟಿ ಕನ್ನಡಕ್ಕೆ ಬಂದರೆ ಅದ್ಯಾವ ದೊಡ್ಡ ವಿಷಯ? ಅದರಿಂದ ಕನ್ನಡ ಚಿತ್ರರಂಗಕ್ಕೇನು ಲಾಭ? ಅದೇ ತರಹ ಶಿಲ್ಪಾ ಶೆಟ್ಟಿಯ ಸೊಂಟದ ಅಳತೆ ದೊಡ್ಡದಾದ ನಂತರ ಆಕೆ ಕನ್ನಡದಲ್ಲಿ ನಟಿಸಲು ಬಂದಳು. ಆ ಚಿತ್ರ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿತು ಎಂಬುದು ಬೇರೆ ವಿಷಯ. 'ಲಗಾನ್' ಚಿತ್ರದ ನಾಯಕಿ ಗ್ರೇಸಿ ಸಿಂಗ್ ಕನ್ನಡದಲ್ಲಿ ನಟಿಸುವುದು ಪ್ರಪಂಚದ ಎಂಟನೆ ಅದ್ಭುತವೇನೋ ಎಂಬಂತೆ ನಿರ್ದೇಶಕ ನಾಗೇಂದ್ರ ಪ್ರಸಾದ್ ಬಣ್ಣಿಸಿದ್ದರು. ಆದರೆ ಆಕೆ ನಟಿಸಿದ 'ಮೇಘವೇ ಮೇಘವೆ' ಮೊದಲ ದಿನವೇ ಥಿಯೇಟರ್ ಬಿಕೋ ಅನಿಸುವಂತೆ ಮಾಡಿತು. ಹೀಗಾಗಿ ಪರಭಾಷೆಯ ಕಲಾವಿದರು ಕನ್ನಡಕ್ಕೆ ಬಂದರೆ ಅದರ ಹಿಂದೆ ಅವರ ಸ್ವಾರ್ಥವಿರುತ್ತದೆಯೇ ವಿನಃ ಅವರ ಆಗಮನದಿಂದ ಕನ್ನಡ ಚಿತ್ರರಂಗವೇನೂ ಉದ್ಧಾರವಾದ ಉದಾಹರಣೆಯಿಲ್ಲ.

"ನಮ್ಮ ಚಿತ್ರರಂಗದವರ ಗೋಳಿದು. ಅವರಿಗೆ ಯಾವಾಗಲೂ ಪರಭಾಷಾ ನಾಯಕಿಯರ ಬಗ್ಗೆ ವ್ಯಾಮೋಹ ಹೆಚ್ಚು. ಹಾಗೆಯೇ ನಮ್ಮ ಮನೆಯಂಗಳದ ಸುವಾಸನೆ ಬೀರುವ ಮಲ್ಲಿಗೆ ಬಗ್ಗೆ ಯಾವಾಗಲೂ ದಿವ್ಯ ನಿರ್ಲಕ್ಷ್ಯ..."

ಸುಂದರ್‌ರಾಜ್ ಮತ್ತು ಪ್ರಮೀಳಾ ಜೋಷಾಯ್ ಇಂತಹ ಒಂದು ವಾದವನ್ನು ನಮ್ಮ ಮುಂದಿಡಲು ಒಂದ ಕಾರಣವೂ ಇತ್ತು. ಅದೇನೆಂದರೆ ಅವರ ಮುದ್ದಿನ ಮಗಳು ಮೇಘನಾ ಈ ಚಿತ್ರದಲ್ಲಿ ಯೋಗೇಶ್‌ಗೆ ನಾಯಕಿಯಾಗಿ ಕಾಣಿಸಿಕೊಳ್ಳುವ ಮುಖಾಂತರ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದಾಳೆ. ಇದು ಆಕೆ ನಟಿಸುತ್ತಿರುವ ಮೊದಲ ಕನ್ನಡ ಚಿತ್ರವಾದರೂ ಆಕೆ ಈಗಾಗಲೇ ತಮಿಳು, ತೆಲುಗು ಮತ್ತು ಮಲೆಯಾಳಂ ಚಿತ್ರಗಳಲ್ಲಿ ನಟಿಸಿದ ಅನುಭವವನ್ನು ಹೊಂದಿದ್ದಾಳೆ. ಕೇವಲ ಎರಡೇ ವರ್ಷಗಳಲ್ಲಿ ಮೇಘನಾ ಈಗ 'ಚತುರ್‌ಭಾಷ' ತಾರೆಯಾಗಿ ಕಂಗೊಳಿಸುತ್ತಿದ್ದಾಳೆ. ಈ ಬಗ್ಗೆ ಅವರಿಗೇನೂ ಅಂತಹ ಸಂತೋಷವಿಲ್ಲ. "ನಮ್ಮ ಹುಡುಗಿ, ನಮ್ಮ ಕಣ್ಣ ಮುಂದೆ, ನಮ್ಮ ನೆಲದಲ್ಲೇ, ನಮ್ಮ ಚಿತ್ರರಂಗದಲ್ಲೇ ಮೆರೆಯಬೇಕು" ಎಂಬುದು ಅವರ ಆಶೆಯಂತೆ.

ಸುಂದರ್‌ರಾಜ್- ಜೋಷಾಯ್ ತಾರಾದಂಪತಿಗಳ ಮುದ್ದಿನ ಮಗಳು ಮೇಘನಾ ಬೊಗಸೆ ಕಂಗಳ ಚೆಲುವೆ. ಈಗಿನ ಜಮಾನದ ಹುಡುಗಿಯರಂತೆ ಸುಖತ್ ಮಾಡ್ ಡ್ರೆಸ್‌ಗಳಲ್ಲಿ ಓಡಾಡುತ್ತಾಳೆ. ನಾಯಕಿಗೆ ಬೇಕಾದ ಸೌಂದ
ಮತ್ತು ದಷ್ಟಪುಷ್ಟವಾದ ಮೈಕಟ್ಟೂ ಈ ಹುಡುಗಿಗಿದೆ. ಆದ
ಈ ಹುಡುಗಿಗೆ ಈವರೆಗೆ ಕನ್ನಡದ ನಿರ್ದೇಶಕರು ಅವ
ಕಲ್ಪಿಸಿಕೊಡದಿರುವುದು ನಿಜಕ್ಕೂ ಆಶ್ಚರ್ಯ. ಹಾಗಂತ ಅ
ನಮ್ಮ ನಿರ್ದೇಶಕರ ತಪ್ಪು ಎಂದಲ್ಲ. ಅನೇಕ ನಿರ್ದೇಶ
ಈಕೆಯ ಕಾಲ್‌ಶೀಟ್‌ಗಾಗಿ ಪ್ರಯತ್ನಿಸಿದ್ದುಂಟು. ಆಗೆಲ್ಲಾ
ತಾರಾ ದಂಪತಿಗಳು ನಖರಾ ಮಾಡಿದ್ದರು! "ನಮ್ಮ ಮಗ
ಪುನೀತ್ ರಾಜ್‌ಕುಮಾರ್ ಜೊತೆ ನಾಯಕಿಯಾಗಿ ಚಿತ್ರರ
ಕಾಲಿಡಬೇಕು ಎಂಬುದು ನಮ್ಮ ಅಭಿಲಾಷೆ" ಎಂದು ಬ
ಅವಕಾಶಗಳನ್ನೆಲ್ಲ ಇವರಿಬ್ಬರು ತಿರಸ್ಕರಿಸಿದ್ದರಿಂದಲೇ ಈಕೆ ಪರಭಾ
ಹೋಗಬೇಕಾಗಿತ್ತು. ಕೊನೆಗೂ ಇವರಿಗೆ ಪುನೀತ್ ಕಾಲ್‌ಶೀ
ಸಿಗಲಿಲ್ಲ. ಹೀಗಾಗಿ ಮೇಘನಾ ತಮಿಳು-ತೆಲುಗಿಗೆ ವ
ಹೋದಳು. ಅದೇನೇ ಇರಲಿ, ಸದ್ಯಕ್ಕೆ ಕನ್ನಡಕ್ಕೆ ವಾಪಸಾಗಿರ
ಈ ಹುಡುಗಿಯ ವೃತ್ತಿ ಜೀವನ ವರ್ಣರಂಜಿತವಾಗಿರ
ಯಾಕೆಂದರೆ ಈಕೆಯ ಉನ್ನತಿಯನ್ನು ತಾರಾ ದಂಪತಿಗಳ
ಸುಂದರ್-ಪ್ರಮೀಳಾರವರು ಕನಸು ಕಂಡಿದ್ದರು. ಸುಂದರ್‌ರಾ
ಇನ್ನೂರು ಚಿತ್ರಗಳಲ್ಲಿ ನಟಿಸಿದ್ದರೆ, ಪ್ರಮೀಳಾ ಜೋಷಾ
ಎಂದೋ ಮುನ್ನೂರು ಚಿತ್ರಗಳ ಗಡಿಯನ್ನು ದಾಟಿದವರಾಗಿದ
ಇಬ್ಬರೂ ಕಮರ್ಷಿಯಲ್ ಚಿತ್ರಗಳ ಜೊತೆಜೊತೆಗೆ ಕಲಾ
ಚಿತ್ರಗಳಲ್ಲೂ ನಟಿಸಿ ತಮ್ಮ ಪ್ರತಿಭೆಯನ್ನು ಮೆರೆದವರು.

ಈ ಎಲ್ಲಾ ಹಿನ್ನೆಲೆಯಲ್ಲಿ ಮೂರು ಭಾಷೆಯ ಅನುಭ
ನಂತರ ಈಗ ಮೇಘನಾ 'ಪುಂಡ' ಚಿತ್ರದ ಮುಖಾಂತರ ಕನ್ನ
ಬಂದಿರುವುದು ಸ್ವಾಗತಾರ್ಹ. ಈ ಹುಡುಗಿ ಆಕೆ
ತಂದೆತಾಯಿಯ ತರಹ ಕನ್ನಡದಲ್ಲೇ ಮಿಂಚುತ್ತಾ ಹೆಸರು ಮಾಡ

● ಶ್ರೀ…
shenoylankesh@gmail.c

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar...